

ಬಿಡುಗಡೆಯಾದ ಕೂಡಲೇ ಮೊಮ್ಮಗನೊಂದಿಗೆ.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ12 ಸಂಚಿಕೆ42 ಅಕ್ಟೋಬರ್ 21,1990 ರೂ.1.50

ಭಾರತದ ನೆಲದಲ್ಲಿ ಮಂಡೇಲಾ

ಮಂಡೇಲಾ, ಮಂಡೇಲಾ, ಜಗತ್ತಿನಾದ್ಯಂತ ರಿಂಗಣಗುಣಿದ ಹೆಸರಿದು. ಕೋಟಿ ಕೋಟಿ ಕಂಠಗಳಿಂದ ಹೊರ-ಹೊಮ್ಮಿದ ಹೆಸರಿದು. ಕಪ್ಪು,ಬಿಳಿಯ, ಕಂದು ಬಣ್ಣದ ಜನರೆಲ್ಲರೂ, ಜಗತ್ತಿನೆಲ್ಲಾ ಧರ್ಮ ಪಂಗಡಗಳ ಜನರು ಕಾತರಿಸುವ ಹೆಸರು. ಅತಿ ದಕ್ಷಿಣದ ಆಸ್ಟ್ರೇಲಿಯಾದಲ್ಲಿ , ಪಾಶ್ಚಿಮಾತ್ಯ ದೇಶ ದೇಶಗಳಲ್ಲಿ ಹಿಮಾವೃತ ಪುಟ್ಟ ಪುಟ್ಟ ದ್ವೀಪಗಳಲ್ಲಿ ಎಲ್ಲೆಲ್ಲೂ ಮೊಳಗಿದ ಹೆಸರು. ಖಂಡ ಖಂಡಗಳ ಸಾಮ್ರಾಟರಾಗುವ ಕನಸು ಹೊತ್ತ ನವ ಸರ್ವಾಧಿಕಾರಿಗಳ ನೆತ್ತಿಯನ್ನು ಕುಕ್ಕಿದ ಹೆಸರು.

ಭಾರತ ಕಂಡ ಅಪ್ರತಿಮ ವ್ಯಕ್ತಿಗಳಲ್ಲಿ ಭಾರತದ ನೆಲದ ಮೇಲೆ ಹೆಜ್ಜೆಯಿಟ್ಟು, ಭಾರತೀಯರಿಗೆ ಧನ್ಯಭಾ-ವನೆಯನ್ನು ಮೂಡಿಸಿದ ಕೆಲವೇ ವ್ಯಕ್ತಿಗಳಲ್ಲಿ, ಭಾರತದ ಜನತೆ ತಮ್ಮದೇ ಮನೆಯುವನಂತೆ ಕಂಡ ಮಹಾನ್ ವ್ಯಕ್ತಿಗಳಲ್ಲಿ ಮಂಡೇಲಾ ಒಬ್ಬರು.

ಭಾರತಕ್ಕೆ ಹೆಜ್ಜೆಯಿಡುವ ಮೊದಲೇ ಭಾರತದಲ್ಲಿ ಹುಚ್ಚೆಬ್ಬಿಸಿದ ಈ ವ್ಯಕ್ತಿ ಭಾರತಕ್ಕೆ ಹೆಜ್ಜೆಯಿಟ್ಟ ಮೇಲೆ ಕೇಳಬೇಕೇ!! ಎಲ್ಲೆಲ್ಲೂ ಜನರ ಧಾವಂತ. ತಿರುಗಿದ ಕಡೆಯೆಲ್ಲಾ ಜಯ ಘೋಷ. ರಾಷ್ಟ್ರಪತಿ, ಪ್ರಧಾನಿಯಿಂದ ಮೊದಲ್ಗೊಂಡು ಕಂಡ ಕಂಡಲ್ಲೆಲ್ಲಾ ಹುಚ್ಚು ಹೊಳೆ. ಕವಿಗಳ ಕಾವ್ಯ ಉಕ್ಕೇರಿ ಹರಿಯಿತು. ಕಲಾಕಾರರ ಕುಂಚ ಆಫ್ರಿಕಾದ ಕತ್ತಲ ಬದುಕಿನತ್ತ ನೋಟ ಹರಿಸಿತು. ಯುವಕ ಯುವತಿಯರಲ್ಲಿ ಪುಲಕವನ್ನು ಮೂಡಿಸಿತು.

ಈ ಎಲ್ಲದಕ್ಕೆ ಕಳಸವಿಟ್ಟಂತೆ, 'ಇವ ನಮ್ಮವ, ಇವ ನಮ್ಮವ'ನೆಂಬ ಭಾವನೆಯ ಶಾಶ್ವತ ಕುರುಹೆಂಬಂತೆ, ಪ್ರಶಸ್ತಿಗೆ ಕೀರ್ತಿ ಸಂದಂತೆ 'ಭಾರತ ರತ್ನ ಪ್ರಶಸ್ತಿ' ಪ್ರಧಾನವಾಯಿತು.

ಗೋರ್ಬಚೇವ್‌ಗೆ ನೊಬೆಲ್ ಶಾಂತಿ ಪ್ರಶಸ್ತಿ

ಕೆಲವು ಪ್ರಶಸ್ತಿಗಳನ್ನು ಮಹಾನ್ ವ್ಯಕ್ತಿಗಳಿಗೆ ನೀಡಿದಾಗ ಆವ್ಯಕ್ತಿಗಳಿಗೆ ಗೌರವ ಸಂದುವ ಬದಲು, ಆ ಪ್ರಶಸ್ತಿಗೆ ಗೌರವ ಬರುತ್ತದೆ. ಇದು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿ ಮತ್ತು ಅಧ್ಯಕ್ಷ ಕಾಮ್ರೇಡ್ ಮಿಖೈಲ್ ಗೋರ್ಬಚೇವ್‌ರಿಗೆ ನೀಡಿರುವ 1990ರ ನೋಬಲ್ ಶಾಂತಿ ಪ್ರಶಸ್ತಿಯ ವಿಷಯ-ದಲ್ಲಿ ನೂರಕ್ಕೆ ನೂರು ನಿಜ.

ಗೋರ್ಬಚೇವ್‌ರ ಉಳಿದ ಯಾವುದೇ ನೀತಿಗಳ ಬಗ್ಗೆ ಏಷ್ಟಾದರೂ ಭಿನ್ನಾ-ಭಿಪ್ರಾಯಗಳಿರಬಹುದು, ಆದರೆ ಕಳೆದ 5 ವರ್ಷಗಳಲ್ಲಿ ವಿಶ್ವ ಶಾಂತಿಗೆ ಅವರ ಕೊಡುಗೆ ಬಗ್ಗೆ ಎರಡು ಮಾತಿಲ್ಲ. ಪಕ್ಷದ ಕಾರ್ಯದರ್ಶಿಯಾದ ,ಕೂಡಲೇ ಗೋರ್ಬಚೇವ್ ತಮ್ಮ 'ಶಾಂತಿ ಧಾಳಿ'ಯನ್ನು ಆರಂಭಿಸಿದರು. ಇದರಲ್ಲಿ ಮೊದ-ಲನೆಯದು 1985ರಲ್ಲಿ 'ಹಿರೋಷಿಮಾ ದಿನ' ಎಲ್ಲಾ ಪರಮಾಣು ಸ್ಫೋಟಗಳನ್ನು ಏಕಪಕ್ಷೀಯವಾಗಿ ನಿಲ್ಲಿಸುವ ಘೋಷಣೆ ಮತ್ತು ಪರಮಾಣು ಅಸ್ತ್ರಗಳನ್ನು ಪ್ರಥಮ-ವಾಗಿ ಸೋವಿಯತ್ ಒಕ್ಕೂಟ ಪ್ರಯೋಗಿಸುವುದಿಲ್ಲ ಎಂಬ ಘೋಷಣೆ. ತಾರಾ ಸಮರದ ಗುಂಗಿನಲ್ಲಿದ್ದ ರೇಗನ್ ಮತ್ತು ಅವರ ಮೋಡಿಯಲ್ಲಿದ್ದ ಪಶ್ಚಿಮದ ದೇಶ-ಗಳು ಇದಕ್ಕೆ ಪ್ರತಿಕ್ರಿಯಿಸಲಿಲ್ಲ. ಆದರೆ ಅದರ ನಂತರ ಕಾಂ. ಗೋರ್ಬಚೇವ್ ಒಂದರ ನಂತರ ಒಂದು ಶಾಂತಿ ಪ್ರಸ್ತಾಪಗಳನ್ನು ಮಾಡಲು ಆರಂಭಿಸಿದಾಗ, ನಾಟೋ ದೇಶಗಳು ಪ್ರತಿಕ್ರಿಯಿಸುವುದು, ಅಥವಾ ತಮ್ಮ ದೇಶಗಳ ಜನತೆಯ ವಿಶ್ವಾಸ ಕಳೆದು ಕೊಳ್ಳುವುದು ಇವೆರಡೇ ಆಯ್ಕೆ ಇದ್ದದ್ದು ಅವರಿಗೆ. ಏಕೆಂದರೆ ಗೋರ್ಬಚೇವ್ 'ಶಾಂತಿ ಧಾಳಿ' ಮತ್ತು ಗ್ಲಾಸ್‌ನೊಸ್ತ್ ಪೆರಸ್ತ್ರೋಯ್ಕಗಳ ಮೂಲಕ ಸುಧಾರಣೆಗಳಿಂದ ನಾಟೋ ದೇಶಗಳ ಶಾಂತಿಪ್ರಿಯ ಜನತೆ ಮತ್ತು ಇಡೀ ಜಗ-ತ್ತಿನ ಶಾಂತಿ ಚಳುವಳಿಗಳ ಮನಗೆದ್ದರು. ಸೋವಿಯತ್ ಶಾಂತಿ ಪ್ರಸ್ತಾಪಗಳ ಪ್ರಮಾಣಿಕತೆಯ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಸಾಮ್ರಾಜ್ಯಶಾಹಿಗಳು ಸೃಷ್ಟಿಸಿ ಭೀಕರ ಗುಮ್ಮನಂತೆ ಬಳಸುತ್ತಿದ್ದ 'ಸೋವಿಯತ್ ಬೆದರಿಕೆ' 'ಕಮ್ಯುನಿಸ್ಟ್‌ವಿಸ್ತರಣಾ-ವಾದ' 'ರಾಕ್ಷಸೀ ಸಾಮ್ರಾಜ್ಯ' ಮುಂತಾದ ವಾದಗಳು ಗಾಳಿಯಲ್ಲಿ ತೂರಿಹೊದವು. ಜಗತ್ತಿನಲ್ಲಿ ಶಾಂತಿ ಕದಡಲು ಎರಡೂ 'ಸೂಪರ್ ಪವರ್‌ಗಳು' ಕಾರಣ ಎಂಬ ನಂಬಿಕೆ ಹೋಗಿ ಅದು ನಿಜವಾಗಲೂ ಸಾಮ್ರಾಜ್ಯಶಾಹಿಯ ಒತ್ತಡದ ಫಲ ಎಂದು ಕಂಡುಕೊಳ್ಳುವಂತಾಯಿತು.

ಆ ಮೇಲೆ ಮಾಡಿದ ಹಲವು ಪ್ರಸ್ತಾಪಗಳು– ಮೂರು ಹಂತಗಳಲ್ಲಿ 2000ಕ್ರಿ.ಶ.ದ ಒಳಗೆ ಎಲ್ಲಾ ಅಣ್ವಸ್ತ್ರಗಳನ್ನು ನಿರ್ನಾಮ ಮಾಡುವ ಕಾರ್ಯಕ್ರಮ(ಜನವರಿ 1986), 1987ರಲ್ಲಿ ಮಧ್ಯ ಮತ್ತು ಹತ್ತಿರ ಹೋಗುವ ಕ್ಷಿಪಣಿಗಳನ್ನು ಯೂರೋ-ಪಿನಿಂದ ತೆಗೆದುಹಾಕುವ ಒಪ್ಪಂದ, ಸೋವಿಯತ್ ಸೈನ್ಯದಲ್ಲಿ ಕಡಿತ, ಪೂರ್ವ ಯೂರೋಪಿನಲ್ಲಿ ಸೋವಿಯತ್ ಸೈನ್ಯದ ಕಡಿತ, ಕೆಲವು ಪೂರ್ವಯೂರೋಪಿನ ದೇಶಗಳಿಂದ ಸೈನ್ಯ, ಟ್ಯಾಂಕುಗಳು ಇತ್ಯಾದಿ ವಾಪಸು, ಅಮೇರಿಕನ್ ಅಧ್ಯಕ್ಷರೊಡನೆ 4-5 ಶೃಂಗ ಸಭೆಗಳು, ಅಫಘಾನಿಸ್ತಾನದಿಂದ ಸೋವಿಯತ್ ಸೈನ್ಯ ವಾಪಸಾತಿ-- ಇತ್ಯಾದಿ ಗೋರ್ಬಚೇವ್‌ರ 'ಶಾಂತಿ ಧಾಳಿ' ಜಗತ್ತನ್ನು ಮೊದಲಿಗಿಂತಲೂ ಏಷ್ಟೋ ಸುರಕ್ಷಿತ ಸ್ಥಳವಾಗಿಸಿದೆ. ಅಣ್ವಸ್ತ್ರ ಸಮರದಸಾಧ್ಯತೆ ಇಲ್ಲವಾಗಿಲ್ಲದಿದ್ದರೂ, ಹಿಂದೆ ಸರಿದಿದೆ. ಇತ್ತೀಚಿಗಿನ ನಾಟೋದ ನಿರ್ಣಯಗಳು, ಅಮೇರಿಕನ್ ನೆಲೆಗಳಲ್ಲಿ ಕಡಿತ, ರಾಸಾಯನಿಕ ಶಸ್ತ್ರಾಸ್ತ್ರಗಳ ಬಗ್ಗೆ ಒಪ್ಪಂದ ನಾಟೋ ಸಹ 'ಶಾಂತಿ ಧಾಳಿ'ಯಲ್ಲಿ ಸೋತಿದೆ ಎಂದು ತೋರಿಸಿ ಕೊಟ್ಟಿದೆ. 'ಶೀತ ಸಮರ' ಮುಗಿದಿದೆ ಎಂಬ ಹೇಳಿಕೆಯನ್ನು ಪೂರ್ತಿ ಒಪ್ಪುವುದು ಕಷ್ಟವಾದರೂ, ಪೂರ್ಣವಾಗಿ ತಳ್ಳಿಹಾಕುವುದು ಅಷ್ಟೇ ಕಷ್ಟ.

ಪುಟ 8 ಕೆ →

'ಹಿಂದುಳಿಕೆಯ ಪರಿಕಲ್ಪನೆಯನ್ನು ದುರ್ಬಲಗೊಳಿಸಬೇಡಿ'

ಸುಪ್ರೀಂ ಕೋರ್ಟಿನ ಅಂತಿಮ ತೀರ್ಪಿನವರೆಗಿನ ಸಮಯವನ್ನು ಬಿಹಾರ-ದಲ್ಲಿ ಜ್ಯಾರಿಯಲ್ಲಿರುವ ಕರ್ಪೂರಿ ಠಾಕುರ್ ಸೂತ್ರದ ಆಧಾರದ ಮೇಲೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯ ಅನುಷ್ಟಾನದ ಬಗ್ಗೆ ಒಂದು ಸರ್ವಸಮ್ಮತ ಪರಿಹಾರ ಕಂಡುಕೊಳ್ಳಲು ಬಳಸಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಕ್ಟೋಬರ್ 4ರಂದು ನೀಡಿರ ಒಂದು ಹೇಳಿಕೆಯಲ್ಲಿ ಸರಕಾರವನ್ನು ಕೇಳಿಕೊಂಡಿದೆ. ಇದಕ್ಕಾಗಿ ಎಲ್ಲಾ ರಾಜಕೀಯ ಪಕ್ಷಗಳೊಡನೆ ಹಾಗೂ ಸಂಬಂಧಪಟ್ಟ ಎಲ್ಲ-ರೊಡನೆ ವ್ಯಾಪಕ ಮಾತುಕತೆ ನಡೆಸಬೇಕೆಂದೂ ಅದು ಒತ್ತಾಯಿಸಿದೆ.

ಈ ಸಂದರ್ಭದಲ್ಲಿ 80 ಸಂಸತ್ ಸದಸ್ಯರು(ಇದರಲ್ಲಿ ಕೇಂದ್ರಮಂತ್ರಿಗಳು, ಗೃಹ ಮಂತ್ರಿಗಳೂ ಇದ್ದಾರೆ) ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಜಾಟ್ ಮತ್ತಿತರನ್ನು ಸೇರಿಸಬೇಕೆಂದು ಪ್ರಧಾನಿಗಳಿಗೆ ಕೊಟ್ಟಿರುವ ಮನವಿ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳು ಎಂಬ ಪರಿಕ-ಲ್ಪನೆಯನ್ನೇ ದುರ್ಬಲಗೊಳಿಸುತ್ತದೆ ಎಂದು ಪಿ.ಬಿ. ಅಭಿಪ್ರಾಯ ಪಟ್ಟಿದೆ. ಸಂವಿಧಾ-ನದಲ್ಲಿ ಹೇಳಿರುವ ಮೀಸಲಾತಿಯ ಉದ್ದೇ-ಶದಿಂದ ದೂರ ಸೆಳೆಯುವ, ದಾರಿ ತಪ್ಪಿ-ಸುವ ಪ್ರಯತ್ನವಿದೆಂದು ಪಿ.ಬಿ. ಹೇಳಿದೆ. ಏಕೆಂದರೆ ಮಂಡಲ್ ಆಯೋಗ ಹಿಂದುಳಿದ ವರ್ಗಗಳನ್ನು ಗುರ್ತಿಸುವ ಒಂದು ಮಾನ ದಂಡ ನೀಡಿದೆ. ಶೈಕ್ಷಣಿಕವಾಗಿ ಹಿಂದುಳಿದ ಮತ್ತಿತರ ಸಮಾಜಿಕ ಆರ್ಥಿಕ ಸೂಚಕಗಳಲ್ಲಿ ರಾಜ್ಯ ಸರಾಸರಿಯ 25 ಶೇಕಡಾ ಕ್ಕಿಂತ ಹೆಚ್ಚಿ-ದ್ದವರನ್ನು ಹಿಂದುಳಿದ ಪಟ್ಟಿಯಲ್ಲಿ ಸೇರಿಸಲಾ-ಗಿದೆ.

ಈ ಹಿನ್ನೆಲೆಯಲ್ಲಿ ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಲ್ಲದ ಕೋಮುಗಳ ಬಡ ವಿಭಾಗಗಳಿಗೆ ಸ್ವಲ್ಪಮಟ್ಟಿನ ಮೀಸಲಾ-ತಿಯ ಪ್ರಸ್ತಾಪವನ್ನು ಸಿಪಿಐ(ಎಂ) ಬೆಂಬಲಿ-ಸಿದೆ ಎಂದು ಪಿ.ಬಿ. ಹೇಳಿದೆ.

'ಹೈ ಕಮ್ಯಾಂಡ್ ದಾರಿ ಕಾಯುತ್ತಾ.........'

ಸಿಪಿಐ(ಎಂ) ಪಕ್ಷ ರಾಷ್ಟ್ರಪತಿ ಆಳ್ವಿಕೆಯನ್ನು ಯಾವಾಗಲೂ ವಿರೋಧಿಸಿದೆ. ಇತ್ತೀಚೆಗೆ ಕರ್ನಾಟಕದ ಮೇಲೆ ರಾಷ್ಟ್ರಪತಿ ಆಡಳಿತ ಬಂದೆರಗಿದಾಗ ಪಕ್ಷದ ಅದನ್ನು ದುರದೃಷ್ಟಕರ-ವಾದದ್ದಲ್ಲದೆ ಶೀಘ್ರವಾಗಿ ಪ್ರಜಾಸತ್ತಾತ್ಮಕ ಪ್ರತಿಕ್ರಿಯೆ ಆರಂಭವಾಗಬೇಕೆಂದು ಒತ್ತಾಯಿಸಿತ್ತು. ರಾಷ್ಟ್ರಪತಿ ಆಳ್ವಿಕೆಯನ್ನು ಹಿಂದೆಗೆದು ಸರಕಾರವನ್ನು ರಚಿಸಲು ಹಾಗೂ ತನ್ನ ಬಹುಮತವನ್ನು ವಿಧಾನ ಸಭೆಯ ಅಧಿವೇಶನದಲ್ಲಿ ಸಾಬೀತು ಮಾಡಲು ಆಹ್ವಾನಿಸಿ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಆರಂಭಿಸಿರುವುದನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸ್ವಾಗತಿಸಿದೆ.

ಹೀಗೆ ಕಾಂಗ್ರೆ ಪಕ್ಷದ ಬಂಗಾರಪ್ಪನವರನ್ನು ಸಚಿವ ಸಂಪುಟ ರಚಿಸಲು ಆಹ್ವಾನಿಸಿದಾಗ ಅವರೊಡನೆ ಇನ್ನೂ ಆರು ಜನ ಸಚಿವರು ಪ್ರಮಾಣ ವಚನ ಸ್ವೀಕರಿಸದಿರುವುದು ಈ ಪಕ್ಷ-ದಲ್ಲಿ ಸರ್ವಾಧಿಕಾರ ಹಿಡಿತ ಎಷ್ಟು ಪ್ರಭಲವಾಗಿದೆ ಎಂಬುದು ಹಾಗೂ ಒಳ ಗುಂಪುಗಾರಿಕೆ ಎಷ್ಟು ತೀವ್ರವಾಗಿದೆಯೆಂಬುದು ವ್ಯಕ್ತವಾಗುತ್ತದೆಂದು ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ. ಜನರಿಂದ ಚುನಾಯಿತರಾದ ಶಾಸಕರ ಅಭಿಪ್ರಾಯದ ಮೇಲೆ ಅವಲಂಬಿಸುವುದಕ್ಕೆ ಬದಲಾಗಿ ಪ್ರತಿಯೊಂದಕ್ಕೂ ಹೈ ಕಮಾಂಡಿನ ದಾರಿ ಕಾಯುತ್ತಾ ಕೂರುವ ಸರ್ವಾಧಿಕಾರಕ್ಕೆ ಮಣಿಯುವ ಈ ಪ್ರವೃತ್ತಿಯಿಂದ ರಾಜ್ಯದ ಜನರ ಹಿತಕ್ಕೆ ಹಾಗೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಹಾನಿಯಾಗುತ್ತದೆಂದು ಎಚ್ಚರಿಸಿದೆ.

'ಭಾಜಪದ ಗೊಡ್ಡು ಬೆದರಿಕೆಗೆ ಮಣಿ ಯದಿರಿ'

ಇತ್ತೀಚೆಗೆ ರಾಮಜ್ಯೋತಿ, ರಥಯಾತ್ರೆಗಳು ಹಾಗೂ ಅಕ್ಟೋಬರ್ 30ರಂದು ಅಯೋ-ಧ್ಯೆಯಲ್ಲಿ ಮಸೀದಿಯನ್ನು ಕೆಡವಿ ಅದರ ಸ್ಥಾನದಲ್ಲಿ ರಾಮ ದೇವಾಲಯ ನಿರ್ಮಾಣ ಪ್ರಾರಂಭದ ಗಡುವು ಹತ್ತಿರ ಬಂದಂತೆ ರಾಷ್ಟ್ರಗಳಲ್ಲೆಲ್ಲಾ ಕೋಮು ಗಲಭೆಗಳು ಹೆಚ್ಚುತ್ತಾ ನಡೆದಿದೆ. ರಾಷ್ಟ್ರದ ರಾಜಧಾನಿ ದಹಲಿಯಲ್ಲಿಯೂ ಉಲ್ಬಣಗೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಈ ವಿವಾದವನ್ನು ಬಗೆಹರಿಸಲು ಸೇರಿದ್ದ ಸರ್ವಪಕ್ಷಗಳ ಸಭೆಯನ್ನು ಒಂದೆಡೆ ಬಿಜೆಪಿ ಹಾಗೂ ಮತ್ತೊಂದೆಡೆ ಕಾಂಗ್ರೆ ಪಕ್ಷಗಳು ಬಹಿಷ್ಕರಿಸುವುದನ್ನು ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡಿಸುತ್ತದೆ. ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಈ ವಿವಾದದ ಪರಿಹಾರಕ್ಕೆ ತನ್ನ ಎಲ್ಲಾ ಸಹಕಾರ-ದೆಯೆಂದು ಘೋಷಿಸಿ ಈಗ ಸರ್ವಪಕ್ಷಗಳ ಸಭೆಯಲ್ಲಿ ಮಾತುಕತೆಯ ಮೂಲಕ ಬಗೆಹರಿಸುವ ಪ್ರಯತ್ನಕ್ಕೆ ತನ್ನ ಕೈ ಜೋಡಿಸದ ಕಾಂಗ್ರೆಸ ನಡವಳಿಕೆ ಅದರ ಸಂದರ್ಭಸಾಧಕತನವನ್ನು ಬಯ-ಲುಗೆಳೆಯುತ್ತದೆ ಎಂದ ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಟ್ಟಿದೆ. ಈ ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಲು ಮಾಡುವ ಯತ್ನಗಳನ್ನು [illegible] ಹಾಗೂ ಎಲ್ಲಾ ರಾಜಕೀಯ ಪಕ್ಷಗಳೂ ಮನವಿ ಮಾಡಿದರೂ ಆಹ್ವಾನಿಸಿದರೂ ರಥಯಾತ್ರೆಯನ್ನು ಹಿಂತೆಗೆಯದ ಭಾಜಪ ಈಗ ರಾಷ್ಟ್ರೀಯ ರಂಗ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆಯುತ್ತೇವೆಂದು ಬೆದರಿಸುವ ನಿರ್ಣಯ ಮಾಡಿರುವುದು ಧರ್ಮವನ್ನು ದೇವಾಲಯ ನಿರ್ಮಾಣವನ್ನು [illegible] ಗದ್ದುಗೆಯೇರುವ ತನ್ನ ಹಂಬಲದ [illegible] ಮಾಡುವ ನೀತಿಯನ್ನು ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡಿಸುತ್ತದೆ. ಭಾಜಪದ ಗೊಡ್ಡು ಬೆದರಿಕೆಗೆ [illegible] ಸಮಗ್ರತೆಯನ್ನು [illegible] ತನ್ನ [illegible] ದೃಢನಿರ್ಧಾರಮಾಡಬೇಕೆಂದು ರಾಷ್ಟ್ರೀಯ ರಂಗ ಸರಕಾರವನ್ನು ಒತ್ತಾಯಿಸುತ್ತದೆ.

ಜಾತ್ಯಾತೀತತೆಯ ರಕ್ಷಣೆಯ ಹೋರಾಟ ಪ್ರಜಾಪ್ರಭುತ್ವ ರಕ್ಷಣೆಯ ಹೋರಾಟ

(ಪಿ.ಠಿ. ಸಂಪಾದಕೀಯ)

ದೇಶದ ಜಾತ್ಯಾತೀತ ಶಕ್ತಿಗಳು ಶಂಕಿಸಿದಂತೆಯೇ ನಡೆಯುತ್ತಿದೆ. ದೇಶಾದ್ಯಂತ ಕೋಮು ಗಲಭೆಗಳ ಸರಮಾಲೆಯೇ ಆರಂಭವಾಗಿದೆ. ಉತ್ತರ ಪ್ರದೇಶದ ಗೋಂಡಾದಲ್ಲಿ 37 ಜೀವಗಳ ಬಲಿಯಾಗಿವೆ. ಕರ್ನಾಟಕದ ಚನ್ನಪಟ್ಟಣದಲ್ಲಿ 20 ಜೀವಗಳ ಬಲಿಯಾಗಿವೆ. ಅಪಾಯಕಾರೀ ಅಂಶವೆಂದರೆ ಈ ದಂಗೆಗಳು ಹಳ್ಳಿಗಳಿಗೂ ಹಬ್ಬುತ್ತಿವೆ. ಗೋಂಡಾದ ಸುತ್ತಮುತ್ತ 23 ಹಳ್ಳಿಗಳನ್ನು ವ್ಯಾಪಿಸಿದೆ.

ಇಂತಹ ಪರಿಸ್ಥಿತಿ ಇದ್ದಕ್ಕಿದ್ದಂತೆ ಆಕಾಶದಿಂದ ದೊಪ್ಪನೆ ಬಿದ್ದದ್ದಲ್ಲ. ಕಳೆದ ಎರಡು ವರ್ಷಗಳಿಂದ ಇದು ಬುರುಗುಡುತ್ತಿತ್ತು. ಕಳೆದ ಕೆಲವು ತಿಂಗಳಿಂದ ಹುಟ್ಟಿಸಿದ ತಿಕ್ಕಾಟದ ನಿಲುವಿನ, ಕೋಮು ದ್ವೇಷದ ವಾತಾವರಣ ಪರಿಸ್ಥಿತಿಯನ್ನು ಸ್ಫೋಟಕ ಮಟ್ಟಕ್ಕೆ ತಂದು ನಿಲ್ಲಿಸಿದೆ. ಕಳೆದ ಮೇ ತಿಂಗಳಲ್ಲಿ ನವದೆಹಲಿಯ ಮಾವಳಂಕರ್ ಹಾಲ್‌ನಲ್ಲಿ ನಡೆದ ಕೋಮುವಾದ-ವಿರೋಧಿ ಸಮಾವೇಶ ಈಬಗ್ಗೆ ಎಚ್ಚರಿಕೆ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಕೆಲವು ತಿಗಳ ಹಿಂದಿನವರೆಗೂ ಬಿಜೆಪಿ ಕೋಮುಸಂಘಟನೆಯಾದ ವಿಎಚ್‌ಪಿ, ಭಜರಂಗದಳ ಇತ್ಯಾದಿಗಳಿಂದ ತಾನು
ಪ್ರತ್ಯೇಕ ಎಂದು ಬಾಯಿಯಿಂದಲಾದರೂ ಹೇಳಿ ತಾನು ಜಾತ್ಯಾತೀತ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು- ಅದರ ಜಾತ್ಯಾತೀತತೆಯ ಅರ್ಥ ಏನೇ ಇದ್ದರೂ. ಆದರೆ ಈಗ ಅದು ಧಾರ್ಮಿಕ ಅಂಧಾಭಿಮಾನಿಗಳ ಪ್ರವಾಹದಲ್ಲಿ ಸಂಪೂರ್ಣ ಬೆರೆತುಬಿಟ್ಟು ತಾನೇ ತನ್ನನ್ನು ಕೋಮುವಾದಿಗಳಿಂದ ಪ್ರತ್ಯೇಕಿಸಿಕೊಳ್ಳಲು ಹಾಕಿಕೊಂಡಿದ್ದ ಗೆರೆಯನ್ನು ಅಳಿಸಿಕೊಂಡಿದೆ.

'ರಾಮ ದೇಗುಲ ಕಟ್ಟುವಾಗ ತಾಯಿ ಭಾರತಿಯ ದೇಗುಲವನ್ನು ನಾಶ ಮಾಡದಿರಿ' ಎಂಬ ವಾಜಪೇಯಿಯವರೇ ಕೆಲವು ವಾರಗಳ ಹಿಂದೆ ಹೇಳಿದ ಮಾತನ್ನು ಕೋಮುವಾದೀ ಶಕ್ತಿಗಳ ಆಟಾಟೋಪದಲ್ಲಿ ಪೂರ್ಣ ಮರೆತು ಬಿಡಲಾಗಿದೆ. ಬಾಳ ಠಾಕ್ರೆಯ ಶಿವಸೇನೆಯ ಜತೆಗೂಡಿ ಹಿಂದೂ ಮತ ಬ್ಯಾಂಕ್ ಸೃಷ್ಟಿಸಿಲು ಬಿಜೆಪಿ ಹತಾಶ ಯತ್ನ ನಡೆಸಿದಂತಿದೆ. ಅಥವಾ ನ್ಯಾಯಾಲಯ ತೀರ್ಪಿಗೆ ಬದ್ಧತೆಯ ದಾರಿಗಳನ್ನು ತಿರಸ್ಕರಸಿ ಬಿಜೆಪಿ ತಿಕ್ಕಾಟದ, ಘರ್ಷಣೆಯ ಹಾದಿಯನ್ನೇ ಆರಿಸಿಕೊಂಡಿದೆ.

> 'ರಾಮ ದೇಗುಲ ಕಟ್ಟುವಾಗ ತಾಯಿ ಭಾರತಿಯ ದೇಗುಲವನ್ನು ನಾಶ ಮಾಡದಿರಿ' ಎಂಬ ವಾಜಪೇಯಿಯುವರೇ ಕೆಲವು ವಾರಗಳ ಹಿಂದೆ ಹೇಳಿದ ಮಾತನ್ನು ಕೋಮುವಾದೀ ಶಕ್ತಿಗಳ ಆಟಾಟೋಪದಲ್ಲಿ ಪೂರ್ಣ ಮರೆತು ಬಿಡಲಾಗಿದೆ. ಬಾಳ ಠಾಕ್ರೆಯ ಶಿವಸೇನೆಯ ಜತೆಗೂಡಿ ಹಿಂದೂ ಮತ ಬ್ಯಾಂಕ್ ಸೃಷ್ಟಿಸಿಲು ಬಿಜೆಪಿ ಹತಾಶ ಯತ್ನ ನಡೆಸಿದಂತಿದೆ.

ಬಿಜೆಪಿ ಮತ್ತು ವಿಎಚ್‌ಪಿ ಆಗಲೇ ಘೋಷಿಸಿಬಿಟ್ಟಿದ್ದಾರೆ-ರಾಮ ದೇಗುಲ ಒಂದು ಧಾರ್ಮಿಕ ಪ್ರಶ್ನೆ—ಅದು ನ್ಯಾಯಾಲಯದ ತೀರ್ಪಿಗೆ ಒಳಗಾಗುವುದಿಲ್ಲ!! ಹಿಂದೂಗಳ ಧಾರ್ಮಿಕ ಭಾವನೆಯ ತರ್ಕ ಹೂಡುವುದಾದರೆ 500 ವರ್ಷಗಳಿಂದ ಇರುವ ಮಸೀದಿಯ ಬಗ್ಗೆ ಮುಸ್ಲಿಮರ ಧಾರ್ಮಿಕ ಭಾವನೆಯೆಂಬ ತರ್ಕವೂ ಬರುವುದಿಲ್ಲವೇ? ಆಗ ಪರಿಹಾರವೇನು? ಶಾಂತಿಯುತ ಮಾತುಕತೆ ಅಥವಾ ನ್ಯಾಯಾಲಯದ ತೀರ್ಪಿಗೆ ಬದ್ಧತೆ-ಆದರೆ ಬಿಜೆಪಿಗೆ ಇವೆರಡೂ ಬೇಡ. ಅದು ಘರ್ಷಣೆಯ ಹಾದಿಯನ್ನೇ ಆರಿಸಿಕೊಂಡಿದೆ.

ದೇವರು, ಧರ್ಮ ಒಂದು ನೆಲದ ಕಾನೂನುಗಳಿಗೆ ಮಿರಿದ್ದು ಎಂಬ ವಾದ ಒಂದು ಮತೀಯ ಆಧಾರದ ಪ್ರಭುತ್ವದಲ್ಲಷ್ಟೇ ಸಾಧ್ಯ. ಒಂದು ಪ್ರಜಾಪ್ರಭುತ್ವದಲ್ಲಿ ಸಾಧ್ಯವಿಲ್ಲ. ಆದ್ದರಿಂದ ರಾಮಜನ್ಮ ಭೂಮಿ-ಬಾಬ್ರಿ ಮಸೀದಿ ವಿವಾದದಲ್ಲಿ ನ್ಯಾಯಾಲಯಗಳಿಗೆ ಏನೂ ಅಧಿಕಾರವಿಲ್ಲ ಎನ್ನುವ ಬೊಬ್ಬೆಯ ಮೂಲಕ ಬಿಜೆಪಿ ಪ್ರಜಾಪ್ರಭುತ್ವ ಕಾರ್ಯನಿರ್ವಹಣೆಯ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಬಿಟ್ಟಿದೆ. ತಾನು ಜಾತ್ಯಾತೀತ ಎಂಬ ಮಾತು ದೂರವಿರಲು, ಪ್ರಜಾಪ್ರಭುತ್ವ ಸಂಘಟನೆ ಎಂದು ಹೇಳಿಕೊಳ್ಳಲು ಅದಕ್ಕೆ ಈಗ ಆಧಾರವಿಲ್ಲವಾಗಿದೆ.

ಬಿಜೆಪಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿದ್ದರೆ ಅದು ಆಟದ ನಿಯಮಗಳನ್ನು ಪಾಲಿಸಬೇಕು ಅಂದರೆ ಸಂವಿಧಾನದ ಕಾನೂನುಗಳಿಗೆ ಮಾನ್ಯತೆ ನೀಡಬೇಕು. ಇಲ್ಲವಾದರೇ ತನಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ ಎಂದು ಹೇಳುವುದನ್ನು ನಿಲ್ಲಿಸಬೇಕು.

ಆದ್ದರಿಂದ ಈಗ ಕೋಮುವಾದದ ವಿರುದ್ಧ ಹೋರಾಟ ದೇಶದ ಜಾತ್ಯಾತೀತ ಹಂದರವನ್ನು ಕಾಪಾಡುವ ಹೋರಾಟ ಮಾತ್ರವೇ ಅಲ್ಲ, ದೇಶದ ಮೂಲಭೂತ ಪ್ರಜಾಪ್ರಭುತ್ವ ನೀತಿ--ನಿಯಮಗಳನ್ನು ರಕ್ಷಿಸುವ ಹೋರಾಟ ಕೂಡಾ. ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆ ಒಂದೇ ನಾಣ್ಯದ ಎರಡು ಮುಖಗಳು- ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಲಾಗದು.

ಆದರೆ ಬಿಜೆಪಿಗೆ ಇನ್ನೂ ಸಮಯವಿದೆ. ಜಾತ್ಯಾತೀತತೆಯ ವಿರುದ್ಧ ತನ್ನ 'ಧರ್ಮಯುದ್ಧ' ಜಾತ್ಯಾತೀತತೆಯನ್ನಷ್ಟೇ ಅಲ್ಲ, ಪ್ರಜಾಪ್ರಭುತ್ವವನ್ನು ನಾಶ ಮಾಡುವ ಯತ್ನ ಎಂದು ಅದು ಎಷ್ಟು ಬೇಗ ಅರಿತರೆ ಅಷ್ಟು ಒಳ್ಳೆಯದು. ಜ್ವಾಲೆ ಹತ್ತಿಸುವುದು ಬಹಳ ಸುಲಭ ಆರಿಸುವುದು ಅತೀ ಕಷ್ಟ. ಬಾಬ್ರಿ ಮಸೀದಿ ಕೆಡವಿ ರಾಮ ಮಂದಿರ ಕಟ್ಟುವ ಕೆಲಸ ಬಿಜೆಪಿಯ 'ಹಿಂದೂ ರಾಷ್ಟ್ರದ ಮೊದಲ ಹೆಜ್ಜೆಯಾಗಬಹುದು. ಆದರೆ ಇದು ಸಿಖ್, ಕ್ರಿಶ್ಚಿಯನ್, ಮುಸ್ಲಿಮ್ ಇನ್ನೂ ಏನೇನೋ 'ರಾಷ್ಟ್ರ' ಗಳಿಗೆ ಕುಮ್ಮಕ್ಕು ನೀಡುತ್ತದೆ ಎಂಬ ಜ್ಞಾನ ಬಿಜೆಪಿ ಮುಖಂಡರ ಕಲ್ಪನೆಗೆ ಇನ್ನೂ ನಿಲುಕಿದಂತಿಲ್ಲ.

ಆದರೂ ನಿರಾಸೆಗೆ ಎಡೆಯಿಲ್ಲ. ಸಂದರ್ಭ ಬಂದಾಗ ಎದ್ದು ನಿಲ್ಲಲು ಸಿದ್ಧರಿರುವ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳಿಗೆ ದೇಶದಲ್ಲಿ ಇನ್ನೂ ಬರವಿಲ್ಲ. ಮಿಲಿಯಗಟ್ಟಲೆ ಜನ ಆಗಲೇ ಮುಂದೆ ಬರುತ್ತಿದ್ದಾರೆ. ಇದು ಎಲ್ಲಾ ಜನ ವಿಭಾಗಗಳಿಗೆ ಎಲ್ಲಾ ಪ್ರದೇಶಗಳಿಗೆ ಹರಡಲೇಬೇಕು.

'ದಿ ಕಮ್ಯುನಿಸ್ಟ್' ಮತ್ತು 'ನೆಹರೂ ಗಿಟ್ಟಿಸಿದ ಬಹುಮಾನ'

1934ರಲ್ಲಿ ಯುವಲೀಗ್‌ನ ಒಂದು ಸಮ್ಮೇಳನ ಕಲ್ಕತ್ತಾದಲ್ಲಿ ಸೇರಿತ್ತು. ಈ ಸಮಾವೇಶಕ್ಕೆ ಯುವಕರಾಗಿದ್ದ ಅಬ್ದುಲ್ ಹಲೀಂ(ಇಂದಿನ ಪ.ಬಂಗಾಳ ಸ್ಪೀಕರ್), ಸರೋಜ್ ಮುಖರ್ಜೀ, ಅಜಿದ್ ದಾಸ್ ಮುಂತಾದ ಕಮ್ಯುನಿಸ್ಟ್ ನಾಯಕರು ಹಾಜರಿದ್ದರು. ಅಲ್ಲಿ ಜವಹರಲಾಲ್ ನೆಹರೂರರನ್ನು ಸಹ ಆಹ್ವಾನಿಸಲಾಗಿತ್ತು.

ನೆಹರೂರವರು ವೇದಿಕೆಯ ಮೇಲೆ ಆಸೀನರಾದ ಬಳಿಕ ಕಾಂ. ಅಬ್ದುಲ್ ಹಲೀಂರವರು ಒಂದು ಪತ್ರಿಕೆಯನ್ನು ಕಾಂ. ಸರೋಜ್ ಮುಖರ್ಜೀಯವರ ಕೈಗೆ ನೀಡಿ ಅದನ್ನು ನೆಹರೂರವರಿಗೆ ತಲುಪಿಸಬೇಕೆಂದು ತಿಳಿಸಿದರು. 'ಹಲೀಂ ರವರು ನಿಮಗೆ ಈ ಪತ್ರಿಕೆ ನೀಡಿದ್ದಾರೆ ನೋಡಿ' ಎಂದು ಸರೋಜ್ ಮುಖರ್ಜೀಯವರು ನೆಹರೂರವರಿಗೆ ಪತ್ರಿಕೆಯನ್ನು ನೀಡಿದರು. ನೆಹರೂ ಪತ್ರಿಕೆಯನ್ನು ಬಿಡಿಸಿದಾಗ ಕಂಡದ್ದು ಅದು 'ದಿ ಕಮ್ಯುನಿಸ್ಟ್' ಆಗಿತ್ತು. ಕೂಡಲೇ ಮುಖರ್ಜೀಯವರೇ 'ಇದು ನಿಷೇಧಕ್ಕೆ ಒಳಪಟ್ಟಿದ್ದಲ್ಲವೇ' ಎಂದು ಹೇಳಿ ಮಡಚಿ ಕೋಟ್ ಜೇಬಿಗಿಳಿಸಿದರು.

'ಈ ಪತ್ರಿಕೆಯ ಬಗೆ ನಿಮ್ಮ ಅಭಿಪ್ರಾಯವನ್ನು ಹಲೀಂ ರವರು ನಿರೀಕ್ಷಿಸುತ್ತಿದ್ದಾರೆ? ಎಂದರು ಮುಖರ್ಜೀಯವರು.

'ಹೌದು ! ಯಾರು ಈ ಹಲೀಂ? ನನ್ನೊಂದಿಗೆ ಏನನ್ನಾದರೂ ಮಾತನಾಡಲು ನಿರೀಕ್ಷಿಸುತ್ತಿದ್ದಾರೆಯೇ?'

'ಅವರು ನಮ್ಮ ಸಂಗಾತಿ. ಪತ್ರಿಕೆಯ ಬಗ್ಗೆ ಅಭಿಪ್ರಾಯ ತಿಳಿಸಿದರಾಯಿತಂತೆ.'

'ಅಯ್ತು ಖಂಡಿತವಾಗಿಯೂ ಹೇಳುತ್ತೇನೆ'

ಸಮ್ಮೇಳನ ಮುಗಿದಬಳಿಕ ನೆಹರೂ ಹೊರಟುಹೊದರು. ಅದರ ಮರುದಿನವೇ ಶ್ರದ್ಧಾನಂದ ಪಾರ್ಕಿನಲ್ಲಿ ಒಂದು ಬಹಿರಂಗ ಸಭೆ. ನೆಹರೂ ಜನತೆಯನ್ನುದ್ದೇಶಿಸಿ ಮಾತನಾಡಿದರು. ಈ ಸಲದ ಭಾಷಣ ಹಿಂದಿನಂತಿರಲಿಲ್ಲ. ಬ್ರಿಟೀಷ್ ಸಾಮ್ರಾಜ್ಯಶಾಹಿಗಳನ್ನು ಅತ್ಯಂತ ಕಠಿಣ ಶಬ್ದಗಳಿಂದ ಟೀಕಿಸಿದರು. ಅದು ಅತ್ಯಂತ ಪರಿಣಾಮಕಾರಿಯಾದ ಸಭೆ.

ನೆಹರೂರವರ ಭಾಷಣದುದ್ದಕ್ಕೂ ಸ್ಫೂರ್ತಿ ನೀಡಿದ್ದು 'ದಿ ಕಮ್ಯುನಿಸ್ಟ್' ಪತ್ರಿಕೆಯ ವಿಚಾರಧಾರೆ.

ಇದಕ್ಕಾಗಿ ಬ್ರಿಟಿಷರಿಂದ ಸಿಕ್ಕ ಶಹಬಾಸ್ ಗಿರಿ ಏನು ಗೊತ್ತೇ?

'ರಾಜದ್ರೋಹ'ದ ಆರೋಪದ ಮೇಲೆ ಅಲಹಾಬಾದ್‌ನಲ್ಲಿ ನೆಹರೂರವರನ್ನು ಬಂಧಿಸಿದರು. 'ಗೌರವಾನ್ವಿತ ನ್ಯಾಯಾಲಯ ನೀಡಿದ ಇನ್ನೊಂದು ಬಹುಮಾನ 10 ತಿಂಗಳ ಕಠಿಣ ಶಿಕ್ಷೆ!

—ಇ.ಕೆ.ಎಸ್.ರಾಜನ್

-ಎಸ್.ವೈ.ಗುರುಶಾಂತ್

ಪತ್ರಿಕಗಳು ಕಂಡಂತ..........

'ಶಾಂತಿ ಪ್ರಶಸ್ತಿಗಿಂತ ಮಿರಿದ್ದು'

ಗೋರ್ಬಚೇವ್‌ರಿಗೆ ನೋಬೆಲ್ ಶಾಂತಿ ಪ್ರಶಸ್ತಿನೀಡಿರುವುದು ಈ ಸೋವಿಯತ್ ಮುಖಂಡನಿಗೆ ಅಥವಾ ಸೋವಿಯತ್ ಒಕ್ಕೂಟಕ್ಕೆ ಸಂದ ಗೌರವವಷ್ಟೇ ಅಲ್ಲ. ಇದು 'ಶೀತಲ ಯುದ್ಧ' ಅಂತ್ಯಗೊಂಡಿದೆ ಎಂಬುದನ್ನು ಒಪ್ಪಿಕೊಂಡಿರುವುದರ ಸಂಕೇತ ಕೂಡಾ ಎಂದಿರುವ 'ಟೈಂಸ್ ಆಫ್ ಇಂಡಿಯಾ' 1976ರಲ್ಲಿ ಸೋವಿಯತ್ ಭಿನ್ನಮತೀಯ ಅಂದ್ರೆ ಸಖಾರೋವ್‌ಗೆ ಇದೇ ಪ್ರಶಸ್ತಿ ನೀಡಿದುದನ್ನು ನೆನಪಿಸುತ್ತಾ ಈ ಮಧ್ಯೆ ವಿಶ್ವ ಯುಗಾಂತರಕಾರಿ ಬದಲಾವಣೆ ಕಂಡಿದೆ, ಸೋಫಿಯತ್ ಪ್ರಭುತ್ವದ ವಿರೋಧಿಗಳಿಗಷ್ಟೇ ಈ ಪ್ರಶಸ್ತಿ ನೀಡುವ ಯುಗ ಮುಗಿದಿದ್ದರೆ, ಅದಕ್ಕೆ ಗೋರ್ಬಚೇವ್‌ರ ಕೊಡುಗೆ ಕೂಡಾ ಕಮ್ಮಿಯೇನಲ್ಲ ಎಂದಿದೆ. ಶೀತಲ ಯುದ್ಧದ ರಾಜಕೀಯ ಹಾಗೂ ಮಿಲಿಟರಿ ರಚನೆಗಳನ್ನು ಕಳಚಿ ಹಾಕಲು ನಿರಂತರ ಯತ್ನಿಸಿದ ವ್ಯಕ್ತಿಯಾಗಿದ್ದು ಕಾಣುವ ಗೋರ್ಬಚೇವ್ ಹಲವಾರು ಶೃಂಗಸಭೆಗಳು, ಸಮ್ಮೇಳನಗಳು, ನಿಶ್ಯಸ್ತ್ರೀಕರಣ ಮತ್ತು ಶಸ್ತ್ರಾಸ್ತ್ರ ಹಯೋಟ ಬಗ್ಗೆ ಹಲವಾರು ಮಾತುಕತೆಗಳ ಮೂಲಕ ಈಗಾಗಲೇ ವಿಶ್ವದಲ್ಲಿ ಶಾಂತಿ ಸಂದೇಶಕಾರನಾಗಿ ಸುವಿಖ್ಯಾತನಾಗಿಬಿಟ್ಟಿದ್ದಾರೆ ಎಂದು ಹೇಳುತ್ತಾ ಇದಕ್ಕಾಗಿ ಅವರು ಮತ್ತು ಸೋವಿಯತ್ ಒಕ್ಕೂಟ ಸಾಕಷ್ಟು ಬೆಲೆ ತೆರಬೇಕಾದರೂ, ಅದಕ್ಕೆ ಪ್ರತಿಯಾಗಿ ಪಾಶ್ಚಿಮಾತ್ಯ ರಾಜಕಾರಣಿಗಳು ಇನ್ನೂ ವಿಶ್ವದ ಮೇಲೆ ತಮ್ಮ ಪ್ರಾಬಲ್ಯ ಹೇರುವ ಭೂತಕಾಲದತ್ತ ಸೇರಿದ ಆಕ್ರಮಣಕಾರಿ ಹಾಗೂ ಕುರುಡು ಹಠಮಾರಿತನ ಬಿಡುತ್ತಿಲ್ಲ ಎಂದೂ 'ಟೈಸ್‌ಂ ಆಫ್ ಇಂಡಿಯಾ' ಅಭಿಪ್ರಾಯ ಪಟ್ಟಿದೆ. ವಿಶ್ವವನ್ನು ತಾಪ-ಅಣು ಸಂಘರ್ಷದ ವಿನಾಶದಿಂದ ಪಾರು ಮಾಡಿದಾಗ ಈ ಪ್ರಶಸ್ತಿ ನೀಡದೆ ಪೂರ್ವಯೂರೋಪಿನ ಘಟನೆಗಳ ನಂತರ ನೀಡಿರುವುದುಒಂದು ಅಪಹಾಸ ಎಂದು ಅದು ಅಭಿಪ್ರಾಯ ಪಟ್ಟಿದೆ.

'ನಿಜವಾದ ದಾರ್ಶನಿಕ'

ಡಿಸೆಂಬರ್ 1987ರಲ್ಲಿ ಎರಡು ಮಹಾ ಶಕ್ತಿಗಳ ಮುಖಂಡರು ವಾಶಿಂಗ್‌ಟನ್‌ನಲ್ಲಿ ಐ.ಎನ್‌ಎಫ್ ಸಂಧಿಗೆ ಸಹಿ ಹಾಕಿದಾಗ ಗೋರ್ಬಚೇವ್ ಮತ್ತು ರೇಗನ್‌ಗೆ ಜಂಟಿಯಾಗಿ ಈ ಪ್ರಶಸ್ತಿ ಸಿಗಬಹುದೆಂದು ಹಲವರು ನಿರೀಕ್ಷಿಸಿದ್ದರು. ಆದರೆ ಎರಡು ವರ್ಷ ಕಾದು ನಂತರ ನೊಬೆಲ್ ಸಮಿತಿ ಈ ಪ್ರಶಸ್ತಿ ಘೋಷಿಸಿ 1987ರ ನೈಜ 'ಕರ್ತೃ' ಯಾರು ಎಂಬುದನ್ನು ಪ್ರತ್ಯೇಕಿಸಿರುವುದು ಇಂದು ಸ್ವಯಂವೇದ್ಯ. ನಿಜವಾದ ದಾರ್ಶನಿಕನನ್ನು ಗುರುತಿಸಲಾಗಿದೆ ಎಂದು ದೆಕ್ಕನ್ ಹೆರಾಲ್ಡ್ ಅಭಿಪ್ರಾಯ ಪಟ್ಟಿದೆ.

'ಸುಯೋಗ್ಯ ಕಾಣಿಕೆ'

ಈ ಪ್ರಶಸ್ತಿ ಅಂತರರಾಷ್ಟ್ರೀಯ ಸಂಬಂಧಗಳ ಮೇಲೆ ಆಳವಾದ ಪ್ರಭಾವ ಬೀರಿದ ಒಬ್ಬ ಮುತ್ಸದ್ದಿಗೆ ನೀಡಿರುವ ಸುಯೋಗ್ಯ ಕಾಣಿಕೆ ಎಂದು 'ಹಿಂದೂ' ಪತ್ರಿಕೆ ಹೇಳಿದೆ. ಅವರ ಧೀರ ಹಾಗೂ ಸೃಜನಾತ್ಮಕವಾಗಿ ಮುಂದೆ ಇಟ್ಟ ಹೆಜ್ಜೆಗಳಿಂದಾಗಿ ಪರಮಾಣು ಶಸ್ತ್ರಾಸ್ತ್ರ ರಂಗದಲ್ಲಿದ್ದ ಅನಿಶ್ಚತೆ ಅದೇ ರೀತಿ ಮುಂದುವರಿಯುತ್ತಿತ್ತೇನೋ ಎಂದಿರುವ ಈ ಪತ್ರಿಕೆ ಈಗ ಅಮೇರಿಕಾದ ಅಥವಾ ಬೇರೆಡೆಯ ಯಾವುದೇ ಗಂಭೀರ ರಾಜಕಾರಣಿ ಕೂಡಾ ಸೋವಿಯತ್ ಒಕ್ಕೂಟ ತನ್ನ 'ದುಷ್ಟ ಸಾಮ್ರಾಜ್ಯ'ವನ್ನು ಹೇರುವ ದೇಶ ಎಂದು ವರ್ಣಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಭಿಪ್ರಾಯಪಟ್ಟಿದೆ.

'ಪ್ರಶಸ್ತಿಯ ಬೆಲೆ ಹೆಚ್ಚಿದೆ'

ಶೀತಲ ಯುದ್ಧ ಕೊನೆಗೊಳ್ಳಲು ಮಾನವ ಕುಲವನ್ನು ಪರಮಾಣು ದುಸ್ವಪ್ನದಿಂದ ರಕ್ಷಿಸಿದ ಮೊದಲ ಕೀರ್ತಿ ಗೋರ್ಬಚೇವ್‌ರಿಗೆ ಎಂದರೆ ಅದು ಸ್ವಯಂವೇದ್ಯ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಿದ ಬಗ್ಗೆ ಪ್ರತಿಕ್ರಿಯಿಸುತ್ತಾ ಹೇಳಿದೆ.

ಭಾರತದಲ್ಲಿ ಕಮ್ಯುನಿಸಂ ವಿರೋಧದ ಹುಚ್ಚು ಪೂರ್ಣವಾಗಿ ನೆತ್ತಿಗೇರಿರುವ ಈ ಪತ್ರಿಕೆ ತನ್ನ ವಿಷ ಕಾರಲು ಈ ಸಂದರ್ಭವನ್ನು ಬಳಸಿದೆ.

ಮೂರನೇ ವಿಶ್ವದ ಬುದ್ಧಿಜೀವಿಗಳನ್ನು ಸಮಾಜವಾದದಿಂದ, ಕಮ್ಯುನಿಸಂನಿಂದ ದೂರಸರಿಸಲು ಕಮ್ಯುನಿಸಂ ಸಿದ್ಧಾಂತ ತೊಲಗಿದರೆ ಮಾತ್ರ ತನ್ನಂತಹ ಗುತ್ತೆದಾರಿಗಳು ಕ್ಷೇಮ ಎಂಬುದನ್ನು ಸಾಧಿಸಲು ಪ್ರಯತ್ನಿಸಿದೆ.

ಇಂದು ವಿಶ್ವಾದ್ಯಂತ ಹರಿಬಿಟ್ಟಿರುವ ರಾಯಿಟರ್(ಬ್ರಿಟಿಷ್ ಸುದ್ದಿ ಸಂಸ್ಥೆ) ಎ.ಪಿ.(ಅಮೇರಿಕನ್ ಸುದ್ದಿಸಂಸ್ಥೆ), ಎ.ಎಫ್.ಪಿ.(ಫ್ರೆಂಚ್ ಸಂಸ್ಥೆ) ಮತ್ತವರ ದೂರದರ್ಶನ ಜಾಲಗಳು ಹಬ್ಬಿಸುತ್ತಿರುವ ಕಾಡುಕಿಚ್ಚನ್ನು ತಡೆದು ಬದುಕುವ ಶಕ್ತಿ, ಬದುಕಿಗಾಗಿ, ಬದುಕುವ ಶಾಂತಿಗಾಗಿ ಹೋರಾಡುವ ಶಕ್ತಿ ಕಮ್ಯುನಿಸಂಗಿದೆ ಎಂಬುದನ್ನವರು ಮರೆಯದಿರಲಿ.

ವಿಶ್ವಾದ್ಯಂತ ಕಮ್ಯುನಿಸ್ಟರು ಶಾಂತಿಗಾಗಿ ಹೋರಾಡುತ್ತಲೇ ಸಾಮ್ರಾಜ್ಯಶಾಹಿ ಗಳನ್ನು ಅವರ ಮಿತ್ರ ಗುತ್ತೇದಾರಿಗಳನ್ನು ಸ್ಫುಟ್ಟುಬಿಡುತ್ತಾರೆ ಎಂಬುದನ್ನವರು ಮರೆಯದಿರಲಿ.

ಪ್ರಚೋದನಕಾರಿ ಗೋಡೆ ಬರಹ: ಕೋಮು ಸೌಹಾರ್ದ ಉಳಿಸಲು ಅಗ್ರಹ

ಬಳ್ಳಾರಿ ನಗರದಲ್ಲಿ ಇತ್ತೀಚಿಗೆ ಕೋಮು ಸೌಹಾರ್ದವನ್ನು ಮುರಿಯಲು ವಿಶ್ವ ಹಿಂದೂ ಪರಿಷತ್ ಹಾಗೂ ಎಬಿವಿಪಿಗಳು ಕಾರ್ಯರಂಗಕ್ಕಿಳಿದು, ಅದರ ಅಂಗವಾಗಿ ಕೋಮು ಭಾವನೆಯನ್ನು ಪ್ರಚೋದಿಸುವ ಗೋಡೆಬರಹಗಳನ್ನು ನಗರ ಸಭೆಯ ಕಚೇರಿಯ ಗೋಡೆಗಳಲ್ಲಿ ಬರೆದಿರುವುದು ತೀರಾ ಅಕ್ಷಮ್ಯಕಾರಿಯಾಗಿದೆ. ಈ ರೀತಿಯ ಬರಹಗಳು ಕೋಮು ಭಾವನೆಯನ್ನು ಪ್ರಚೋದಿಸಿ, ಅದರ ಲಾಭವನ್ನು ಬಳಸಿಕೊಳ್ಳುವ ಮತೀಯವಾದಿ ಶಕ್ತಿಗಳನ್ನು ತಡೆಗಟ್ಟಲು ತೀವ್ರವಾದ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಸಿಪಿಐ(ಎಂ) ಪಕ್ಷದ ಬಳ್ಳಾರಿ ಘಟಕವು ಪೋಲೀಸ್ ವರಿಷ್ಠಾಧಿಕಾರಿಗಳನ್ನು ಒತ್ತಾಯಿಸಿದೆ.

ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿ ಆತಂಕ

ರಾಜ್ಯದಲ್ಲಿ ಹೆಚ್ಚುತ್ತಿರುವ ಕೋಮು ಗಲಭೆಗಳು, ಮತ್ತು ಅದರಿಂದ ಅಮಾಯಕ ಜನರ ಬಲಿಯನ್ನು ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿಯು ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿ, ಈ ರೀತಿಯ ಘಟನೆಗಳಿಗೆ ಕಾರಣರಾದ ಮತೀಯ ಶಕ್ತಿಗಳನ್ನು ದೂರವಿಡಲು ಅಸಮರ್ಥವಾದ ರಾಜ್ಯದ ಕಾಂಗ್ರೆಸ್ ಸರಕಾರದ ರಾಜಿನಾಮೆ ನೀಡಬೇಕೆಂದು, ತಾರೀಖು 7-10-90 ರಂದು ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿತು. ರಾಜ್ಯ ಸರಕಾರದ ಈ ವೈಫಲ್ಯವನ್ನು ಖಂಡಿಸಿ, ಅದು ತನ್ನ ನಾಯಕನ ಬದಲಾವಣೆಯ ನಾಟಕವಾಡದೆ, ರಾಜಿನಾಮೆ ನೀಡುವಂತೆ ಜಿಲ್ಲಾ ಸಮಿತಿ ಅಗ್ರಹಪಡಿಸಿದೆ.

ಡಿವೈಎಫ್ಐನ ಸತತ ಹೋರಾಟಕ್ಕೆ ಜಯ

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ನಾರಾಯಣ ನಗರ ಕ್ಯಾಂಪಿಗೆ ಸರಿಯಾದ ರಸ್ತೆ ಸೌಲಭ್ಯವಿಲ್ಲದೆ ಮತ್ತು ಹಲವು ಸಮಸ್ಯೆಗಳಿಂದ ವಾಹನ ಸಂಚಾರವಿಲ್ಲದೆ ಸಿಂಧನೂರು ಮತ್ತು ಇತರೆಡೆಗೆ ಹೋಗಬೇಕಾದರೆ ತುಂಬಾ ತೊಂದರೆಯಾಗುತ್ತಿತ್ತು. ಸಿಂಧನೂರಿಗೆ ಹೋಗಬೇಕಾದರೆ ಸುಮಾರು 30 ಕಿ.ಮಿ. ಸುತ್ತಿಕೊಂಡು ಹೋಗಬೇಕಾಗಿತ್ತು. ಕಚ್ಚಾ ರಸ್ತೆಕೂಡ ಸಂಚಾರಕ್ಕೆ ಯೋಗ್ಯವಿಲ್ಲದೆ ಅಲ್ಲಿನ ಜನರು ತುಂಬಾ ತೊಂದರೆಯನ್ನು ಅನುಭವಿಸಬೇಕಾಗಿತ್ತು. ಇಲ್ಲಿನ ಸ್ಥಳೀಯ ಡಿವೈಎಫ್ಐ ಘಟಕವು ಈ ತೊಂದರೆಯನ್ನು ಮನಗಂಡು ಸುಮಾರು ದಿನಗಳಿಂದ ರಸ್ತೆ ದುರಸ್ತಿಗಾಗಿ ಹೋರಾಡುತ್ತಲೇ ಬಂದಿತ್ತು. ಈ ಹೋರಾಟದ ಹಿನ್ನೆಲೆಯಲ್ಲಿ ಈ ವರ್ಷ ಬಳಗಾನೂರಿನಿಂದ ನಾರಾಯಣನಗರ ಕ್ಯಾಂಪಿನ ಮಧ್ಯೆ ಎರಡೂವರೆ ಕಿಲೋ ಮಿಟರ್ ದೂರದ ರಸ್ತೆ ರಿಪೇರಿ ಕೆಲಸ ಭರದಿಂದ ಸಾಗಿದೆ. ಈ ಕೆಲಸ ಸಮರ್ಪಕವಾಗಿ ನಡೆಯುವಂತೆ ಡಿವೈಎಫ್ಐ ಕಾರ್ಯಕರ್ತರ 5ಜನರ ತಂಡವೊಂದನ್ನು ರಚಿಸಲಾಗಿದೆಯೆಂದು ಅಲ್ಲಿನ ಸ್ಥಳೀಯ ಕಾರ್ಯದರ್ಶಿ ಶಂಕ್ರಪ್ಪ ಪಲ್ಲೇದ್ ತಿಳಿಸಿದ್ದಾರೆ.

ಪೋಲೀಸ್ ದೌರ್ಜನ್ಯ: ಡಿವೈಎಫ್ಐ ಖಂಡನೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಹಕಾರ್ಯದರ್ಶಿ ಹಾಗೂ ಕಣ್ಣೂರು ಮಂಡಲ ಪಂಚಾಯತ್ ಸದಸ್ಯರೂ ಆಗಿರುವ ಕೆ.ಯಾದವ ಶೆಟ್ಟಿಯವರ ಮೇಲೆ ದಿನಾಂಕ 5-10-90 ರಂದು ಮಂಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಪೋಲೀಸರು ಅಮಾನುಷವಾಗಿ ಹೊಡೆದು, ಹಲ್ಲೆ ನಡೆಸಿರುವುದನ್ನು ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿಯು ಉಗ್ರವಾಗಿ ಖಂಡಿಸಿದೆ.

ಬಜಾಲ್ ಪ್ರದೇಶದ ಹಂಚಿನ ಕಾರ್ಮಿಕ ಜಯಮಣಿ ಯಾನೆಯವರನ್ನು ಸುಳ್ಳು ದೂರಿನ ಮೇರೆಗೆ ಬಂಧಿಸಿ ದುರುದ್ದೇಶದಿಂದ ಬಿಡುಗಡೆಗೊಳಿಸದಿರುವ ಬಗ್ಗೆ ವಿಚಾರಿಸಲು ಹೋದ ಯಾದವ ಶೆಟ್ಟಿಯವರನ್ನು ಠಾಣೆ ಪೋಲೀಸ್ ಕಮಲಾಕ್ಷ ಸೇರಿದಂತೆ ಠಾಣೆಯ ಇತರ ಪೋಲೀಸರು ಸುಳ್ಳು ಮೊಕದ್ದಮೆ ಕೇಸನ್ನು ದಾಖಲು ಮಾಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಲು ಹಾಗೂ ತಪ್ಪಿತಸ್ಥ ಪೋಲೀಸರನ್ನು ಕೂಡಲೇ ಅಮಾನತು ಮಾಡಬೇಕೆಂದು ಆಗ್ರಹಿಸಿ ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿಯ ನಿಯೋಗವೊಂದು ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಮನವಿ ನೀಡಿದರು. ಯಾವುದೇ ಕ್ರಮ ಜರುಗಿಸದಿದ್ದಲ್ಲಿ ತೀವ್ರವಾದ ಪ್ರತಿಭಟನಾ ಪ್ರದರ್ಶನ ಹಾಗೂ ಸಭೆಗಳನ್ನು ನಡೆಸಲಾಗುವುದೆಂದು ತೀರ್ಮಾನಿಸಲಾಗಿದೆ.

ಬೇಡಿಕೆಗಳ ಈಡೇರಿಕೆಗೆ ಪ್ರಾಂತ ರೈತ ಸಂಘದ ಒತ್ತಾಯ

ರೈತರ ಜ್ವಲಂತ ಸಮಸ್ಯೆಗಳ ಅಮೂಲಾಗ್ರ ಪರಿಹಾರಕ್ಕಾಗಿ ಒತ್ತಾಯಿಸಿ ಅಖಿಲ ಭಾರತ ಕಿಸಾನ ಸಭಾ ನೀಡಿದ್ದ ಕರೆಯಂತೆ ವಿಜಾಪುರ ಜಿಲ್ಲಾ ಸಮಿತಿಯು ಅ.8 ರಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಆದರೆ ರಾಜ್ಯದಲ್ಲಿನ ಪರಿಸ್ಥಿತಿಯಿಂದಾಗಿ ಎಲ್ಲಾ ಕಾಯಕ್ರಮಗಳನ್ನು ರದ್ದುಗೊಳಿಸಿ, ಅಂದು ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಒಟ್ಟು ಸೇರಿ ಜಿಲ್ಲಾ ಪರಿಷತ್ ಹಾಗೂ ಜಿಲ್ಲಾಧಿಕಾರಿಗಳಿಗೆ ರೈತರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಅರ್ಪಿಸಲಾಯಿತು.

ಬೀಡಿ ಕಾರ್ಮಿಕರ ಹೋರಾಟಕ್ಕೆ ಕರೆ

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ಸಭೆ 9-10-90ರಂದು ಕೆ. ಮೂಸಬ್ಬನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ 18 ಬೇಡಿಕೆಗಳ ಸಲುವಾಗಿ ನವೆಂಬರ್ 1ರಿಂದ 7ರವರೆಗೆ ಚಳುವಳಿ ನಡೆಸಬೇಕೆಂದು ನಿರ್ಣಯಿಸಲಾಯಿತು. ಲಾಗ್ ಪುಸ್ತಕ ಕೊಡದೆ, ಒಳ್ಳೆ ಎಲೆ ಒದಗಿಸದೆ, ಆವರೇಜ್ ಹೆಸರಿನಲ್ಲಿ ಕಟ್ಟಿದ ಬೀಡಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಎಲೆ ಇಲ್ಲವೆಂಬ ಕಾರಣದಿಂದ ಕೆಲಸ ಸರಿಯಾಗಿ ಕೊಡದೆ ಮಾಲಿಕರು ಕೆಲಸಗಾರರಿಗೆ ತೊಂದರೆ ಕೊಡುವುದು ಹೆಚ್ಚಾಗುತ್ತಿರುವುದು ಹಾಗೂ ಇನ್ನಿತರ ಕಿರುಕುಳಗಳನ್ನು ನಿಲ್ಲಿಸಿ 1000 ಬೀಡಿ ಕಟ್ಟಿದ್ದರೆ, ರೂ. 25 ಕನಿಷ್ಟ ವೇತನ, ಬೆಲೆ ಸೂಚ್ಯಂಕ 680ರ ನಂತರ ಪ್ರತಿ ಪಾಯಿಂಟಿಗೆ 5 ಪೈಸೆ ಹೆಚ್ಚು, ಶೇಕಡ 20 ಬೋನಸ್ಸು, ವಾರದ ಎಲ್ಲಾ ದಿವಸ ಕೆಲಸ ಹಾಗೂ ಇನ್ನಿತರ ಬೇಡಿಕೆಗಳನ್ನು ಜಾರಿಯಲ್ಲಿ ತರಬೇಕೆಂದು ತೀವ್ರವಾಗಿ ಚಳುವಳಿ ನಡೆಸುವ ತೀರ್ಮಾನ ಕೈ ಗೊಳ್ಳಲಾಯಿತು.

ಇತ್ತೀಚೆಗೆ ದಿಲ್ಲಿಯಲ್ಲಿ ಸೇರಿದ್ದ ಅಖಿಲ ಭಾರತ ಬೀಡಿಕೆಲಸಗಾರರ ಫೆಡರೇಷನ್ ಈ ಮೇಲಿನ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಕೇಂದ್ರ ಕಾರ್ಮಿಕ ಮಂತ್ರಿಯವರಿಗೆ ಸಲ್ಲಿಸಲಾಯಿತು. ಹಾಗೆಯೇ ನವೆಂಬರ್ 1ರಿಂದ 7ರವರೆಗೆ ಇಡೀ ದೇಶದಲ್ಲಿ ಬೀಡಿ ಕಾರ್ಮಿಕರ ಚಳುವಳಿ ನಡೆಸಲು ನಿರ್ಧರಿಸಲಾಯಿತು.

ಜನವಾದಿ ಮಹಿಳಾ ಸಂಘಟನೆಯ ಘಟಕದ ಸ್ಥಾಪನೆ

ದಿನಾಂಕ 8-10-90 ರಂದು ಗುಲ್ಬರ್ಗಾ ನಗರದ ಬಸವೇಶ್ವರ ಕಾಲೋನಿಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಘಟಕವೊಂದನ್ನು ಸ್ಥಾಪಿಸಲಾಯಿತು. ಈ ಘಟಕದ ಸ್ಥಾಪನಾ ಸಭೆಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ಮಹಾದೇವಿ ಸಜ್ಜನ, ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಗೋದಾವರಿ ಅವರು ಮಾತನಾಡುತ್ತಾ ಮಹಿಳೆಯರ ಸಂಘಟನೆಯ ಮಹತ್ವ ಹಾಗೂ ಅದರ ಪರಿಣಾಮಗಳನ್ನು ತಿಳಿಸಿದರು. ಈ ಘಟಕಕ್ಕೆ ಪದಾಧಿಕಾರಿಗಳನ್ನು ಕೆಳಕಂಡಂತೆ ಆಯ್ಕೆಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಅಧ್ಯ-

ಕ್ಷರಾಗಿ ಗೀತಾ ಕುಲಕರ್ಣಿ, ಉಪಾಧ್ಯಕ್ಷರಾಗಿ ವೀರಮ್ಮ ಅಂಕಲಗಿ, ಉಮಾ ಬಿರಾದಾರ, ಕಾರ್ಯದರ್ಶಿಯಾಗಿ ವಿಮಲಾಬಾಯಿ, ಜಂಟಿ ಕಾರ್ಯದರ್ಶಿಯಾಗಿ ಪದ್ಮಾವತಿ ಗಾದಗೆ ಹಾಗೂ ಸಮಿತಿಯ ಸದಸ್ಯರಾಗಿ ಏಳು ಜನರನ್ನು ಆಯ್ಕೆ ಮಾಡಲಾಗಿದೆ.

ರಾಜ್ಯ ಸರಕಾರಿ ನೌಕರರಿಂದ ಬೆಲೆ ಏರಿಕೆ ವಿರೋಧಿ ದಿನಾಚರಣೆ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಕರೆಯ ಮೇರೆಗೆ ಅಕ್ಟೋಬರ್ 11 ರಂದು ದೇಶಾದ್ಯಂತ ಸುಮಾರು 80 ಲಕ್ಷ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರು ಸಭೆ ಮತ್ತು ಮತಪ್ರದರ್ಶನಗಳನ್ನು ನಡೆಸುವುದರ ಮೂಲಕ 'ಬೆಲೆ ಏರಿಕೆ ದಿನಾಚರಣೆ' ಯನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಕೋಮು ಗಲಭೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಸರಕಾರವು ಬಹಿರಂಗಸಭೆ ಮತ್ತು ಮೆರವಣಿಗೆಯನ್ನು ನಿಷೇಧಿಸಿರುವುದರಿಂದ ಅಂದು ನೌಕರರು ಕರಪತ್ರಗಳನ್ನು ಹಂಚುವುದರ ಮೂಲಕ ಈ ಕಾರ್ಯಕ್ರಮವು ಆಚರಿಸಲ್ಪಟ್ಟಿತು.

ನಮ್ಮ ದೇಶದ ಆರ್ಥಿಕ ವ್ಯವಸ್ಥೆಯು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಜೀವನಾವಶ್ಯಕ ವಸ್ತುಗಳ ಬೆಲೆ ದಿನೇದಿನೇ ಗಗನಕ್ಕೇರುತ್ತಿದೆ. ಕಳೆದ ಕೆಲವು ತಿಂಗಳಿಂದ ಏರುತ್ತಿರುವ ಜೀವನಾವಶ್ಯಕ ಬೆಲೆಗಳು ಹಾಗೂ ಪೆಟ್ರೋಲ್, ಡೀಸಲ್ ದರಗಳನ್ನು ಏರಿಸಿದುದರ ಪರಿಣಾಮವಾಗಿ ಸರಕಾರಿ ನೌಕರರು ಸೇರಿದಂತೆ ಜನ ಸಾಮಾನ್ಯರ ಜೀವನವು ಕಷ್ಟಕರವಾಗಿದೆ. ಆದ್ದರಿಂದ ಸರಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ವಿಸ್ತರಿಸುವುದರ ಮೂಲಕ ಬೆಲೆಯೇರಿಕೆಯನ್ನು ನಿಯಂತ್ರಿಸಬೇಕು. ಹದಿನಾಲ್ಕು ಜೀವನಾವಶ್ಯಕ ವಸ್ತುಗಳನ್ನು ಪಡಿತರ ವ್ಯವಸ್ಥೆಯ ಮೂಲಕ ವಿತರಿಸಬೇಕು. ಸರಕಾರವು ಆಹಾರ ಧಾನ್ಯಗಳ ಸಗಟು ಬೆಲೆಯನ್ನು ಹೆಚ್ಚಿಸುವಾಗ ಪಡಿತರ ವಸ್ತುಗಳ ಬೆಲೆಯನ್ನು ನಿಯಂತ್ರಿಸಬೇಕು. ಪಡಿತರ ವಸ್ತುಗಳನ್ನು ವಿತರಣೆಗಾಗಿ ನಿರಂತರವಾಗಿ ಒದಗಿಸಬೇಕು. ಅಕ್ರಮ ದಾಸ್ತಾನುಗಾರರು, ಕಳ್ಳ ಸಾಗಾಣಿಕೆದಾರರು ಮತ್ತು ಕಾಳಸಂತೆಕೋರರ ವಿರುದ್ಧ ಸರಕಾರ ಉಗ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ 'ಐಕ್ಯತಾ ವೇದಿಕೆ'ಯು ಸರಕಾರವನು ಆಗ್ರಪಡಿಸಿದೆ.

ಕರ್ನಾ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆ ಡಿವೈಎಫ್ಐನ ಒತ್ತಾಯ

ನವೆಂಬರ್ 3 ರಂದು ಬೆಂಗಳೂರಿನಲ್ಲಿ ಬೃಹತ್ ಯುವರ್‍ಯಾಲಿಯನ್ನು ಆಯೋಜಿಸಲು ಡಿವೈಎಫ್ಐ ರಾಜ್ಯ ಸಮಿತಿಯು ನಿರ್ಧರಿಸಿದೆ. ಅದರಂತೆ ಎಲ್ಲಾ ಜಿಲ್ಲೆಗಳಲ್ಲಿ ತಯಾರಿ ನಡೆದಿದೆ.

ನವೆಂಬರ್ ರಾಲಿಯೂ ದಶಮಾನೋತ್ಸವದ ರಾಲಿಯೂ ಕೂಡ ಆಗಿರುವುದರಿಂದ, ಅದರ ನೆನಪಿಗಾಗಿ ಆಕರ್ಷಕ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಲಾಗುವುದು. ಜಾಹೀರಾತಿನ ಟಾರಿಫ್ ಪಡೆದಿರುವ ಸ್ನೇಹಿತರು ಹಾಗೂ ಸಂಗಾತಿಗಳು ಶೀಘ್ರವಾಗಿ ಜಾಹೀರಾತುಗಳನ್ನು ಕಳುಹಿಸಿಕೊಡಬೇಕೆಂದು ಹಾಗೂ ಲೇಖನ ಮತ್ತು ಕವನಗಳನ್ನು ಸಹ ಕಳುಹಿಸಬೇಕೆಂದು ರಾಜ್ಯ ಸಮಿತಿಯು ವಿನಂತಿಸಿದೆ.

ನಿಮ್ಮ ಪ್ರಶ್ನೆ–ನಮ್ಮ ಉತ್ತರ

? ಮೀಸಲಾತಿಗಾಗಿ ರಾಷ್ಟ್ರದ ನಾನಾ ಭಾಗಗಳಲ್ಲಿ ಉಂಟಾಗಿರುವ ವಿವಾದದ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿ(ಬಿಹಾರ್, ಗುಜರಾತ್ ಇತರೆ....)

–ಮಹಾಂತೇಶ.ಕೆ., ದಾವಣಗೆರೆ

■ ಮೀಸಲಾತಿಯ ಬಗೆಗೆ ಮೂಲಭೂತ ವಿವಾದ ಇರುವುದು ಸಮಾಜದಲ್ಲಿ ಒಬ್ಬ ವ್ಯಕ್ತಿಗೆ ಯಾವ ಸ್ಥಾನ ಇದೆ ಎನ್ನುವುದರ ಮೇಲೆ- ಅವನ ದೃಷ್ಟಿಕೋಣದಿಂದ. ಈಗಾಗಲೇ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಪ್ರಬಲವಾಗಿರುವ ಮಾಧ್ಯಮ, ಉಚ್ಚ ಜಾತಿಗಳ ಜನರು ಮೀಸಲಾತಿ 'ಸಮಾನ ಅವಕಾಶ'ದ ನೀತಿಗೆ ವಿರುದ್ಧವೆಂದು ಭಾವಿಸುತ್ತಾರೆ. ಅಥವಾ ಮೀಸಲಾತಿ ನಿಜವಾದ ಪ್ರತಿಭೆಯನ್ನು ತಳ್ಳಿಹಾಕಿ, ಯಾವುದೇ ರೀತಿಯ ಉತ್ಕೃಷ್ಟತೆಗೆ ಮಾರಕವಾಗುತ್ತದೆ ಎಂದು ವಾದಿಸುತ್ತಾರೆ. ಇದರ ಹಿಂದಿರುವ ಭಾವನೆ ಎಂದರೆ ತಮ್ಮ ಜಾತಿಯ ಜನರಿಗೆ ಈ ಸ್ಥಾನಮಾನ ಸಿಕ್ಕಿರುವುದು ತಮ್ಮ ಉತ್ಕೃಷ್ಟತೆಯಿಂದ, ಸಮಾನ ಅವಕಾಶ'ದ ಪರಿಸ್ಥಿತಿಯಲ್ಲಿ ಪ್ರತಿಭೆಯಿಂದ. ಆದರೆ ಈ ಪೈಪೋಟಿ ಅತ್ಯಂತ ವಿಷಮ ಪರಿಸ್ಥಿತಿಯನ್ನು (ಅವರಿಗೆ ಪ್ರತಿಕೂಲವಾದ) ಕೆಳ, ಬಲಹೀನ, ಆರ್ಥಿಕವಾಗಿ ರಾಜಕೀಯವಾಗಿ ಸಮಾಜಿಕವಾಗಿ ಹಿಂದುಳಿದ ಜಾತಿಗಳ ಮೇಲೆ ಹೇರಿರುವ ಸಾವಿರ ಸಾವಿರ ವರ್ಷಗಳ ಜಾತಿ ಪದ್ಧತಿ ಬೇರೂರಿರುವ ಸಮಾಜದಲ್ಲಿ ನಡೆಯುತ್ತಿರುವುದೆಂದು ಅವರಿಗೆ ಗೊತ್ತಿಲ್ಲ. ಅಥವಾ ಅದನ್ನು ಅವರು ಒಪ್ಪಿಕೊಳ್ಳಲು ತಯಾರಿಲ್ಲ. ಈ ಸಮಾನ ಅವಕಾಶ ಎಷ್ಟು ಬೋಗಸ್ ಎಂಬುದನ್ನು ಒಂದು ಉದಾಹರಣೆಯಿಂದ ಹೇಳಬಹುದು. ಯಾವುದೇ ಉದ್ಯೋಗದಲ್ಲಿ ಮುಕ್ತ ಪೈಪೋಟಿ ನಡೆದಾಗ ಉಚ್ಚ, ಮಧ್ಯಮ ಜಾತಿಯ ಜನರು ದೊಡ್ಡ ಪ್ರಮಾಣದಲ್ಲಿರಲು ಕಾರಣವೇನು? ಹಲವಾರು ಮುಖ್ಯವಾಗಿ ಈ ಉದ್ಯೋಗಕ್ಕಾಗಿ ಬೇಕಾದ ವಿದ್ಯಾರ್ಹತೆ ಪಡೆದವರೇ, ಕೆಲಜಾತಿಗಳಲ್ಲು ಕಡಿಮೆ ಇರುತ್ತದೆ. ಯಾಕೆಂದರೆ ವಿದ್ಯಾರ್ಹತೆ ಪಡೆಯುವ 'ಸಮಾನ ಅವಕಾಶ' ಅವರಿಗೆ ಈ ವಿಷಮ ಆರ್ಥಿಕ ಮಟ್ಟಗಳಿರುವ ನಾಡಿನಲ್ಲಿ ಸಿಕ್ಕಿರುವುದಿಲ್ಲ. ಅಲ್ಲದೆ ಈ ವಶೀಲಿ, ಪ್ರಭಾವವೂ ಕೆಳಜಾತಿಯವರಿಗೆ ಏನೇನೂ ಇರುವುದಿಲ್ಲ. ಆದ್ದರಿಂದ ಈ ಕಹಿ ಅನುಭವ ಕಂಡು ಬೇಯುತ್ತಿರುವ ಕೆಳಜಾತಿಯವರಿಗೆ ಮೀಸಲಾತಿಯ ಪ್ರಶ್ನೆ ಬಂದಾಗ ಅವರು ಅದರ ಪರವಾಗಿ ತಮ್ಮ ದನಿ ಎತ್ತುತ್ತಾರೆ.

ಕುಗ್ಗುತ್ತಿರುವ ಉದ್ಯೋಗಾವಕಾಶಗಳು, ಉಚ್ಚ-ಮಧ್ಯಮ ಜಾತಿಗಳಲ್ಲಿ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಇರುವ ಬಡವರು, ಎಲ್ಲಾ ಜಾತಿಗಳ ದುಡಿಯುವ ಜನರ ಐಕ್ಯ ಹೋರಾಟದ ದೌರ್ಬಲ್ಯಗಳು, ಜಾತಿಗಳ ಗೋಡೆಗಳನ್ನು ಒಡೆಯುವ ಸುಧಾರಣಾ ಚಳುವಳಿಯ ಅಭಾವ –ಇವೆಲ್ಲದರ ಹಿನ್ನೆಲೆಯಲ್ಲಿ ಮೀಸಲಾತಿಯನ್ನು ಅತ್ಯಂತ ವಿವಾದಾಸ್ಪದ ವಿಷಯವನ್ನಾಗಿಸುತ್ತದೆ. ಗುಜರಾತ್, ಬಿಹಾರದಲ್ಲಿ ನಡೆದ ಮೀಸಲಾತಿ-ಪರ, ವಿರೋಧಿ ಚಳುವಳಿಯ ಮುಖಾಮುಖಿಗಳ ಹಿಂದಿರುವ ವಿವಾದಗಳ ತಿರುಳು ಇದೇ.

? ನಮ್ಮ ದೇಶದಲ್ಲಿ ಬರಿ ಮೀಸಲಾತಿ ಆದರೆ ಸಮಾಜವಾದ ಯಾವಾಗ?

–ಈರಣ್ಣ, ಬಳ್ಳಾರಿ

■ ಈ ಪ್ರಶ್ನೆಯಲ್ಲಿ ಮೀಸಲಾತಿ ಮತ್ತು ಸಮಾಜವಾದ ಪರಸ್ಪರ ವಿರೋಧವಾದ ಪರಿಕಲ್ಪನೆಗಳು. ಒಂದಕ್ಕೊಂದು ಏನೇನೂ ಸಂಬಂಧವಿಲ್ಲ ಎಂಬ ಭಾವನೆ ಇದ್ದಂತಿದೆ. ಆದರೆ ಇದು ಸರಿಯಲ್ಲ.

ಮೀಸಲಾತಿ ಅತ್ಯಂತ ಹೀನವಾದ ಜಾತಿ ಪದ್ಧತಿ ಬೇರೂರಿರುವ ಅತ್ಯಂತ ಅಸಮಾನತೆ ಇರುವ ನಮ್ಮ ಸಮಾಜದಲ್ಲಿ ಅತ್ಯಗತ್ಯ. ಸಮಾಜವಾದದಲ್ಲಿ ಎಲ್ಲಾ ಜಾತಿ, ವರ್ಗಗಳ ಜನರಿಗೂ ಸಮಾನ ರಾಜಕೀಯ, ಆರ್ಥಿಕ, ಸಮಾಜಿಕ ಅವಕಾಶಗಳನ್ನು ಕೊಡುವುದು ಪ್ರಮುಖವಾದ ಭಾಗ. ಇಂತಹ ಅವಕಾಶಗಳನ್ನು ಜಾತಿ ಆಧಾರದ ಮೇಲೆ ಅಸಮಾನವಾಗಿರುವ ಸಮಾಜದಲ್ಲಿ ನಿಜವಾದ ಸಮಾನ ಅವಕಾಶಗಳು ಕೆಳಜಾತಿಯವರಿಗೆ ಕೊಡಬೇಕಾದರೆ, ಮೀಸಲಾತಿ ಪ್ರಮುಖ ವಿಧಾನ- - ಮೊದಲ ಹಂತದಲ್ಲಾದರೂ ಇದರ ಜತೆ ಆರ್ಥಿಕ ಬೆಳವಣಿಗೆ , ಆಸ್ತಿ ಸಂಪತ್ತುಗಳ ಸಮಾನ ಹಂಚಿಕೆ, ಸಾಮಾಜಿಕ ಸುಧಾರಣೆಗಳು, ಸಾಸ್ಕೃತಿಕ ಕ್ರಾಂತಿ ಬಗ್ಗೆ ಪ್ರಯತ್ನ ನಡೆದರೆ, ಮೀಸಲಾತಿ ಬರಿಯ ಮೀಸಲಾತಿಯಲ್ಲೇ ಸ್ಥಗಿತಗೊಳ್ಳಬೇಕಾಗಿಲ್ಲ. ಇಲ್ಲದಿದ್ದರೆ ಮೀಸಲಾತಿ ಪಟ್ಟಭದ್ರ ಹಿತಾಸಕ್ತಿಗಳ ಅಸ್ತ್ರವೂ ಆಗಬಹುದು– ಜನರನ್ನು ಒಡೆದು, ಆಳಲು ದುಡಿಯುವ ಜನರ ಒಗ್ಗಟ್ಟನ್ನು, ಆರ್ಥಿಕ ಹೋರಾಟಗಳನ್ನು ಸದೆಬಡಿಯಲು ಮೀಸಲಾತಿ ಅಸ್ತ್ರ ಆಗದಿರಬೇಕಾದರೆ, ಕೆಳಜಾತಿಗಳ ಮೀಸಲಾತಿ-ಪರ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲ ಕೊಡಬೇಕು.

ಮೀಸಲಾತಿ ಮತ್ತು ಸಮಾಜವಾದವನ್ನು ಪರಸ್ಪರ ವಿರೋಧಿ ಪರಿಕಲ್ಪನೆಗಳಾಗಿ ಕಾಣುವುದು, ನಮ್ಮ ದೇಶದಲ್ಲಿ ಜಾತಿ ವರ್ಗಗಳ ಅಂತಃಪದರಗಳನ್ನು ಅರ್ಥಮಾಡಿಕೊಳ್ಳದಿರುವುದರ ಫಲ

ಸಮಾಜ-

ವಾದಿ ದೇಶಗಳಲ್ಲೂ ಮೊದಲ ಹಂತಗಳಲ್ಲಿ ಹಳ್ಳಿಗಳಲ್ಲಿ, ಹಳ್ಳಿ- ಪಟ್ಟಣಗಳ ನಡುವಣ ವಿಷಮತೆ, ಜನಾಂಗಗಳ ನಡುವೆ ವಿಷಮತೆ ಕೊನೆಗೊಳ್ಳಲು ಮೀಸಲಾತಿಯ ನೀತಿ ಉಪಯೋಗಿಸಲಾಗಿತ್ತು ಎಂದು ಮರೆಯಬಾರದು. ಜಾತಿ ವಿಷಮತೆ ನಿವಾರಿಸಲು ಮೀಸಲಾತಿಯ ಅಗತ್ಯ ಇದರಿಂದ ಸ್ಪಷ್ಟ.

? ನಮ್ಮ ಸಮಾಜದ ಪ್ರತಿಷ್ಠಿತ ಶಕ್ತಿಗಳು ಮೀಸಲಾತಿ ಚಳುವಳಿಯನ್ನು ಸಂಘಟಿಸಿ ಅಲ್ಪಸಂಖ್ಯಾತರ ಬದುಕನ್ನು ಮತ್ತಷ್ಟು ಭಯಾನಕಗೊಳಿಸಲು ಸಂಚು ಮಾಡುತ್ತಿವೆ ಎಂಬುದರಲ್ಲಿ ಅನುಮಾನವಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಚಳುವಳಿ ನಡೆಸುತ್ತಿರುವ ನಮ್ಮಂಥ ಚಳುವಳಿ, ಶಕ್ತಿಗಳ ಪಾತ್ರ ಏನು?

ಮಹಾಂತೇಶ.ಕೆ., ದಾವಣಗೆರೆ

■ ಪ್ರಶ್ನೆಯಿಂದ ಪ್ರತಿಷ್ಠಿತ ಶಕ್ತಿಗಳು ಮೀಸಲಾತಿ-ಪರ, ಚಳುವಳಿಯನ್ನು ಸಂಘಟಿಸುತ್ತಾರೋ, ಇಲ್ಲವೇ ಮೀಸಲಾತಿ -ವಿರೋಧವನ್ನೋ ಎನ್ನುವುದು ಸ್ಪಷ್ಟವಾಗಿಲ್ಲ. ಆದರೂ ಮೀಸಲಾತಿ-ಪರ, ಮೀಸಲಾತಿ-ವಿರೋಧ ಎರಡೂ ರೀತಿಯ ಚಳುವಳಿ ಅನಗತ್ಯ. ಮೀಸಲಾತಿ ವಿಷಯದ ಬಗ್ಗೆ ಚರ್ಚೆ,ವಿವಾದ ಎಬ್ಬಿಸುವುದೇ ಅಲ್ಪಸಂಖ್ಯಾತರ ಹಿತಾಸಕ್ತಿಗೆ ವಿರುದ್ಧ. ಮೀಸಲಾತಿ ವಿಚ್ಛಿದ್ರಕಾರಿ ಪರಿಕಲ್ಪನೆ ಎಂಬ ಭಾವನೆ ಇದೆ. ಇದು ಸರಿಯಲ್ಲ.ತಮ್ಮ ಹಕ್ಕುಗಳ ರಕ್ಷಣೆಗೆ ಸಿಡಿದು ನಿಲ್ಲುವುದು, ಶೋಷಣೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂಬುದೂ ಸರಿಯಲ್ಲ

ಸಮಾನ ಆರ್ಥಿಕ, ಸಮಾಜಿಕ, ರಾಜಕೀಯ ಅವಕಾಶ ಸಾಧಿಸಲು ಮೀಸಲಾತಿಯ ಪ್ರಶ್ನೆಯನ್ನು ಪ್ರಜಾಪ್ರಭುತ್ವ ಚಳುವಳಿ ಕೈಗೆತ್ತಿಕೊಳ್ಳಬೇಕು. ಅದನ್ನು ನಿರ್ಲಕ್ಷಿಸುವುದು ಪ್ರಜಾಪ್ರಭುತ್ವ ಚಳುವಳಿಗೆ ಮಾರಕ. ಇದು ಕೆಳಜಾತಿಯ ಜನರನ್ನು ಪ್ರಜಾಪ್ರಭುತ್ವ ಚಳುವಳಿ ತನ್ನೊಳಗಿರುವ ಉಚ್ಚ ಮಧ್ಯ ಜಾತಿಯ ಜನರಿಗೆ ಮೀಸಲಾತಿಯ ಅವಶ್ಯಕತೆ ಬಗ್ಗೆ ತಿಳಿಹೇಳಬೇಕು.

ಅದೇ ಸಮಯದಲ್ಲಿ, ಕೆಳಜಾತಿಯವರಿಗೆ, ಮೀಸಲಾತಿಯ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಲ್ಲ ಎಂದು ತಿಳಿಹೇಳಬೇಕು. ಉದ್ಯೋಗಾವಕಾಶಗಳಿಗೆ ಮಾರಕವಾದ ಆರ್ಥಿಕ ಬೆಳವಣಿಗೆ ವ್ಯವಸ್ಥೆ ವಿರುದ್ಧ ಹೋರಾಟ, ಸಾಮಾಜಿಕ ಸುಧಾರಣೆಗ ಚಳುವಳಿ, ಸಾಂಸ್ಕೃತಿಕ ಕ್ರಾಂತಿಯಲ್ಲಿ ಕೆಳಜಾತಿಯ ದುಡಿಯುವ ಜನ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳಬೇಕು. ಇಂತಹ ಹೋರಾಟಗಳಲ್ಲಿ ಕ್ರಮೇಣ ಜಾತಿಪ್ರಜ್ಞೆಯನ್ನು ಹೋಗಲಾಡಿಸಿ, ವರ್ಗ ಪ್ರಜ್ಞೆ ಮೂಡಿಸುವ ಬಗ್ಗೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಆಗ ಮಾತ್ರ ಪ್ರತಿಷ್ಠಿತ ಶಕ್ತಿಗಳು 'ಮೀಸಲಾತಿಯನ್ನು'ಪಯೋಗಿಸಿ ಅಲ್ಪಸಂಖ್ಯಾತರ ಬದುಕನ್ನು ಇನ್ನಷ್ಟು ಭಯಾನಕಗೊಳಿಸಲು ಹೂಡುವ ಸಂಚು ವಿಫಲವಾಗಬಲ್ಲುದು.

ಈಗ ಇಡೀ ಜಗತ್ತಿನ ಜನರ ಗಮನ ಕೊಲ್ಲಿಯ ಕಡೆಗಿದೆ. ಇತ್ತೀಚಿನ ವಾರಗಳಲ್ಲಿ ನಡೆಯುತ್ತಿರುವ ವೇಗದ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಬಯಸುವ ಮಧ್ಯ ಏಷ್ಯಾದ ಚರಿತ್ರೆಯ ಸಂಗತಿಗಳ ಅಜ್ಞಾನ ಯಾರನ್ನಾದರೂ ಗಲಿಬಿಲಿ ಮಾಡಿತು. ಅಮೇರಿಕನ್ ಪ್ರಚಾರವನ್ನು ಸಂಪೂರ್ಣ ನಂಬುವಂತೆ ಮಾಡೀತು.

ಸದ್ದಾಂ ಹುಸೇನ್ ಏಕೆ ಈಗ ಅರಬ್ ಹೀರೋ

ಕುತಂತ್ರದ ವಿಭಜನೆ

ಇದಕ್ಕೆ ನಾವು ಹೆಚ್ಚುಕಡಿಮೆ ಈ ಶತಮಾನದ ಆದಿಗೆ ಹೋಗಬೇಕು. ಮೊದಲನೆಯ ಮಹಾಯುದ್ಧದ ಮೊದಲು ಒಟ್ಟೋಮನ್ ಸಾಮ್ರಾಜ್ಯ ಈಗಿನ ಮಧ್ಯ ಏಷ್ಯಾದ ಹೆಚ್ಚಿನ ಭಾಗಗಳನ್ನು ಆವರಿಸಿತ್ತು. ಮೊದಲನೆ ಮಹಾಯುದ್ಧದಲ್ಲಿ ಸೋತ ಒಟ್ಟೋಮನ್ ಸಾಮ್ರಾಜ್ಯವನ್ನು ಗೆದ್ದ ಬ್ರಿಟನ್ ಮತ್ತು ಫ್ರಾನ್ಸ್ ಹಂಚಿಕೊಂಡರು. ಇದರಲ್ಲಿ ಬ್ರಿಟನ್‌ನ ಪಾಲಿಗೆ ಬಂದ ಲೂಟಿ ಪ್ಯಾಲೆಸ್ಟೀನ್, ಜೋರ್ಡಾನ್(ಈಗ ಇರಾಕಿನಲ್ಲಿರುವ) ಬಾಗ್ದಾದ್ ಮೋಸುಲ್ ಬಸ್ರಾ ಎಂಬ ಪ್ರಾಂತ್ಯಗಳು. ಆದರೆ ಬ್ರಿಟಿಷರು ಒಡೆದು ಆಳುವ ನೀತಿಯನ್ನು ಚಾಚೂ ತಪ್ಪದೆ ಪಾಲಿಸುವರು. ಈ ಬಸ್ರಾ ಪ್ರಾಂತ್ಯದಲ್ಲಿದ್ದ ಕುವೈತ್ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪ್ರತ್ಯೇಕ ದೇಶ ಮಾಡಲು ಅವರು ನಿರ್ಧರಿಸಿದರು. ಇರಾಕ್‌ಗೆ 1932ರಲ್ಲಿ ಸ್ವಾತಂತ್ರ್ಯ ಸಿಕ್ಕಿದರೆ, ಅಲ್ ಸಬಾ ಕುಟುಂಬದ ನಿರಂಕುಶ ಆದಳಿತದಲ್ಲಿ ಬ್ರಿಟಿಷರ ಅಧೀನ ದೇಶವಾಗಿ 1961 ರವರೆಗೆ ಕುವೈತ್ ಮುಂದುವರೆಯಿತು. ಇಂತಹ ಸಾಮ್ರಾಜ್ಯಶಾಹಿ ವಿಭಾಗಗಳಿಗೆ ಯಾವುದೇ ಆಧಾರವಿರುವುದಿಲ್ಲ-ಭಾಷೆ,ಜನಾಂಗ, ಸಾಂಸ್ಕೃತಿಕ, ಆರ್ಥಿಕ. ಅದೇ ರೀತಿ ಬಸ್ರಾ ಪ್ರಾಂತ್ಯದ ಈ ವಿಭಾಗಕ್ಕೂ ಯಾವುದೇ ಆಧಾರವಿರಲಿಲ್ಲ. ಅದು ಎಷ್ಟು ಹಾಸ್ಯಾಸ್ಪದವಾಗಿತ್ತೆಂದರೆ ರುಮ್ಮೈಲಾ ಎಂಬ ತೈಲ ಕ್ಷೇತ್ರದ ಶೇಕಡಾ 90 ಭಾಗ ಇರಾಕ್‌ನಲ್ಲಿದ್ದರೆ, ಶೇಕಡಾ 10 ಭಾಗ ಕುವೈತ್‌ನಲ್ಲಿದೆ. ಇದೇ ಈಗಿನ ಬಿಕ್ಕಟ್ಟಿಗೆ ಕಾರಣವಾದ ವಿವಾದಾಸ್ಪದವಾದ ಕ್ಷೇತ್ರ. ಈ ರೀತಿ ಬ್ರಿಟಿಷರ ಒಡೆದು ಆಳುವ ನೀತಿಯ ಅತಾರ್ಕಿಕ ವಿಭಜನೆಯಲ್ಲಿ, ಈಗಿನ ಬಿಕ್ಕಟ್ಟಿನ ಬೀಜವಿದೆ ಎಂದು ತಿಳಿದುಕೊಳ್ಳುವುದು ಅತ್ಯಗತ್ಯ. ಈ ರೀತಿ ಇರಾಕ್ ಮತ್ತು ಕುವೈತ್‌ಗಳ ನಡುವೆ ಕಲಹಕ್ಕೆ ಶಾಶ್ವತ ಬುನಾದಿ ಹಾಕಿತ್ತು ಬ್ರಿಟನ್.

ಎರಡು ಮಹಾಯುದ್ಧಗಳ ನಡುವೆ ಈ ಪ್ರದೇಶದ ಹಲವು ಸಾಮ್ರಾಜ್ಯಶಾಹಿಯ ಬಾಲಬಡುಕ ರಾಜರು, ಶೇಖ್‌ಗಳನ್ನು ಗಾದಿಯಲ್ಲಿ ಕುಳ್ಳಿರಿಸುವುದು ನಡೆಯಿತು. ಈಗಿನ ಹೆಚ್ಚಿನ ಕೊಲ್ಲಿ ಪ್ರದೇಶದ ರಾಜಮನೆತನಗಳು ಅಧಿಕಾರವನ್ನು ಪಡೆದದ್ದು ಹೀಗೆ. ಆದ್ದರಿಂದ ಈ ಪ್ರದೇಶಗಳಲ್ಲಿ ಜನರ ಮನಸ್ಸಿನಲ್ಲಿ ಈ ರಾಜಮನೆತನಗಳಿಗೂ ಸಾಮ್ರಾಜ್ಯಶಾಹಿಗಳಿಗೂ ನೇರವಾದ ಸಂಬಂಧವಿದೆ. ಎರಡನೇ ಮಹಾಯುದ್ಧ ಮುಗಿದ ನಂತರದ ಅಲ್ಲೋಲಕಲ್ಲೋಲದಲ್ಲಿ, ಇವುಗಳಲ್ಲಿ ಎಷ್ಟೋ ರಾಜಮನೆತನಗಳು ಅಧಿಕಾರ ಕಳೆದುಕೊಂಡವು. ಇಂತಹ ದೇಶಗಳಲ್ಲಿ ಅಧಿಕಾರಕ್ಕೆ ಬಂದ ರಾಷ್ಟ್ರೀಯ ಗುಂಪುಗಳೊಂದಿಗೂ ಸಾಮ್ರಾಜ್ಯಶಾಹಿ ಇದೇ ಆಟ ಆರಂಭಿಸಿತು.

ಧಾರ್ಮಿಕ ಸರ್ವಾಧಿಕಾರ

ಅಮೇರಿಕ ಎಲ್ಲೆಡೆ ತಾನು 'ಪ್ರಜಾಪ್ರಭುತ್ವ'ವನ್ನು ರಕ್ಷಿಸಲು ಮಧ್ಯಪ್ರವೇಶ ಮಾಡುತ್ತೇನೆ ಎಂದು ಹೇಳಿಕೊಳ್ಳುತ್ತದೆ. ಆದರೆ ಸೌದಿ ಅರೇಬಿಯಾದಲ್ಲಿರುವುದು ಪ್ರಜಾಪ್ರಭುತ್ವವೇ? ಹಾಗೇನೇ ಅಮೇರಿಕ ತಾನು 'ನಾಗರೀಕ ಅಧಿಕಾರ' ಮತ್ತು 'ಮಾನವ ಹಕ್ಕುಗಳ' ರಕ್ಷಕ ಎಂದು ಹೇಳಿಕೊಳ್ಳುತ್ತದೆ.

ಸೌದಿ ಅರೇಬಿಯಾ 1932ರಲ್ಲಿ ಸ್ಥಾಪಿತವಾಗಿ ಇಂದಿನವರೆಗೆ ಒಂದೇ ಕುಟುಂಬದ ಸರ್ವಾಧಿಕಾರಿ ಆಡಳಿತಕ್ಕೆ ಒಳಗಾಗಿದೆ. ಬಹುಶಃ ಸೌದಿ ಅರೇಬಿಯಾ ಒಂದು ವಿಶಿಷ್ಟ ರಾಜತ್ವವಿರುವ ದೇಶ. ಯಾಕೆಂದರೆ ಈ ಒಂದು ದೇಶದಲ್ಲಿ ಮಾತ್ರ ಇಡೀ ದೇಶವೇ ರಾಜನ ಖಾಸಗಿ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ಉಳಿದ ಕಡೆ ರಾಜ್ಯವಿರುವಲ್ಲಿ ಆತ ಶಾಸಕ ಮಾತ್ರ. ಬೇರೆ ವ್ಯಕ್ತಿಗಳಿಗೂ ಆ ದೇಶದಲ್ಲಿ ಆಸ್ತಿ ಇರಲು ಸಾಧ್ಯ. ಇದು ರಾಜತ್ವ ಮಾತ್ರವಲ್ಲ ಧಾರ್ಮಿಕ ಸರ್ವಾಧಿಕಾರ ಸಹ. ಇಲ್ಲಿ ಯಾವುದೇ ಪಾರ್ಲಿಮೆಂಟ್ ಇಲ್ಲ. ಕಾನೂನು ಬದ್ಧ ವಿರೋಧ ಪಕ್ಷಗಳಿಲ್ಲ. ಸಂವಿಧಾನ ಇಲ್ಲ. ಚುನಾವಣೆ ಇಲ್ಲ. ಟ್ರೇಡ್ ಯೂನಿಯನ್‌ಗಳಿಲ್ಲ.ಇಂತಹ ದೇಶದ (ಅಥವಾ ರಾಜಕುಟುಂಬದ ಆಸ್ತಿ ಎಂದರೆ ಸರಿಹೋದೀತು) ರಕ್ಷಣೆಗೆ ಅಮೇರಿಕದ ಎಲ್ಲಾ ಅಣ್ವಸ್ತ್ರದ ಪಡೆಗಳು ಧಾವಿಸಿರುವುದು.

ಇದಕ್ಕೆ ಕಾರಣ ಇಂತಹ ಪ್ರತಿಗಾಮಿ ರಾಜತ್ವವನ್ನು ಅದೇ ದೇಶದ ಮತ್ತು ಮಧ್ಯ ಏಷ್ಯಾದ ಸಾಮ್ರಾಜ್ಯಶಾಹಿ-ವಿರೋಧಿ ಜನತೆಯ ಕೋಪದಿಂದ ರಕ್ಷಣೆಯ ಅಗತ್ಯವಿದೆ. ಈ ಪ್ರತಿಗಾಮಿ ರಾಜತ್ವದ ರಕ್ಷಣೆ ಮಾಡದೆ, ಅಮೇರಿಕನ್‌ಮತ್ತಿತರ ತೈಲ ಕಂಪನಿಗಳಿಗೆ ರಕ್ಷಣೆ ಮಾಡುವುದು ಸಾಧ್ಯವಿಲ್ಲ. ಸೌದಿ ಅರೇಬಿಯಾಕ್ಕೆ ಏನಿಷ್ಟು ಮಹತ್ವ? ತೈಲ ಬೇರೆ ಕಡೆ ಇಲ್ಲವೇ? ಸೌದಿ ಅರೇಬಿಯಾದಲ್ಲಿ ಜಗತ್ತಿನ ಕಾಲು ಭಾಗ ತೈಲ ನಿಕ್ಷೇಪಗಳಿವೆ. ಅರಬ್ ಪ್ರದೇಶದ ಶೇಕಡಾ 80ಭಾಗ ತೈಲ ಸಂಪತ್ತನ್ನು ಲೂಟಿ ಹೊಡೆಯುವುದರಲ್ಲಿ ಇಲ್ಲಿನ ಶೇಖ್‌ಗಳೊಂದಿಗೆ, ಜಗತ್ತಿನ ಹತ್ತು ದೊಡ್ಡ ತೈಲ ಕಂಪನಿಗಳು ಪಾರ್ಟನರ್‌ಗಳು.

1932ರಲ್ಲಿ ಇನ್ನೂ ರಾಜತನದ ಎಳೆವಯಸ್ಸಿನಲ್ಲೇ, ಅದು ಆರ್ಥಿಕ ತೊಂದರೆಯಲ್ಲಿರುವಾಗ, ಈ ಪಾಶ್ಚಿಮಾತ್ಯ ತೈಲ ಕಂಪನಿಗಳು ಮಧ್ಯಪ್ರವೇಶ ಆರಂಭಿಸಿದವು. ಕ್ಯಾಲಿಫೋರ್ನಿಯಾದ ಸ್ಟಾಂಡರ್ಡ್ ಆಯಿಲ್‌ಗೆ ಸೌದಿರಾಜ ತೈಲ ಕ್ಷೇತ್ರಗಳಲ್ಲಿ ತೈಲ ತೆಗೆಯುವ ಹಕ್ಕುಗಳನ್ನು ಕೊಟ್ಟನು. ಇದಕ್ಕೆ ಬದಲಾಗಿ ಆ ಕಂಪನಿ ರಾಜನಿಗೆ ಸಾಲ ಕೊಟ್ಟಿತು. 1938 ರಷ್ಟು ಹೊತ್ತಿಗೆ ಆ ಕಂಪನಿ ಹಲವು ಪ್ರಮುಖ ಕಂಪನಿಗಳು- ಸ್ಟಾಂಡರ್ಡ್ ಆಯಿಲ್, ಎಸ್ಸೋ, ಟೆಕ್ಸಾಕೋಮತ್ತು ಮೊಬಿಲ್-ಸೇರಿ ಅರೇಬಿಯನ್ ಆಯಿಲ್ ಅಮೇರಿಕನ್ ಕಂಪನಿ(ಅರಾಮ್ಕೋ- ಎಆರ್‌ಎಂಎ ಕೊ) ಯೆಂಬ ದೊಡ್ಡ ಕಂಪನಿ ಮಾಡಿದವು. 1947ರವರೆಗೆ ಈ ಅರಾಮ್ಕೋ ಕಂಪನಿ ಸೌದಿ ಶೇಖ್‌ನಿಗೆ 10 ಕೋಟಿ ಡಾಲರುಗಳನ್ನು ಸಹಾಯ ಧನವಾಗಿ ನೀಡಿತ್ತು. ಶೇಖ್‌ನಿಗೆ ತನ್ನ ಅಧಿಕಾರ ಉಳಿಸಿಕೊಳ್ಳಲು 1950ರ ಹೊತ್ತಿಗೆ ಮೆಡಿಟರೇನಿಯನ್ ಸಮುದ್ರದಲ್ಲಿರುವ ಅಮೇರಿಕನ್ ನೌಕಾ ಸೈನ್ಯಕ್ಕೆ ತೈಲ ಸರಬರಾಜಿಗೆ ಬೇಕಾದ 20 ಕೋಟಿ ಡಾಲರುಗಳಷ್ಟು ಬೆಲೆಬಾಳುವ ಪೈಪ್ ಲೈನನ್ನು ಹಾಕಿತ್ತು. ಈ ಪೈಪ್ ಲೈನ್ ಸೌದಿ ಅರೇಬಿಯಾದ ರಾಜತ್ವವನ್ನು, ಅಮೇರಿಕನ್ ಸಾಮ್ರಾಜ್ಯಶಾಹಿಯ ಬಾಲಬಡುಕನಾಗಿ ಈ ಪ್ರದೇಶದಲ್ಲಿ ಎಲ್ಲರಿಗೂ ಸಿಂಹಸ್ವಪ್ನವಾಗಿತ್ತು. ಈ ಪ್ರದೇಶದ ಮತ್ತು ಇತರೆಡೆ ಪ್ರತಿಗಾಮಿ ಚಳುವಳಿಗೆ , ಬೆಂಬಲ ಸೌದಿಗಳ ಮೂಲಕ ಹೋಗುತ್ತಿತ್ತು. ನಿಕರಾಗುವಾದ ಕಾಂಟ್ರಾಗಳಿಗಾಗಲಿ, ಆಫ್‌ಗನ್ ಮುಜಾಹಿದೀನ್‌ಗಳಿಗಾಗಲಿ ಅಂಗೋಲಾದ ಯುನಿಟಾಗಾಗಲಿ ಮತ್ತು ಜಗತ್ತಿನ ಎಲ್ಲಾ ಕಡೆ ಮುಸ್ಲಿಂ ಮೂಲಭೂತವಾದಿ ಗುಂಪುಗಳಿಗೆ ಸೌದಿಯ ಮೂಲಕ ಹೋಗುತ್ತಿತ್ತು.

ಇದರ ಜತೆ ದೇಶದೊಳಗೆ ಅತ್ಯಂತ ಪ್ರತಿಗಾಮಿ ಧಾರ್ಮಿಕ ಮೂಲಭೂತವಾದ ನೀತಿಗಳ ಮಿಶ್ರಣ ಆಶ್ಚರ್ಯಕರವೇನಲ್ಲ. ಶರೀಯತ್‌ನ ಕಟ್ಟಾ ಜಾರಿ ಸೌದಿ ಅರೇಬಿಯಾದಲ್ಲೇ ಆರಂಭವಾದದ್ದು. ಮಹಿಳೆಯರು ಸಾರ್ವಜನಿಕವಾಗಿ ಸಂಗೀತ ನುಡಿಸುವುದು ಶಿಕ್ಷಾರ್ಹ ಅಪರಾಧ. ಸೌದಿ ಅರೇಬಿಯಾದ ಈ ಭಾರಿ ಸಂಪತ್ತಿನ ಒಂದು ಸಣ್ಣ ಭಾಗ ಸಹ ಜನರ ಕಲ್ಯಾಣಕ್ಕ ಹೋಗುವುದಿಲ್ಲ. ಜನತೆ ಮಧ್ಯಯುಗದ ಪಾಳೆಯಗಾರಿ ರೀತಿಯಲ್ಲಿ, ಅದೇ ಜೀವನ ಮಟ್ಟದಲ್ಲಿ ಬದುಕುತ್ತಿದ್ದಾರೆ. ಇದು ಬಹಳ ಮಟ್ಟಿಗೆ ಕುವೈತ್, ಮುಂತಾದ ಇತರ ಶೇಖ್‌ತನಗಳ ಮಟ್ಟಿಗೂ ನಿಜ.

ಅಮೇರಿಕಾದ ತೈಲ ಸಾಮ್ರಾಜ್ಯ

ಈ ಅಪಾಯಕಾರಿ ಸ್ಥಿತಿಯಿಂದ ಅದರ ಫಲವಾದ ಲೂಟಿಯಿಂದ ಅರಬ್ ಜನತೆ ಕಂಗೆಟ್ಟಿದ್ದರೂ ಅಮೇರಿಕಾದ ತೈಲ ಕಂಪನಿಗಳು ಕೊಬ್ಬಿಹೋಗಿವೆ. ಶೇಖ್‌ಗಳು ಸಂಪತ್ತಿನ ಎಲ್ಲಾ ಫಲಗಳನ್ನು ಅನುಭವಿಸುತ್ತಿದ್ದಾರೆ. 1980 ರ ದಶಕದಲ್ಲಿ ಅಮೇರಿಕಾದ ದೊಡ್ಡ ಹತ್ತು ತೈಲ ಕಂಪನಿಗಳ ವಾರ್ಷಿಕ ಮಾರಾಟದ ಮೌಲ್ಯ ನಮ್ಮ ಎಂಟನೇ ಪಂಚವಾರ್ಷಿಕ ಯೋಜನೆಯ ಒಟ್ಟು ಮೊತ್ತದಷ್ಟು ಅಂದರೆ ಆರು ಕೋಟಿ ರೂ.ಗಳು.

ಆದ್ದರಿಂದ ಅಮೇರಿಕಕ್ಕೆ ಈ ಪ್ರದೇಶದ ಆರ್ಥಿಕ-ರಾಜಕೀಯ ಆಗುಹೋಗುಗಳಲ್ಲಿ ಅಷ್ಟು ಆಸಕ್ತಿ. ಸೌದಿ ಅರೇಬಿಯಾದ 'ರಕ್ಷಣೆ' ಬಗ್ಗೆ ಕಾಳಜಿ. ಇದಕ್ಕಾಗಿ ಅವರು ಏನೂ ಮಾಡಲು ಹೇಸುವುದಿಲ್ಲ ಎಂದು ಪದೇ ಪದೇ ರುಜುವಾತು ಮಾಡಿದ್ದಾರೆ,

1953 ರಿಂದ ಈವರೆಗೆ ಅಮೇರಿಕ ಈ ಪ್ರದೇಶದಲ್ಲಿ ಇಪ್ಪತ್ತು ಬಾರಿ ಮಿಲಿಟರಿ ಮಧ್ಯಪ್ರವೇಶ ಮಾಡಿದೆ. ಇದು ಯಾವ ದೇಶದಲ್ಲಿ 'ಪ್ರಜಾಪ್ರಭುತ್ವ', 'ಮಾನವ ಹಕ್ಕು' ಕಾಪಾಡಲೂ ಅಲ್ಲ. ಅಮೇರಿಕನ್ ತೈಲ ಕಂಪನಿಗಳ 'ತೈಲ ಹಕ್ಕು' ಕಾಪಾಡಲು. ಇದರಲ್ಲಿ ಪ್ರಮುಖ ಮಧ್ಯ ಪ್ರವೇಶಗಳ ಪಟ್ಟಿ ಬಾಕ್ಸ್ ನಲ್ಲಿದೆ. ಈ ಇಪ್ಪತ್ತರಲ್ಲಿ ಸುಮಾರು ಹದಿನಾರು ಮಧ್ಯ ಪ್ರವೇಶ ಕಳೆದ ಹತ್ತು ವರ್ಷಗಳಲ್ಲಿ ಆಗಿದೆ. ಈ ಎಲ್ಲಾ ಮಧ್ಯಪ್ರವೇಶದ ಸಾಮಾನ್ಯ ವಿಷಯವೆಂದರೆ, ಅಮೇರಿಕನ್ ಹಿತಾಸಕ್ತಿಗೆ ಧಕ್ಕೆ ಮಾಡುವ ಯಾವುದೇ ಸರಕಾರ ಚಳುವಳಿ, ಶಕ್ತಿಯನ್ನು ನಿರ್ನಾಮ ಮಾಡುವುದು.

ಇರಾನ್-ಇರಾಕ್ ಯುದ್ಧ

ಈಗಿನ ಬಿಕ್ಕಟ್ಟಿಗೂ ಈಗಷ್ಟೇ ಮುಗಿದ ಇರಾನ್-ಇರಾಕ್ ಯುದ್ಧಕ್ಕೂ ಸ್ಥಿರ ಸಂಬಂಧವಿದೆ. ಈ ಯುದ್ಧದಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಯ ದಟ್ಟ ಪಾತ್ರವಿದೆ ಎಂದು ಈಗಷ್ಟೇ ಬೆಳಕಿಗೆ ಬರುತ್ತಿದೆ.

ಇರಾನ್‌ನಲ್ಲಿ ಅಮೇರಿಕನ್ ಬಾಲಬಡುಕ ಕ್ರೂರ ರಾಜ ಇರಾನ್‌ನ ಶಾ ಪತನವಾದಾಗ, ಅರಬರಲ್ಲಿ ಕಂಡುಬಂದ ಸಾಮ್ರಾಜ್ಯ ಶಾಹಿ-ವಿರೋಧಿ ಭಾವನೆಗಳು ಅಮೇರಿಕನ್ ಹಿತಾಸಕ್ತಿಗಳಿಗೆ ಶಾಶ್ವತ ಹಾನಿ ಉಂಟುಮಾಡಬಾರದು. ಇದಕ್ಕಾಗಿ ಇನ್ನೊಂದು ಪ್ರಾದೇಶಿಕ ಕಲಹದ ಅಗತ್ಯವಿದೆ ಎಂದು ಮನಗಂಡ ಅಮೇರಿಕ ಇರಾಕ್‌ನ್ನು ಇರಾನ್‌ನ ಮೇಲೆ ಧಾಳಿ ಮಾಡಲು ಉತ್ತೇಜಿಸಿತು. ಇದಕ್ಕಾಗಿ 1975ರಲ್ಲಿ ಸದ್ದಾಂ ಹುಸೇನ್ ಇರಾನ್ ಜತೆ ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿಯಲು ಪ್ರರೇಪಿಸಿತು. ಯುದ್ಧಕ್ಕೆ ಆರ್ಥಿಕ ಸಹಾಯವನ್ನು ಕುವೈತ್, ಸೌದಿ ಅರೇಬಿಯಾ, ಈಜಿಪ್ತ್ ಮತ್ತು ಜೋರ್ಡಾನುಗಳ ಮೂಲಕ ಒದಗಿಸಿತು. ಅಲ್ಲದೆ ಇರಾಕ್‌ಗೆ ಯುದ್ಧಕಾಲದಲ್ಲಿ ಮಿಲಿಟರಿ ಬೇಹುಗಾರಿಕೆಯಲ್ಲಿ ಸಹಾಯ ಮಾಡಿತು-ಉಪಗ್ರಹ ಫೋಟೋ ಇತ್ಯಾದಿ ಕೊಡುವ ಇದಲ್ಲದೆ ಅತ್ಯಗತ್ಯ ಶಸ್ತ್ರಾಸ್ತ್ರ ಪೂರೈಕೆಯಲ್ಲೂ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿತು.

ಈ ಹಾನಿಕಾರಕ ಯುದ್ಧ ಮುಗಿದ ನಂತರ, ಕುವೈತ್ ಹಿಂದೆ ಅಮೇರಿಕದ ಒತ್ತಡದ ಮೇಲೆ ಇರಾಕ್‌ನ ಸಾಲ ಮಾಫಿ ಮಾಡಲು ಒಪ್ಪಿದ್ದ ಧೋರಣೆಯನ್ನು ಬದಲಾಯಿಸಿತು. ಇದಲ್ಲದೆ ವಿವಾದಾಸ್ಪದ ಕ್ಷೇತ್ರದಿಂದ ಕುವೈತ್ ಒಪ್ಪಂದಕ್ಕಿಂತ ಹೆಚ್ಚು ತೈಲ ತೆಗೆಯುತ್ತಿತ್ತು. ಇರಾಕ್‌ನ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸುತ್ತಿತ್ತು.

ಬದಲಾದ ಪರಿಸ್ಥಿತಿಯಲ್ಲಿ ಕುವೈತ್‌ನ ಆಕ್ರಮಣವನ್ನು ಇರಾಕ್ ಮಾಡಿದ್ದು ಸಾಮ್ರಾಜ್ಯಶಾಹಿ ಸಿಲುಕಿಸಿದ ಜಾಲದಿಂದ ಹೊರಬರಲು. ಇದಕ್ಕಾಗಿ ಆತ ಹಳೆಯ ರಾಷ್ಟ್ರೀಯ ಭಾವನೆಗಳನ್ನು(ಕುತಂತ್ರದ ವಿಭ

ಅಮೇರಿಕನ್ ಮಧ್ಯಪ್ರವೇಶಗಳು ಕೊಲ್ಲಿಯಲ್ಲಿ

1953	-ಇರಾನ್‌ನ ಸರಕಾರ ತೈಲ ಕಂಪನಿಗಳನ್ನು ರಾಷ್ಟ್ರೀಕರಿಸಿದಾಗ ಸಿಐಎ ಸಂಘಟಿಸಿದ ಕ್ಷಿಪ್ರ ಕ್ರಾಂತಿಯಲ್ಲಿ ಶಾ ಅಧಿಕಾರಕ್ಕೆ
1963	-ಇರಾಕ್‌ನಲ್ಲಿಬಾತ್ ಪಕ್ಷದಿಂದ ಕ್ಷಿಪ್ರ ಕ್ರಾಂತಿ ಕಮ್ಯುನಿಸ್ಟರ ನರಮೇಧದಲ್ಲಿ ಅಮೇರಿಕನ್ನರ ಪಾತ್ರ
1967	-ಅಮೇರಿಕನ್ ಬೆಂಬಲದೊಂದಿಗೆ ಇಸ್ರೇಲಿನಿಂದ ಸಿನಾಯ್, ಪಶ್ಚಿಮ ದಂಡೆ ಮತ್ತು ಗಾಜಾ ಪಟ್ಟಿಯ ವಶ
1973	-ಈಜಿಪ್ತ್-ಇಸ್ರೇಲ್ ಯುದ್ಧದ ಸಮಯದಲ್ಲಿ ಅಮೇರಿಕನ್ ಅಣ್ವಸ್ತ್ರ ಪಡೆಗಳಿಗೆ ತಯಾರಿರಲು ಆದೇಶ
1974	-ಸೌದಿ ಅರೇಬಿಯಾದ ಜತೆ 'ವಿಶೇಷ ಸಂಬಂಧ' ಓಪೆಕ್ ದೇಶಗಳ ವಿರುದ್ಧ ಮಿಲಿಟರಿ ಕ್ರಮದ ಬೆದರಿಕೆ
1979	-ಶಾನ ಪತನದ ಸಮಯದಲ್ಲಿ ಮಧ್ಯಪ್ರವೇಶಿಸಲು ಅಮೇರಿಕನ್ ಪಡೆಗಳು. ಇಸ್ರೇಲಿಗೆ ಅಮೇರಿಕನ್ ಮಿಲಿಟರಿ ನೆರವು ನಾಲ್ಕು ಪಟ್ಟು
1980	-ಇರಾನ್ ಮೇಲೆ ಯುದ್ಧ ಸಾರಲು ಅಮೇರಿಕನ್ ಸನ್ನಾಹ
	ಇರಾನ್ ಮೇಲೆ ಇರಾಕ್ ಯುದ್ಧ. ಅಮೇರಿಕನ್ ಕೈವಾಡ
	-ಒಮ್ಮನ್‌ನಲ್ಲಿ ಅಮೇರಿಕನ್ ನೌಕಾ ನೆಲೆ ಸ್ಥಾಪನೆ. ಸೌದಿ ಅರೇಬಿಯಾಕ್ಕೆ
	ಆಕಾಶ-ನಿರೀಕ್ಷಕ ವಿಶೇಷ ವಿಮಾನಗಳು: ಸೌದಿ ಅರೇಬಿಯಾಕ್ಕೆ
	-ಅಮೇರಿಕನ್ ನೆರವಿನಿಂದ ಟರ್ಕಿಯಲ್ಲಿ ಸೇನಾ ಕ್ಷಿಪ್ರ ಕ್ರಾಂತಿ ಅಮೇರಿಕನ್ ನೆಲೆಗಳ ಹೆಚ್ಚಳ
1981	ಲಿಬ್ಯನ್ ವಿಮಾನಗಳ ಮೇಲೆ ಮೆಡಿಟರೇನಿಯನ್‌ನಲ್ಲಿ ಅಮೇರಿಕದ ಆಕ್ರಮಣ
	-ಅಮೇರಿಕನ್ ಸೇನೆಯ ನೆರಳಿನಲ್ಲಿ ಇಸ್ರೇಲ್‌ನಿಂದ ಸಿರಿಯಾದ ಗೋಲನ್ ಪ್ರದೇಶ ವಶ
1982	ಸೌದಿ ಅರೇಬಿಯಾ, ಜೋರ್ಡಾನ್, ಒಮ್ಮನ್, ಮೊರಾಕ್ಕೊ, ಈಜಿಪ್ತ್ ಜತೆ ಅಮೇರಿಕಾದ ಮಿಲಿಟರಿ ಒಪ್ಪಂದ
	-ಲೆಬನಾನ್ ಮೇಲೆ ಇಸ್ರೇಲ್ ಆಕ್ರಮಣ, ಲೆಬನಾನ್‌ನಿಂದ ಪಿಎಲ್‌ಓ ಓಡಿಸಲು ಅಮೇರಿಕನ್ ನಾವಿಕ ಸೈನಿಕರು ಲೆಬನಾನಿನಲ್ಲಿ
1983	-ಬೀರುತ್‌ನ ಮೇಲೆ ಅಮೇರಿಕಾದ ನೌಕಾ ಸೇನೆ, ವಾಯು ಸೇನೆಗಳಿಂದ ಬಾಂಬ್‌ಧಾಳಿ
1984	-ಇರಾಕ್‌ನ ವಿಮಾನವೊಂದರ ಮೇಲೆ ಅಮೇರಿಕಾದ ಯುದ್ಧ ಹಡಗೊಂದರಿಂದ ಧಾಳಿ
	-ಅಮೇರಿಕನ್ ನೆಲೆಗಳಲ್ಲಿ ಸೈನಿಕರ ಸಂಖ್ಯೆ 3 ಲಕ್ಷಕ್ಕೆ ಏರಿಕೆ
1986	-ಲಿಬ್ಯಾದ ಮೇಲೆ ಅಮೇರಿಕನ್ ಬಾಂಬು ಧಾಳಿ
1987	-ಪರ್ಶಿಯನ್ ಕೊಲ್ಲಿಗೆ ಪಾಶ್ಚಿಮಾತ್ಯ ಯುದ್ಧ ಹಡಗುಗಳ ಪ್ರವೇಶ.
	ಇರಾನ್-ಅಮೇರಿಕನ್ ಯುದ್ಧ ಹಡಗುಗಳ ನಡುವೆ ಕ್ಷಿಪಣಿ ಧಾಳಿ
1988	-ಇರಾನ್ ಪ್ರಯಾಣಿಕ ವಿಮಾನದ ಮೇಲೆ ಅಮೇರಿಕನ್ ಧಾಳಿ 290 ಜನರ ಮರಣ

ಜನೆ) ಬಳಸಿಕೊಂಡರು

ಈ ಸದ್ದಾಂ ಹುಸೇನ್ ಭಾರಿ ಪ್ರಜಾಸತ್ತಾತ್ಮಕ ಆಡಳಿತಗಾರ ಅಂತಲ್ಲ. 1975 ಮತ್ತು 1979 ನಡುವೆ ಇರಾಕ್‌ನ ಆಳುವ ಪಕ್ಷ ಬಾತ್ ಪಾರ್ಟಿ. ಪ್ರಮುಖ ವಿರೋಧ ಪಕ್ಷವಾದ ಇರಾಕ್ ಕಮ್ಯುನಿಸ್ಟ್ ಪಕ್ಷದ ಮೇಲೆ ಭಾರಿ ದಮನಕಾರಿ ಕೃತ್ಯಗಳನ್ನು ಎಸಗಲಾಯಿತು. ಸಾವಿರಾರು ಕಮ್ಯುನಿಸ್ಟರ ಕಗ್ಗೊಲೆ, ಬಂಧನ ಹಿಂಸಾಚಾರ ನಡೆಯಿತು. ಕಮ್ಯುನಿಸ್ಟ್ ಪಕ್ಷ ಭೂಗತವಾಯಿತು. ಇವರಲ್ಲಿ 1 958ರಲ್ಲಿ ರಾಜಮನೆತನದ ವಿರುದ್ಧ ಹೋರಾಟದಲ್ಲಿ ಬಾತ್ ಪಕ್ಷದ ಜತೆ ಜಂಟಿ ಹೋರಾಟ ನಡೆಸಿದ ಎಷ್ಟೋ ದೇಶಪ್ರೇಮಿಗಳು ಸೇರಿದ್ದರು. ಇದಕ್ಕಿಂತ ಹಿಂದೆ 1963ರಲ್ಲೂ ಬಾತ್ ಪಾರ್ಟಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಾಗ ಕಮ್ಯುನಿಸ್ಟರ ಕೊಲೆ ನಡೆಸಿತ್ತು. ಇದರಲ್ಲಿ ಕಮ್ಯುನಿಸ್ಟರ ಪಟ್ಟಿ ಕೊಟ್ಟವರು ಅಮೇರಿಕನ್ನರೇ ಆಗಿದ್ದರು.

ಈಗಿನ ಪರಿಸ್ಥಿತಿ

ಎಂತಹ ವಿಪರ್ಯಾಸ! ಈಗ ಸದ್ದಾಂ ಹುಸೇನ್ ಅರಬ್ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ-ವಿರೋಧದ ಪ್ರತೀಕ. ಇದು ಹೇಗೆ ಸಾಧ್ಯವಾಯಿತು? ಅರಬ್ ಜನತೆಯ ತಮ್ಮ ದೇಶಗಳಲ್ಲಿನ ಪ್ರಜಾಸತ್ತಾತ್ಮಕ ಹೋರಾಟ ಮತ್ತು ಎಲ್ಲಾ ಅರಬ್ಬರ ಸಾಮ್ರಾಜ್ಯಶಾಹಿ--ವಿರೋಧ ಒಂದಕ್ಕೊಂದು ಸೇರಿಕೊಳ್ಳುತ್ತಿರುವ ಪ್ರಮುಖ ಬೆಳವಣಿಗೆ ಕಂಡು ಬಂದಿದೆ. ಇದಕ್ಕೆ ಕುವೈತ್‌ನ (ಏಕೆ ಎಲ್ಲಾ ಶೇಖ್‌ಗಳ) ಶೇಖ್‌ನ ರಾಜಕೀಯ ಅಧಿಕಾರದ ರಾಜಕೀಯ ಪಾವಿತ್ರ್ಯದ ಬಗ್ಗೆ ಅರಬರಿಗೆ ಯಾವುದೇ ನಂಬಿಕೆ ಇಲ್ಲ ಎನ್ನುವುದೂ ಕಾರಣ. ಅಲ್ಲದೆ ಸದ್ದಾಂ ಹುಸೇನ್ ಇರಾಕ್-ಕುವೈತ್ ಆಕ್ರಮಣದ ಪರಿಹಾರಕ್ಕೂ, ಈ ಪ್ರದೇಶದಲ್ಲಿ (ಸಾಮ್ರಾಜ್ಯಶಾಹಿ ಕುಮ್ಮಕ್ಕಿನಲ್ಲಿ) ನಡೆಯುವ ಇಂತಹಎಷ್ಟೋ ಆಕ್ರಮಣಗಳ (ಪ್ಯಾಲೆಸ್ಟೇನ್ ಸೇರಿದಂತೆ) ಪರಿಹಾರಕ್ಕೂ ಸಂಬಂಧ ಕಲ್ಪಿಸಿರುವುದೂ ಸದ್ದಾಂ ಹುಸೇನ್‌ನ ಜನಪ್ರೀಯತೆಗೆ ಕಾರಣವಾಗಿದೆ. ಅಮೇರಿದ ಮಹಾ ಸೈತಾನನ ವಿರುದ್ಧ ಯಾವುದೇ ಸರಕಾರ, ವ್ಯಕ್ತಿ ಅರಬರಿಗೆ ಹೀರೋ ಆಗುತ್ತಾನೆ.

ತೈಲ ಬೆಲೆಯಲ್ಲಿ ವೃದ್ಧಿ ಈ ಬಿಕ್ಕಟ್ಟಿನ ನೇರ ಪರಿಣಾಮವೇನೂ ಅಲ್ಲ. ಏಕೆಂದರೆ ಸೌದಿ ಅರೇಬಿಯಾ ಇರಾಕ್‌ನ ತೈಲ ಉತ್ಪಾದನೆ ಕೊರತೆ ತುಂಬಿ ಕೊಡುತ್ತಿದೆ. ತೈಲ ಬೆಲೆ ಏರಿಕೆಗೆ ಈ ಬಹುರಾಷ್ಟ್ರೀಯ ಕಂಪನಿಗಳ ಲಾಭದಾಸೆಯೇ ಕಾರಣ. ಇದು ಮೂರನೆಯ ಜಗತ್ತಿನ ದೇಶಗಳು ಆರ್ಥಿಕತೆ. ಮೇಲೆ ಮಾಡುತ್ತಿರುವ ಪರಿಣಾಮವೂ ಅಮೇರಿಕದ ಕ್ರಮಕ್ಕೆ ಬೆಂಬಲಿಗರನ್ನೊದಗಿಸಿಲ್ಲ. ಅಮೇರಿಕ ಇರಾಕ್‌ನ ಮೇಲೆ ದಿಗ್ಬಂಧನ ಹೊರಿಸಿದ ಅಮಾನುಷ ರೀತಿ(ಆಹಾರ, ಔಷಧ, ಸಾಮಗ್ರಿ), ಇರಾಕ್-ಕುವೈತ್‌ಗಳಲ್ಲಿ ಸಿಕ್ಕಿಬಿದ್ದ ವಿದೇಶಿ ನಾಗರೀಕರ ಪಾಡು- ಅಮೇರಿಕನ್ ಸಾಮ್ರಾಜ್ಯಶಾಹಿಯ ಕುಖ್ಯಾತಿಯನ್ನು ಇನ್ನಷ್ಟು ಹೆಚ್ಚಿಸಿದೆ.

ಕುವೈತ್‌ನ ಆಕ್ರಮಣ, ಈ ಪ್ರದೇಶದ ರಾಜಪ್ರಭುತ್ವಗಳ ಬುಡವನ್ನೇ ಅಲುಗಾಡಿಸಿದೆ. ಅವುಗಳ ಟೊಳ್ಳನ್ನು ಬಯಲು ಪಡಿಸಿದೆ. ಇಂತಹ ರಾಜಪ್ರಭುತ್ವಗಳಿಗೆ ಜನರ ಬೆಂಬಲ ಏನೇನೂ ಇಲ್ಲದಿರುವುದನ್ನು ಬಯಲುಪಡಿಸಿದೆ. ಈ ರಾಜಪ್ರಭುತ್ವಗಳ ಜತೆ ಅಮೇರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಯೂ ಬೆಸೆದು ಕೊಂಡಿರುವುದರಿಂದ ಅದರ ಬುಡಕ್ಕೂ ಏಟು ಕೊಟ್ಟಿದೆ. ಇದೇ ಅಮೇರಿಕ ಹಿಂದೆಂದೂ ಕಾಣದ ಪ್ರಮಾಣದಲ್ಲಿ ಸೈನ್ಯ ತೋಳೇರಿಸಲು ಕಾರಣ.

ನೆಲ್ಸನ್ ಮಂಡೇಲಾ ದೂರದರ್ಶನದ ಸ್ಟುಡಿಯೋದಲ್ಲಿ 30 ನಿಮಿಷಗಳ ಕಾಲ ಭಾರತದ ಹಲವು ಯುವಕ ಯುವತಿಯರ ಜತೆ ಸಂಭಾಷಣೆ ನಡೆಸಿದರು. ಮಹಾತ್ಮ ಗಾಂಧಿಯ ಮೊಮ್ಮಗ ರಾಜಮೋಹನ ಗಾಂಧಿ ಕಾರ್ಯಕ್ರಮ ನಡೆಸಿಕೊಟ್ಟರು. ನೆರೆದಿದ್ದ ಯುವಕ-ಯುವತಿಯರ ಹತ್ತು ಹಲವು ಪ್ರಶ್ನೆಗಳಿಗೆ ನೆಲ್ಸನ್ ಮಂಡೇಲಾ ಸ್ಪಷ್ಟ, ಗಂಭೀರ, ಉತ್ತರ ನೀಡಿದರು. ಕೆಲವು ಯುವಕ-ಯುವತಿಯರು 'ಸಾರ್' ಎಂದರೆ, ಒಬ್ಬ ಕಾಮ್ರೇಡ್ ನೆಲ್ಸನ್ ಮಂಡೇಲಾ ಎಂದ. ಪ್ರಶ್ನೆಗಳು ಅವರ ಬಾಕ್ಸಿಂಗ್ ಜೀವನದ ವಿಷಯದಿಂದ ಹಿಡಿದು, ಅಹಿಂಸೆ, ಪೂರ್ವ ಯೂರೋಪಿನ ಬದಲಾವಣೆಗಳು, ವಿದ್ಯಾರ್ಥಿ-ಯುವಜನರ ಪಾತ್ರ ಇತ್ಯಾದಿ ಹಲವಾರು ವಿಷಯಗಳ ಬಗ್ಗೆ ಇತ್ತು. ಒಂದು ಪ್ರಶ್ನೆಗೆ ಉತ್ತರಿಸುತ್ತಾ ಮಂಡೇಲಾ ಮಂಡಲ್ ಕಮಿಷನ್ ಬಗೆಗೂ ತಮ್ಮ ಅಭಿಪ್ರಾಯ (ಮೆಚ್ಚುಗೆ) ವ್ಯಕ್ತಪಡಿಸಿದರು. (ಹೆಸರನ್ನು ಹೇಳದೆ) ಮೀಸಲಾತಿ-ವಿರೋಧಿ, ಕೋಮುವಾದಿ ಅತಿವಾದಿಗಳ ನಾಯಕತ್ವ ಭಾರತದಂತಹ ದೇಶಕ್ಕೆ ಒಳ್ಳೆಯದಲ್ಲ ಎಂದರು. ಈ ಸಂಭಾಷಣೆಯ ಸಾರಾಂಶ ಈ ಕೆಳಗಿದೆ.

'ಮಂಡೇಲಾ ಸಾರ್, ಏನನ್ನುತ್ತೀರಿ?

ಬಾಕ್ಸಿಂಗ್ ಜೀವನದ ಬಗ್ಗೆ

-ಬಾಕ್ಸರ್ ಜೀವನದ ಬಗ್ಗೆ ಹಲವು ಕಹಿ ನೆನಪುಗಳೂ ಇವೆ. ಸವಿ ನೆನಪುಗಳು ಇವೆ. ಆಗಿನ ವಿಶ್ವ ಚಾಂಪಿಯನ್ ನಮಗೆ ಹೀರೋ ಆಗಿದ್ದರು. ಅವರನ್ನು ಅನುಸರಿಸಲು ಹೋಗಿ ಫಜೀತಿಗೆ ಸಿಕ್ಕಿಹಾಕಿಕೊಳ್ಳುತ್ತಿದ್ದೆವು. ಕರಿಯರಲ್ಲಿ ಸುಮಾರು ಅನುಕೂಲಸ್ಥರಾದರೂ, ಬಿಳಿಯರಿಗೆ ಹೋಲಿಸಿದರೆ ಬಡವರೇ ಆದ ನನ್ನ ಪಾಲಕರು ನನ್ನನ್ನು ತಿರುಗಾಟಕ್ಕೆ ಕಳಿಸಲು ಶಕ್ತರಾಗಿರಲಿಲ್ಲ. ಬಾಕ್ಸಿಂಗ್ ಸ್ಪರ್ಧೆಯ ನೆವದಲ್ಲಿ ನನಗೆ ದೇಶ ಸುತ್ತಿದ ಹಾಗಾಯಿತು. ಇದು ಮುಂದೆ ನನ್ನ ರಾಜಕೀಯ ಜೀವನದಲ್ಲಿ ಸಾಕಷ್ಟು ಅನುಭವ ನೀಡಿತು. ಕಹಿ ನೆನಪೆಂದರೆ ಚಳಿಗಾಲದಲ್ಲಿ ಬಾಕ್ಸಿಂಗ್. ಚಳಿಗಾಲದಲ್ಲಿ ಕೆಲವೇ ಬಾಕ್ಸರ್‌ಗಳು ಸ್ಪರ್ಧೆಗೆ ಉಳಿಯುತ್ತಿದ್ದರು. ಏಕೆಂದರೆ ಏಟು ಬಿದ್ದರೆ ಜೋರಾಗಿ ನೋಯುತ್ತದೆ!!

ಜೈಲಿನಲ್ಲಿದ್ದು ದೇಶದ, ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಜ್ಞಾನವಿರುವುದು ಹೇಗೆ

ಜೈಲಿನಲ್ಲಿ ನಾವು ಪ್ರಾಮಾಣಿಕರಾಗಿದ್ದರೆ, ಸುದ್ದಿ ಓದಲಿಕ್ಕೆ ಪೇಪರ್ ಓದಲಿಕ್ಕೆ ದೇಶದ ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಲಿಕ್ಕೆ ಅವಕಾಶವಿರುದಿಲ್ಲ. ಪ್ರಾಮಾಣಿಕತೆ ನಾಯಕರಿಗೆ ಅತ್ಯವಶ್ಯವಾದರೂ, ಜೈಲಿನೊಳಗೆ ನಾವು ಇಂತಹ ವಿಷಯಗಳ ಬಗ್ಗೆ ನಿಯಮಿತವಾಗಿ ಸುದ್ದಿ ಪಡೆಯಲು ಹಲವಾರು ವ್ಯವಸ್ಥೆ ಮಾಡಿಕೊಂಡಿದ್ದೆವು. ಅದರಲ್ಲಿ ಒಂದು ನಮ್ಮನ್ನು ಜೈಲಿನಿಂದ ಹೊರಗೆ ಶ್ರಮದ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅದರಲ್ಲಿ ಕಸದ ಗುಡ್ಡೆ ಶುಚಿಗೊಳಿಸುವುದು ಮುಂತಾದವು ಇರುತ್ತಿದ್ದವು. ನಾವು ಕೆಲಸಕ್ಕೆ ಹೋಗುವ ಕಡೆ ಕಸದ ಗುಡ್ಡೆಯಲ್ಲಿ ನಮಗೆ ಪೇಪರು, ಇತರ ಪುಸ್ತಿಕೆಗಳು, ದಾಖಲೆಗಳು ನಮಗೆ ಸಿಗುವಂತೆ ಎಎನ್‌ಸಿ ಕಾರ್ಯಕರ್ತರು ವ್ಯವಸ್ಥೆ ಮಾಡುತ್ತಿದ್ದರು. ಇದಲ್ಲದೆ ವರ್ಣಭೇದ ನೀತಿ ಎಂತಹುದೇ ಕ್ರೂರ, ಕರಾಳ, ಹೃದಯಹೀನ ವ್ಯವಸ್ಥೆಯಾದರೂ ಅದರೊಳಗೆ ಕೆಲವು ಹೃದಯವಂತ, ನಮ್ಮ ಉದ್ದೇಶಗಳ ಬಗ್ಗೆ, ಹೋರಾಟದ ಬಗ್ಗೆ ಅನುಕಂಪವಿರುವವರು ಜೈಲು ವ್ಯವಸ್ಥೆಯೊಳಗೆ ಇರುತ್ತಿದ್ದರು. ಅವರ ಸಹಾಯದಿಂದಲೂ ಇದು ಸಾಧ್ಯವಾಗುತ್ತಿತ್ತು.

27 ವರ್ಷಗಳ ಜೈಲು ಜೀವನದಲ್ಲಿ ಕರಿಯರ ಮುಕ್ತಿ ಹೋರಾಟದ ಅಂತಿಮ ಗುರಿಯ ಬಗ್ಗೆ ಅಚಲರಾಗಿದ್ದ ಬಗ್ಗೆ

ಇದು ಸಾಧ್ಯವಾದದ್ದು ನಮ್ಮ ಗುರಿಯತ್ತ ಸಾಗುವಲ್ಲಿ ನಾವು ಹೆಚ್ಚೆಚ್ಚು ಸಹವರ್ತಿಗಳನ್ನು ಗಳಿಯದನ್ನು ಗದ್ದುಕೊಳ್ಳುತ್ತಾ ಹೋಗುವ ಪರಿಸ್ಥಿತಿ ಇದ್ದುದರಿಂದ ನಮ್ಮ ಗುರಿಯತ್ತ ನಡೆಯುವ ಹೋರಾಟ ನಮ್ಮ ಸಂಘಟನೆ ಎಎನ್‌ಸಿ ಬಲಶಾಲಿಯಾಗುತ್ತಾ ನಡೆದದ್ದು ಇದಕ್ಕೆ ಪೂರಕವಾಯಿತು. ನಮ್ಮ ಜನರ ಸ್ವಾತಂತ್ರ್ಯಕ್ಕೆ ಎಡೆಬಿಡದ ಹೋರಾಟವೇ ಅವರ ದೃಢ ನಿರ್ಧಾರವೇ ನಮ್ಮನ್ನು ಜೈಲು ಜೀವನದಲ್ಲಿಯೂ ನಮ್ಮ ಗುರಿಯಿಂದ ವಿಚಲಿತರಾಗದಂತೆ ಮಾಡಿತು. ನಮಗೆ ಬೇಕಾದ ನೈತಿಕ ಸ್ಥೈರ್ಯ ನೀಡಿತು.

ಮಂಡೇಲಾರ ಮಹತ್ವದ ಬಗ್ಗೆ ಮಂಡೇಲಾ

-ನಾನು ಸೇರಿರುವ ಈ ಎಎನ್‌ಸಿ ಎಂಬ ಸಂಸ್ಥೆಯ ಮುಖ್ಯ ಸಂಘಟನಾ ತತ್ವವೆಂದರೆ--ಸಾಮೂಹಿಕ ನಾಯಕತ್ವ. ಇದರಲ್ಲಿ ಒಬ್ಬನೇ ವ್ಯಕ್ತಿಗೆ ಬಹಳ ಮಹತ್ವವಿಲ್ಲ. ಎಎನ್‌ಸಿಯನ್ನು ಬಲಶಾಲಿಯಾಗಿ ಕಟ್ಟಿಬೆಳೆಸುವಲ್ಲಿ ನೇರವಾಗಿ ನನ್ನ ಪಾತ್ರ ಚಿಕ್ಕದು, ನನ್ನ ಬಂಧನದ ಮೊದಲಿನ ಕೆಲವು ವರ್ಷಗಳಲ್ಲಿ ಮಾತ್ರ. ಆದರೆ ಕಳೆದ 30 ವರ್ಷಗಳ ಕಾಲ ಅತ್ಯಂತ ದಮನಕಾರಿ ಸಮಯದಲ್ಲಿ, ಭೂಗತರಾಗಿದ್ದುಕೊಂಡು ನಾಯಕತ್ವ ವಹಿಸಿದವರು ನಿಜವಾಗಿಯೂ ನನ್ನ ಮಿತ್ರ ಎಎನ್‌ಸಿಯ ಅಧ್ಯಕ್ಷ ಒಲಿವರ್ ತಾಂಬೋ. ಆತ ನನ್ನ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಸಹಪಾಠಿ.

ಅಹಿಂಸೆಯ ಪ್ರಸ್ತುತತೆಯ ಬಗ್ಗೆ

ಅಹಿಂಸೆ, ಶಾಂತಿಯುತವಾಗಿ ಯಾವುದೇ ಸಮಸ್ಯೆಯ ಪರಿಹಾರವನ್ನು ಕಂಡುಹಿಡಿಯಲು, ಅತ್ಯಂತ ಸೂಕ್ತ ಮಾರ್ಗ ಎನ್ನುವುದಕ್ಕೆ ಯಾವುದೇ ಅನುಮಾನವಿಲ್ಲ. ಆ ರೀತಿಯಲ್ಲಿ ಗಾಂಧೀಜಿ ಅನುಸರಿಸಿದ ಅಹಿಂಸಾತ್ಮಕ ಪಥದ ಪ್ರಸ್ತುತತೆ ಬಗ್ಗೆ ಅನುಮಾನವಿಲ್ಲ. ಆದರೆ ಎಷ್ಟೋ ಸಂದರ್ಭಗಳಲ್ಲಿ ವ್ಯವಸ್ಥೆ ಎಷ್ಟು ಹಿಂಸಾತ್ಮಕವಾಗಿರುತ್ತದೆಂದರೆ, ಅಹಿಂಸೆಯಿಂದ ಕದಲುವುದಿಲ್ಲ ಎನ್ನುವುದೆಂದರೆ ಹೋರಾಟ ಬಿಟ್ಟುಕೊಟ್ಟಂತೆ. ದಮನ ಒಪ್ಪಿಕೊಂಡಂತೆ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಇಪ್ಪತ್ತು ವರ್ಷಗಳಿಗೂ ಹೆಚ್ಚಿಗೆ ಅಹಿಂಸಾ ನೀತಿಯಿಂದ ಕದಲಿರಲಿಲ್ಲ. ಆದರೆ 50ರ ದಶಕದಲ್ಲಿ ಮನೆಯಲ್ಲಿ ಕುಳಿತ ಕರಿಯನನ್ನು ಹುಡುಕಿ ತೆಗೆದು ಬಡಿಯುವುದು, ಕೆಲಸಕ್ಕೆ ಎಳೆದೊಯ್ಯುವುದು, ಯಾವುದೇ ರೀತಿಯ ಮಾನವ ಹಕ್ಕುಗಳಿಂದ ವಂಚಿತವಾದಾಗ ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳದೆ -ವರ್ಣಭೇಧ ವ್ಯವಸ್ಥೆಯ ವ್ಯವಸ್ಥಿತ ಹಿಂಸಾಚಾರಕ್ಕೆ ಪ್ರತಿಹಿಂಸೆ ಮಾಡದೆ ವಿಧಿಯಿರಲಿಲ್ಲ. ಅದರಲ್ಲೂ ಮಾನವ ಜೀವ ಹಾನಿ ಆದಷ್ಟೂ ಆಗದಂತೆ ವರ್ಣಭೇಧದ ಆರ್ಥಿಕತೆ ಕುಸಿಯುವಂತಹ ಹಿಂಸಾಚಾರಕ್ಕೆ ನಾವು ಪ್ರಾಶಸ್ತ್ಯ ನೀಡುತ್ತಿದ್ದೆವು. ಇವತ್ತಿಗೂ ನಾವು ಶಾಂತಿಯುತ ಕ್ರಮಗಳು, ಹಿಂಸಾತ್ಮಕ ಹೋರಾಟಕ್ಕಿಂತ ಉತ್ಕೃಷ್ಟವಾದದ್ದು ಎಂದು ನಂಬುತ್ತೇನೆ. ಆದರೆ ಅದಕ್ಕೆ ಅವಕಾಶ ಸಿಗಬೇಕು.

ಜನರನ್ನು ಒಡೆದು ಆಳುವ ನೀತಿಯ ಬಗ್ಗೆ

ಇದು ಎಲ್ಲ ಶೋಷಕರ ಪ್ರಮುಖ ಆಯುಧ. ಹಿಂದೆ ವಸಾಹತುಶಾಹಿಯಾಗಲಿ, ಸಾಮ್ರಾಜ್ಯಶಾಹಿಯಾಗಲಿ ನಮ್ಮಲ್ಲಿನ ವರ್ಣಭೇಧ ವ್ಯವಸ್ಥೆಯಾಗಲಿ ಈ ಆಯುಧವನ್ನು ಬಳಸುತ್ತದೆ. ಕರಿಯರಲ್ಲಿರುವ ವಿವಿಧ ಜನಾಂಗದ ಆಧಾರದ ಮೇಲೆ ಜನರಿಗೆ ಬೇರೆಬೇರೆಯಾದ ಜಾಗ ಕೊಡುವ 'ಹೋಮ್ ಲ್ಯಾಂಡ್' ನೀತಿ, ಕರಿಯರನ್ನು ಒಡೆದು ಆಳುವ ಇಂತಹ ನೀತಿಯ ರೂಪ. ಆದರೆ ಇದನ್ನು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್(ಎಎನ್‌ಸಿ) ಮೊದಲಿಂದಲೂ ನಿರಾಕರಿಸಿತ್ತು. ಎಎನ್‌ಸಿ ಕರಿಯರ ಒಳ ಪಂಗಡಗಳ ಆಧಾರದ ಮೇಲೆ ಒಡೆಯುವುದನ್ನು ಮಾತ್ರವಲ್ಲ ಬರಿಯ ಕರಿಯರ ಸಂಘಟನೆ ಮಾತ್ರ ಆಗಿರಲೂ ನಿರಾಕರಿಸಿತ್ತು. ಬಾರತೀಯ ಮೂಲದ ಜನರು ಸಂಘಟಿಸಿದ ಕಾಂಗ್ರೆಸ್‌ನ ಜತೆ ಮೊದಲಿಂದಲೂ ಸಂಪರ್ಕ ಹೊಂದಿತ್ತು. ಆಮೇಲೆ ಬಹಳಷ್ಟು ಭಾರತೀಯ ಮೂಲದವರು ಎಎನ್‌ಸಿಯ ಸದಸ್ಯರಾದರು. ಇದೇ ರೀತಿ ಇತರ ಕರಿಯರೂ, ಬಿಳಿಯರೂ ಅಲ್ಲದ ಜನಾಂಗಗಳ ಜತೆ ಸಂಪರ್ಕ ಸಾಧಿಸಿ ಅವರನ್ನೂ ಒಳಗೊಂಡಿತ್ತು. ಎಎನ್‌ಸಿ ಬಿಳಿಯರಲ್ಲಿ ಇರುವ ವರ್ಣಭೇಧ ನೀತಿಯನ್ನು ನಿರಾಕರಿಸುವ ಪ್ರಗತಿಪರರನ್ನು ಸಂಘಟನೆಯೊಳಗೆ ಸ್ವಾಗತಿಸಿತು. ಅಲ್ಲದೆ ಪ್ರಗತಿಪರ ಪ್ರಜಾಸತ್ತಾತ್ಮಕ ಬಿಳಿಯರ ಸಂಘಟನೆಗಳ ಜತೆ ಜಂಟಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿತ್ತು. ಇಂದೂ ವರ್ಣಭೇಧ ವ್ಯವಸ್ಥೆಯ ಅವಸಾನದ ಸ್ಥಿತಿಯಲ್ಲಿಯೂ ಈ ನೀತಿಯನ್ನು ಮುಂದುವರೆಸುತ್ತಿದ್ದಾರೆ. ಈಗ ದ. ಆಫ್ರಿಕಾದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ಕರಿಯರ ಒಳಗುಂಪುಗಳ ನಡುವಣ ಕಲಹ ಎಂದು ನಮ್ಮ ಆಳುವ ಅಲ್ಪ ಸಂಖ್ಯಾತ ಸರಕಾರ , ಸಾಮ್ರಾಜ್ಯ ಶಾಹಿ ಬಿಂಬಿಸಲು ಪ್ರಯತ್ನಿಸುತ್ತಿದೆ. ಇದು ನಿಜವಲ್ಲ. ಇದು ವರ್ಣಭೇಧ ವ್ಯವಸ್ಥೆಯ ಜತೆ ಶಾಮೀಲಾಗಿರುವ ಕೆಲವು ಕರಿಯ ನಾಯಕರ ಜತೆ ಸೇರಿಕೊಂಡು ಎಎನ್‌ಸಿಯ ಮೇಲೆ ಹರಿಯಬಿಟ್ಟಿರುವ ಹಿಂಸಾಚಾರ.

ಹಂಗೇರಿ ದ.ಆಫ್ರಿಕಾದ ಮಂತ್ರಿಗಳನ್ನು ಆಹ್ವಾನಿಸಿರುವ ಬಗ್ಗೆ

ಪೂರ್ವ ಯೂರೋಪಿನಲ್ಲಿ ಆಗುತ್ತಿರುವ ಬದಲಾವಣೆಗಳು ದುರದೃಷ್ಟಕರ ಎನಿಸುತ್ತಿದೆ. ಆದರೆ ಪೂರ್ವ ಯೂರೋಪಿನಲ್ಲಿ ನಿಜವಾಗಿಯೂ ಏನು ನಡೆಯುತ್ತಿದೆ ಎಂದು ಸರಿಯಾಗಿ ಅರ್ಥಮಾಡಿಕೊಳ್ಳಲು ಕಷ್ಟ. ಏಕೆಂದರೆ ಸಾಮ್ರಾಜ್ಯಶಾಹಿ ನಿಯಂತ್ರಣದಲ್ಲಿರುವ ಮಾಧ್ಯಮಗಳ ವರದಿಗಳ ಆಧಾರದ ಮೇಲೆ ಇದನ್ನು ಮಾಡಬಾರದು. ಈ ಮಾಧ್ಯಮಗಳ ಕಣ್ನೋಟ ಸರಿಯಾಗಿಲ್ಲ ಎನ್ನುವುದು ಸ್ಪಷ್ಟ. ಪೂರ್ವಯೂರೋಪಿನ ದೇಶಗಳು ತಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಉತ್ತರ ಕಂಡು ಕೊಳ್ಳುತ್ತವೆ ಎಂದು ಹಾರೈಸುತ್ತೇನೆ. ಆದರೂ ಹಂಗೇರಿಯ ಈ ನಿರ್ಧಾರ ತೀರಾ ದುರದೃಷ್ಟಕರ ಎಂದು ಹೇಳದೆ ವಿಧಿಯಿಲ್ಲ. ಇದು ಅಂತರರಾಷ್ಟ್ರೀಯ ಸಮುದಾಯ ತೆಗೆದುಕೊಂಡಿರುವ ನಿರ್ಧಾರಕ್ಕೆ ವಿರುದ್ಧವಾದದ್ದು. ಒಬ್ಬ ನಾಗರೀಕ ಒಂದು ವೋಟಿನ ಆಧಾರದ ಮೇಲೆ -ಪ್ರಜಾಸತ್ತಾತ್ಮಕ, ವರ್ಣಭೇಧವನ್ನು ನಿರಾಕರಿಸುವ ಸಂವಿಧಾನ ದ.ಆಫ್ರಿಕಾದಲ್ಲಿ ಜಾರಿಗೆ ಬರುವವರೆಗೆ ಆರ್ಥಿಕ ದಿಗ್ಬಂಧನ ಮುಂದುವರಿಯಬೇಕಾದ್ದು ಅತಿ ಅವಶ್ಯ.

ಬಡತನ, ಅನಕ್ಷರತೆ,

ನಿರುದ್ಯೋಗದ ವಿರುದ್ಧ ಹೋರಾಟದಲ್ಲಿ ವಿದ್ಯಾರ್ಥಿ– ಯುವಜನರ ಪಾತ್ರದ ಬಗ್ಗೆ

ಇಂದಿನ ವಿದ್ಯಾರ್ಥಿ-ಯುವಜನರು ನಾಳಿನ ನಾಯಕರು. ಈ ನಾಯಕತ್ವ ವಹಿಸಲು ವಿದ್ಯಾರ್ಥಿ ಯುವಜನರು ಸರಿಯಾಗಿ ತಯಾರಾಗಬೇಕು. ಇದರಲ್ಲಿ ಪರಂಪರೆಯನ್ನು ಅರ್ಥಮಾಡಿಕೊಳ್ಳುವುದು, ಶಿಕ್ಷಣಕ್ಕೆ ಗಮನವಹಿಸುವುದು, ಸಾಮಾಜಿಕ ಸಮಸ್ಯೆಗಳ ಬಗ್ಗೆ ಆಸ್ಥೆ ವಹಿಸುವುದು. ಈ ತಯಾರಿಗೆ ಅಗತ್ಯ. ಇಂತಹ ಸಾಮಾಜಿಕ ಸಮಸ್ಯೆಗಳಲ್ಲಿ ಭಾರತದಲ್ಲಿ ಜಾತಿ ವ್ಯವಸ್ಥೆಯೂ ಒಂದು. ಇದರ ಬಗ್ಗೆ ನಾನು ಒಂದು ಮಾತು ಹೇಳಬಯಸುತ್ತೇನೆ. ಇದನ್ನು ಈ ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಎಂದು ತಿಳಿದುಕೊಳ್ಳಬಾರದು. ಆದರೆ ಇದು ನನ್ನ ವಿನಮ್ರ ಅಭಿಪ್ರಾಯ ಈ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ಮಂಡಲ್ ಆಯೋಗದ ಶಿಫಾರಸ್ಸುಗಳ ಜಾರಿಗೆ ಮುಖ್ಯ ಪಾತ್ರ ಇದೆ. ಇದನ್ನು ವಿದ್ಯಾರ್ಥಿ-ಯುವಜನರು ತಿಳಿದು ಕೊಳ್ಳುವುದು ಮುಖ್ಯ. ಭಾರತ ಕಂಡುಕೊಳ್ಳುವ ಪರಿಹಾರಗಳ ಬಗ್ಗೆ ದ.ಆಫ್ರಿಕಾದಲ್ಲಿ ಇಂತಹದೇ ಸಮಸ್ಯೆಗಳನ್ನು ಎದುರಿಸುತ್ತಿರುವ ನಾವು ಮತ್ತು ಇಡೀ ಜಗತ್ತಿನ ಜನತೆ ಆಸಕ್ತಿಯಿಂದ ಗಮನಿಸುತ್ತಿದ್ದೇವೆ.

ಭಾರತದ ಯುವಜನರು ಸಿನಿಕರಾಗುತ್ತಿರುವ, ಭರವಸೆ ಕಳೆದುಕೊಳ್ಳುತ್ತಿರುವ ಬಗ್ಗೆ

ಭಾರತ ಹಲವು ಜಾತಿಗಳ, ಜನಾಂಗಗಳ ವೈವಿಧ್ಯಮಯ ದೇಶ. ಇಲ್ಲಿನ ಸಮಸ್ಯೆಗಳಿಗೆ ಶಾಂತಿಯುತ, ಒಮ್ಮತದ ಸಹಬಾಳ್ವೆಗೆ ಸಮಾನತೆಗೆ ಬೇಕಾದ ಪರಿಹಾರವನ್ನು ಕಂಡುಹಿಡಿಯುವುದು ಜಟಿಲವಾದ ಕೆಲಸ. ಆದರೆ ಈ ಸಮಸ್ಯೆಗಳಿಗೆ ಪರಿಹಾರ ಕಂಡಕೊಳ್ಳುವಲ್ಲಿ ಈಗಿನ ನಾಯಕತ್ವದಲ್ಲಿ ಭರವಸೆ ಕಳೆದುಕೊಳ್ಳಲು ಕಾರಣಗಳಿಲ್ಲ. ಇದಕ್ಕೆ ಬೇಕಾದ ಗಂಭೀರ, ಪ್ರಯತ್ನಗಳನ್ನು ಅವರು ಮಾಡುತ್ತಿದ್ದಾರೆ. ಸಮಸ್ಯೆಗಳಿಗ ಆಳದ ಬಗ್ಗೆ ವಿಚಾರ ಮಾಡದೆ, ಬರಿಯ ಭಾವನೆಗಳ ಆಧಾರದ ಮೇಲೆ ಉದ್ರೇಕಕಾರಿ ಅತಿವಾದಿ ಕ್ರಮಗಳನ್ನು ಕೈಗೆತ್ತಿಕೊಳ್ಳುವವರು ಇಂತಹ ದೇಶದಲ್ಲಿ ನಾಯಕತ್ವ ವಹಿಸಲಾರರು.

ಇನ್ನೂ 50 ವರ್ಷಗಳಲ್ಲಿ ಜಗತ್ತು ಹೇಗಿರಬಹುದು ಎಂಬುದರ ಬಗ್ಗೆ

ಇನ್ನೂ ಹೆಚ್ಚೆಂದರೆ ಹತ್ತು ವರ್ಷ ಬದುಕಬಹುದಾದ ನಾನು ಇನ್ನು 50 ವರ್ಷಗಳಲ್ಲಿ ಜಗತ್ತು ಹೇಗಿರಬಹುದೆಂದು ಊಹಿಸುವುದು ಕಷ್ಟ. ವಿಶ್ವ ಸಂಸ್ಥೆಯ ಪ್ರಭಾವ ಜಗತ್ತಿನ ವಿದ್ಯಮಾನಗಳಲ್ಲಿ ಹೆಚ್ಚುತ್ತಿದೆ. ಇಂದು ಜಗತ್ತು ಕಿರಿದಾಗುತ್ತಿದೆ. ಜಗತ್ತಿನ ಇನ್ನೊಂದು ಮೂಲೆಯಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಮತ್ತೊಂದು ಮೂಲೆಯಲ್ಲಿ ಪರಿಣಾಮ ಬೀರುತ್ತವೆ. ಒಟ್ಟಾರೆ ಹೇಳಬೇಕಾದರೆ ಶಾಂತಿಯ ದಿನಗಳು ಬರಲಿವೆ. ಬಡತನ, ಹಸಿವು, ಅನಕ್ಷರತೆ, ಅಸಮಾನತೆಗಳು ತೊಲಗಿ ಎಲ್ಲಾ ಜನರ ಜೀವನ ಸುಧಾರಿಸುವ ದಿನಗಳು ಬರಲಿವೆ ಎನ್ನಬಹುದು.

ಆಂಧ್ರದಲ್ಲೊಂದು ಅಮಾನವೀಯ ಘಟನೆ

ಅಕ್ಟೋಬರ್ 9 ರಂದು ರೇಡಿಯೋ-ದ ಹೇಳಿದ ಒಂದು ಸುದ್ದಿ ಬಹಳ ಆಘಾ-ತವಾಗಿತ್ತು. ಇದು ಮೀಸಲಾತಿ ಚಳು-ವ 1 ಸಂಬಂಧಿಸಿದ್ದು. ವಿಧಾನ ಮಾತ್ರ ಅದೂ 'ಮೀಸಲಾತಿ ಪರವಾ-' ಎನ್ನಲಾದ ಪ್ರಕರಣ. ಮೀಸಲಾತಿ ರೋಧಿಗಳು ದೇಶಾದ್ಯಂತ ಅಲ್ಲಲ್ಲಿ ಸ್ವಯಂ ಹಚ್ಚಿಕೊಂಡು(ಬೇರೆಯವರಿಗೆ ಬೆಂಕಿ ತ್ತು), ವಿಷ ಸೇವಿಸಿ ಸಾಯುತ್ತಿರುವಾಗ ಲಾತಿಯ ಬೆಂಬಲಿಗರು ಅನಾಮತ್ತಾಗಿ ರು 50 ಜನರನ್ನು ಅಮಾನವೀಯ-ಸುಟ್ಟುಹಾಕಿದರು.

ಮೂರು ನಿಲ್ದಾಣದಲ್ಲಿ ರೈಲನ್ನು ಹತ್ತಿದ ಸು ರು 15 'ಕ್ರಾಂತಿಕಾರಿಗಳು' ರೈಲು ಚಲಿಸುತ್ತಿದ್ದಾಗಲೇ ಅಕ್ಟೋಬರ್ 10 ರಂದು ನಡೆಸಲಾಗುವ ಮಂಡಲ್ ಆಯೋಗದ ಪರ ಬಂದ್‌ನ್ನು ಬೆಂಬಲಿಸಬೇಕೆಂಬ ಕರ-ಪತ್ರಗಳನ್ನು ಹಂಚಿದರು. ಅನಂತರ ಸ್ವಲ್ಪವೇ ಹೊತ್ತಿನಲ್ಲಿ ಪ್ರಯಾಣಿಕರೆಲ್ಲ ಬೋಗಿಯ ಒಂದೆಡೆ ಸೇರುವಂತೆ ಮಾಡಿ ಬಾಗಿಲುಗ-ಳನ್ನೆಲ್ಲಾ ಮುಚ್ಚಿದರು. ಸೀಮೆಎಣ್ಣೆ ಸುರಿ-ದರು. ಬೆಂಕಿ ಹಚ್ಚಿದರು. ಅನಂತರ ಈ ದುಷ್ಕರ್ಮಿಗಳು ಹಾರಿ ಪರಾರಿಯಾದರು. ಆದರೆ ಗಾಬರಿಗೊಂಡ ಪ್ರಯಾಣಿಕರು ತಪ್ಪಿ-ಸಿಕೊಳ್ಳಲು ಇರುವ ಏಕೈಕ ಮಾರ್ಗವಾದ ಬಾಗಿಲಿನತ್ತ ಧಾವಿಸಿದರೂ ಏನೂ ಪ್ರಯೋ-ಜನವಾಗಲಿಲ್ಲ. ಪತ್ರಿಕೆಗಳು ವರದಿ ಮಾಡಿ-ರುವ ಪ್ರಕಾರ ಸುಟ್ಟ ಮಾಂಸ ಮತ್ತು ಎಲು-ಬುಗಳ ರಾಶಿಯನ್ನು ಈ ಬಾಗಿಲ ಬಳಿ ಕಾಣಬಹುದಿತ್ತು. ಈ ಘಟನೆಯಲ್ಲಿ ಸತ್ತ ಹೆಚ್ಚಿನವರು ಹೆಂಗಸರು ಮತ್ತು ಮಕ್ಕಳು. ಅವರ ಗುರುತು ಸಿಗುವುದಂತೂ ದೂರದ ಮಾತೇ ಸರಿ.

ದುರ್ಘಟನೆ ನಡೆದಲ್ಲಿಗೆ ಭೇಟಿ ನೀಡಿದ ರೈಲ್ವೆ ಖಾತೆಯ ಸಹಾಯಕ ಸಚಿವ ಅಜೇಯ ಸಿಂಗ್‌ರ ಪ್ರಕಾರ 'ದೇಶದ ರೈಲ್ವೆ ಇತಿಹಾಸದಲ್ಲೇ ಇಂತಹ ಭೀಕರ ಘಟನೆ ನಡೆದಿಲ್ಲ.'

ಮೀಸಲಾತಿ ವಿರೋಧಿಗಳು ಎಸಗುತ್ತಿ-ರುವ ಕೃತ್ಯಗಳು ಅವಿವೇಕತನದ್ದು ಎಂಬುದು ನಿರ್ವಿವಾದ. ಮೀಸಲಾತಿಯ ಬೆಂಬಲವಾಗಿ ಎಂದು ನಡೆಸಿದ ರೈಲ್ವೆ ಬೋಗಿಗೆ ಬೆಂಕಿ ಹಚ್ಚಿದ ಕೃತ್ಯವಂತೂ ತೀರಾ ಹುಚ್ಚುತನದ್ದು.

ಬಂಡವಾಳಶಾಹಿಗಳು, ಭೂಮಾಲಿಕರ ರುಂಡ ಚೆಂಡಾಡುವುದೇ ಕ್ರಾಂತಿ ಎಂದು ಇದುವರೆಗೆ ಹೇಳುತ್ತಿದ್ದ ನಕ್ಸಲೀಯರು ಈಗ ಜನಸಾಮಾನ್ಯರನ್ನು ಕೊಲ್ಲುವುದನ್ನೂ ತಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಿಕೊಂಡಂತೆ ಕಾಣುತ್ತದೆ. ಈ ಘಟನೆ ನಕ್ಸಲೀಯರ 'ಸಾಹ-ಸವಾದ'ದ ದಿವಾಳಿಕೋರತನದ ಸಂಕೇತವಾ-ಗಿದೆ.

ತನಗೂ ಈ ದುರ್ಘಟನೆಗೂ ಸಂಬಂಧವಿಲ್ಲ ಎಂದು ಪಿ.ಡಬ್ಲ್ಯು.ಜಿ. ಹೇಳಿ-ರುವುದನ್ನು ನಂಬಲು ಸಾಧ್ಯವೇ? -

ಪಶ್ಚಿಮ ಬಂಗಾಳದಲ್ಲಿ ಪೋಸ್ಟಲ್ ಆರ್ಡರ್ ಪದ್ಧತಿ ರದ್ದು.

ನಿರುದ್ಯೋಗ ಸಮಸ್ಯೆಯನ್ನು ಖಾಸ-ಗಿಯವರು ಮಾತ್ರವಲ್ಲದೆ ಸರಕಾರ ಕೂಡ ತನ್ನ ಬೊಕ್ಕಸ ತುಂಬಿಸಿಕೊಳ್ಳುತ್ತಿರುವುದನ್ನು ಕಂಡಿದ್ದೇವೆ. ಖಾಲಿ ಸ್ಥಾನಗಳಿಗೆ ನೇಮ-ಕಾತಿ ಮಾಡುವುದೇ ಅಪರೂಪ. ಅರ್ಜಿ ಕರೆದಾಗ ಚಾತಕ ಪಕ್ಷಿಗಳಂತೆ ಕೂತ ನಿರು-ದ್ಯೋಗಿ ಯುವಕ-ಯುವತಿಯರು ಸಾವಿರಾರು ಲಕ್ಷಾಂತರ ಸಂಖ್ಯೆಯಲ್ಲಿ ಅರ್ಜಿ ಗುಜರಾ-ಯಿಸುತ್ತಾರೆ. ಅದೂ ಬಹಳ ಕಷ್ಟಸಾಧ್ಯ. ಒಂದಿಷ್ಟು ಸರ್ಟಿಫಿಕೇಟ್, ಫೋಟೋ ಪ್ರತಿ-ಗಳ ಜತೆ, ಅರ್ಜಿಯೊಂದಿಗೆ ಪೋಸ್ಟಲ್ ಆರ್ಡರನ್ನು ಸಲ್ಲಿಸಬೇಕಾಗುತ್ತದೆ. ಪೋಸ್ಟಲ್ ಆರ್ಡರ್ ಮೊದಲೇ ಸೊರಗಿದವರನ್ನು ಹಿಂಡುವ ಕ್ರಮ.

ಈ ಪೋಸ್ಟಲ್ ಆರ್ಡರ್ ಪದ್ಧ-ತಿಯನ್ನು ತೆಗೆದುಹಾಕಬೇಕೆಂದು ಹಲವು ವಿದ್ಯಾರ್ಥಿ ಯುವಜನ ಸಂಘಟನೆಗಳು ಒತ್ತಾಯಿಸುತ್ತಲೇ ಇವೆ. ಎಸ್‌ಎಫ್‌ಐ, ಡಿವೈಎಫ್‌ಐ ಇದರಲ್ಲಿ ಮುಂಚೂಣಿಯಲ್ಲಿವೆ.

ಈಗ ದೇಶದ ಒಂದು ರಾಜ್ಯ ಇಂಥ ಒಂದು ಕ್ರಮವನ್ನು ಕೈ ಬಿಡಲು ಮುಂದಾಗಿದೆ. • ಸದ್ದಾ ಜನಸಾಮಾ-ನ್ಯರ ನೋವು ನಲಿವುಗಳಿಗೆ ಸ್ಪಂದಿಸು-ತ್ತಿರುವ ಪಶ್ಚಿಮ ಬಂಗಾಳದ ಸರ-ಕಾರ ಉದ್ಯೋಗಾರ್ಥಿಗಳಿಂದ ಪೋಸ್ಟಲ್ ಆರ್ಡರನ್ನು ಸಂಗ್ರಹಿಸುವುದನ್ನು ನಿಲ್ಲಿಸಲಿ-ದೆಎಂದು ರಾಜ್ಯದ ಹಣಕಾಸು ಸಚಿವ ಡಾ. ಅಸಿಮ್ ದಾಸ್ ಗುಪ್ತ ಇತ್ತೀಚೆಗೆ ಪ್ರಕಟ-ಸಿದರು.

ಪ.ಬಂಗಾಳ ಈ ಕ್ರಮವನ್ನು ಅನು-ಸರಿಸಿದ ದೇಶದ ಮೊತ್ತಮೊದಲ ರಾಜ್ಯ-ವಾಗಿದೆ.

ಉದ್ಯೋಗಾರ್ಥಿಗಳಿಂದ ಪೋಸ್ಟಲ್ ಆರ್ಡರ್ ಪಡೆಯುವ ಪದ್ಧತಿಯನ್ನು ಕೇಂದ್ರ ಸರಕಾರ ಕೂಡ ಕೈ ಬಿಡಬೇಕೆಂದು ಮುಖ್ಯಮಂತ್ರಿ ಜ್ಯೋತಿ ಬಸು ಒತ್ತಾಯಿಸಿ-ದ್ದಾರೆ. ಜನಪರ ಕಾರ್ಯಗಳಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಇನ್ನೊಂದು ಹೆಜ್ಜೆಯಿಟ್ಟಿದೆ.

'ಮುಕ್ತ ಭಾರತ' ರಾಜಕೀಯ ಪಕ್ಷ

ಮೀಸಲಾತಿ ವಿರೋಧಿ ಚಳುವ-ಳಿಯ ಜತೆಗೆ ಈ ನಿಲುವಿನ ರಾಜಕೀಯ ಪಕ್ಷವೊಂದು ಕೂಡ ಅಸ್ತಿತ್ವಕ್ಕೆ ಬಂದಿದೆ ಅದರ ಹೆಸರು – ಮುಕ್ತ ಭಾರತ.

ಎಲ್ಲಾ ಮೀಸಲಾತಿಗಳನ್ನು ತೆಗೆದು ಹಾಕುವುದು, ಎಲ್ಲರಿಗೂ ಉಚಿತ ಕಡ್ಡಾಯ ಶಿಕ್ಷಣ ನೀಡುವುದು, ಮತ್ತು ಎಲ್ಲರಿಗೂ ಉದ್ಯೋಗಾವಕಾಶ ಒದಗಿಸುವುದು 'ಮುಕ್ತ-ಭಾರತ' ಪಕ್ಷದ ಪ್ರಣಾಳಿಕೆಯಲ್ಲಿ ಅಡಕವಾ-ಗಿರುವ ಅಂಶಗಳು. ಅಂದರೆ ಕನಸು, ಗುರಿ ಮಹತ್ತರದ್ದೇ . ಆದರೆ ಅದರ ಸಾಧನೆಯ ದಾರಿ ಯಾವುದು? ಅದಕ್ಕೆ ಗೊತ್ತಿಲ್ಲ.

ಗೊತ್ತಿರಲು, ಗೊತ್ತಿಲ್ಲದಿರಲು ಇದು ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವವ-ರಿಗೆ ಅಲ್ಪಸ್ವಲ್ಪ ನೆರವಾಗುವ ಮೀಸಲಾತಿ ಸೌಲಭ್ಯದ ವಿರುದ್ಧ ಭಾವೋದ್ವೇಗದಿಂದ ಹುಟ್ಟಿದ ಒಂದು ಸಂಸ್ಥೆಯಷ್ಟೆ. ನೀರ ಮೇಲಿನ ಗುಳ್ಳೆಯಂತೆ.

ಇಂಡಿಯನ್ ಪೀಪಲ್ಸ್ ಫ್ರಂಟ್‌ನ ರಾಲಿ

ರಾಷ್ಟ್ರೀಯ ರಂಗ ಸರಕಾರದ ವೈಫ-ಲ್ಯಗಳನ್ನು ಪ್ರತಿಭಟಿಸಲಿಕ್ಕಾಗಿ ಹೊಸದಿಲ್ಲಿ-ಯಲ್ಲಿ ಅಕ್ಟೋಬರ್ 8ರಂದು ಇಂಡಿಯನ್ ಪೀಪಲ್ಸ್ ಫ್ರಂಟ್(ಐ.ಪಿ.ಎಫ್) ಎಂಬ 'ಎಡಪಂಥೀಯ' ಸಂಘಟನೆ ರಾಲಿಯನ್ನು ನಡೆಸಿತು. ವಿವಿಧ ರೀತಿಯ ರಾಜಕೀಯ ಸಿದ್ಧಾಂತ ಪ್ರತಿಪಾದಿಸುವ ನಕ್ಸಲೀಯರು, ಮಾಜಿ ಸಮಾಜವಾದಿಗಳು(ಜೆಪಿ ಬೆಂಬಲಿ-ಗರು) ಮೊದಲಾದವರನ್ನೊಳಗೊಂಡ ಐಪಿ-ಎಫ್ ಬಿಹಾರದಲ್ಲಿ ಸ್ವಲ್ಪ ಉತ್ತಮ ಬೆಂಬಲ ಅದಕ್ಕಿದೆ. ರಾಷ್ಟ್ರೀಯ ರಂಗದ ವೈಫಲ್ಯಗ-ಳನ್ನು ವಿರೋಧಿಸಿದ್ದು ಮಾತ್ರವೇ ಅಲ್ಲದೆ ಆ ಸರಕಾರಕ್ಕೆ ಬೆಂಬಲ ಕೊಡುತ್ತಿರುವ ಎಡಪ-ಕ್ಷಗಳ (ಮುಖ್ಯವಾಗಿ ಸಿಪಿಐ(ಎಂ) ಮತ್ತು ಸಿಪಿಐ) 'ಮಹಾಪರಾಧ' ಎಂಬಂತೆ ಐಪಿ-ಎಫ್ ನಾಯಕರು ರಾಲಿಯಲ್ಲಿ ಮಾತನಾ-ಡುತ್ತಾ ಹೇಳಿದರು.

ನಿಜವಾಗಿಯೂ ಜನಪರ ಕೆಲಸಗ-ಳನ್ನು ಮಾಡುತ್ತಾ ಜನರ ಪ್ರೀತಿ ವಿಶ್ವಾಸ ಗಳಿಸಿ ಮುನ್ನಡೆಯುತ್ತಿರುವ ಎಡಪಕ್ಷಗಳ ಬಗ್ಗೆ ಸದಾ ಕಡೆಗಣ್ಣಿನಿಂದ ಕಾಣುವ ಸುದ್ದಿ-ಮಾಧ್ಯಮಗಳು ಐಪಿಎಫ್ ರಾಲಿಯನ್ನು ಬಹಳ ಪ್ರಾಮುಖ್ಯತೆ ನೀಡಿ ಪ್ರಕಟಿಸಿದವು. ಬೂರ್ಜ್ವಾ ಪತ್ರಿಕೆಗಳದ್ದು, ಮುಖ್ಯ ಶತ್ರುವಿನ ವಿರುದ್ಧದ ತಂತ್ರವಾಗಿಬಹುದು–ಅಲ್ಲವೇ?

ಕಾಂಗ್ರೆ ಪಕ್ಷದಲ್ಲಿ ಭಿನ್ನಮತೀಯರು

ಕಾಂಗ್ರೆಸ್(ಐ) ಪಕ್ಷದಲ್ಲಿ, ಭಿನ್ನಮತ ಹೆಚ್ಚು.ಕರ್ನಾಟಕದಲ್ಲಿ ಸ್ವತಃ ಕಾಂಗ್ರೆ ಅಧ್ಯ-ಕ್ಷರೇ ತಮ್ಮ ಪಕ್ಷದ ಮುಖ್ಯ ಮಂತ್ರಿ ವಿರು-ದ್ಧದ 'ದ್ವೇಷ' ತೀರಿಸಿಕೊಳ್ಳಲು ಯಾವ ರೀತಿ ನಡೆದರು, ಏನಾಯಿತು ಎಂಬ ಬೆಳ-ವಣಿಗೆಗಳನ್ನೆಲ್ಲಾ ನೋಡಿದ್ದೇವೆ.

ಕಾಂಗ್ರೆಸ್(ಐ) ಅಧಿಕಾರದಲ್ಲಿ ಇರಲಿ-ಇಲ್ಲದಿರಲಿ, ಸಮಾನ ಮನೋಧರ್ಮ-ಯಾವುದರಲ್ಲಿ? ಅದೇ ಭಿನ್ನಮತದಲ್ಲಿ.

ಕಳೆದ ವಿಧಾನ ಸಭಾ ಚುನಾವಣೆಗ-ಳಲ್ಲಿ ಕಾಂಗ್ರೆಸ್(ಐ) ಬಿಹಾರದಲ್ಲಿ ಸೋತು ಜನತಾದಳ ಅಧಿಕಾರಕ್ಕೆ ಬಂತು. ಅಧಿಕಾರ-ರಹಿತ ಕಾಂಗ್ರೆನಲ್ಲಿ ಈಗ ರಾಜಿನಾಮೆ ಪ್ರಕ-ರಣಗಳು ನಡೆಯುತ್ತಿವೆ.

ಆ ರಾಜ್ಯದ ಛೋಟಾ ನಾಗ-ಪುರ, ಸಂತಾಲ್ ಪರಗಣ ಪ್ರಾದೇಶಿಕ ಕಾಂಗ್ರೆಸ್(ಐ) ಸಮಿತಿಯ ಸುಮಾರು 40 ಸದಸ್ಯರು ಅಕ್ಟೋಬರ್ 4 ರಂದು ರಾಜೀ-ನಾಮೆ ನೀಡಿದ್ದು ಪಕ್ಷದ ಅಧ್ಯಕ್ಷರಿಗೆ ರವಾನಿಸಿದ್ದಾರೆ.. ಸಮಿತಿಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಯವರ ಸರ್ವಾಧಿಕಾರಿ ಕೆಲಸದ ಶೈಲಿಗೆ ಪ್ರತಿಭಟ-ನೆಯಾಗಿ ತಮ್ಮ ರಾಜಿನಾಮೆ ಎಂಬುದಾಗಿ ಈ ಸದಸ್ಯರು ತಿಳಿಸಿದ್ದಾರೆ.

ಇತ್ತ, ಆಂಧ್ರ ಪ್ರದೇಶದಲ್ಲಿ ಕೂಡ ಭಿನ್ನಮತೀಯ ಚಟು-ವಟಿಕೆಗಳು ಕಾಂಗ್ರೆಸ್(ಐ) ಪಕ್ಷದಲ್ಲಿ ಹೆಚ್ಚಿವೆ. ಮುಖ್ಯಮಂತ್ರಿ ಡಾ. ಚೆನ್ನಾರೆಡ್ಡಿ ಪರ-ವಿ-ರೋಧ ಪಾಳೆಯಗಳು ಕತ್ತಿಮಸೆಯುತ್ತಿವೆ.

ಚೆನ್ನಾರನ್ನು ಕೂಡ ಮುಖ್ಯಮಂತ್ರಿ ಸ್ಥಾನದಲ್ಲಿ ಕೆಳಗಿಳಿಸಲು ಕಾಂಗ್ರೆ ಯೋಜಿಸುತ್ತು ಎನ್ನಲಾಗಿದೆ. ಆದರೆ ಕರ್ನಾಟಕ ಪ್ರಯೋ-ಗದಲ್ಲಿ ಮಂಗಳಾರತಿ ಮಾಡಿಸಿಕೊಂಡ ರಾಜೀವ್ ಗಾಂಧಿಯವರು ಪ್ರಯೋಗ ವಿಸ್ತ-ರಿಸುವುದನ್ನು ಕೈಬಿಟ್ಟಂತೆ ಕಾಣುತ್ತದೆ.

ಗುಜರಾತ್: ದಳ-ಬಿಜೆಪಿ ಭಿನ್ನಾಭಿಪ್ರಾಯ

ಗುಜರಾತಿನಲ್ಲಿ ಜನತಾದಳ-ಬಿಜೆಪಿ ಮೈತ್ರಿಕೂಟ ಅಧಿಕಾರದಲ್ಲಿದೆ. ಮುಖ್ಯಮಂತ್ರಿ ಜನತಾದಳದ ಪಟೇಲ್. ಈ ಎರಡೂ ಮಿತ್ರ ಪಕ್ಷಗಳ ನಡುವೆ ಈಗ ಭಿನ್ನಾಭಿಪ್ರಾಯ ಜಾಸ್ತಿಯಾಗುತಿವೆ. ಅದಕ್ಕೆ ಮುಖ್ಯ ಕಾರಣ

ದೇಶದೊಳಗೆ

ರಾಮಜ್ಯೋತಿ ಮತ್ತು ಬಿಜೆಪಿ ಅಧ್ಯಕ್ಷ ಎಲ್.ಕೆ. ಅದ್ವಾಣಿಯವರ ರಥಯಾತ್ರೆ.

ಈ ಎರಡು ಯಾತ್ರೆಗಳಿಗೆ ಕೆಲವು ಸೂಕ್ಷ್ಮ ಪ್ರದೇಶದಲ್ಲಿ ಸಂಚಾರಕ್ಕೆ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿಯವರು ಮುಲಾಜಿಲ್ಲದೆ ಪಟ್ಟು ಹಿಡಿದದ್ದೇ ಬಿಜೆ-ಪಿಯ ಮುನಿಸಿಗೆ ಕಾರಣವಾಗಿದೆ.

ರಾಜೀವ ಗಾಂಧಿ ಸಂಕುಚಿತ ಧೋರಣೆ

ದಿನ ದಿನಕ್ಕೂ ಜಟಿಲವಾಗುತ್ತಿರುವ ರಾಷ್ಟ್ರೀಯ ರಂಗ ಸರಕಾರದ ಅಸ್ತಿತ್ವಕ್ಕೇ ಅಪಾಯವೊಡ್ಡುವ ಸಾಧ್ಯತೆಯಿದೆ ಎನ್ನಲಾಗಿ-ರುವ ರಾಮ ಜನ್ಮ ಭೂಮಿ–ಬಾಬ್ರಿ ಮಸೀದಿ ವಿವಾದದ ಪರಿಹಾರಕ್ಕೆ ಚರ್ಚಿಸಲಿಕ್ಕಾಗಿ ಅಕ್ಟೋಬರ್ 17 ಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಸಭೆ ನಡೆಸುವುದಾಗಿ ಪ್ರಧಾನಿ ವಿ.ಪಿ.ಸಿಂಗ್ ತಿಳಿಸಿದ್ದರು.

ಈ ಲೇಖನ ಬರೆಯುವ ವೇಳೆಗೆ ಬಂದ ಸುದ್ದಿಯಂತೆ ಕಾಂಗ್ರೆಸ್(ಐ) ಈ ಸಭೆ-ಯನ್ನು ಬಹಿಷ್ಕರಿಸುವ ನಿರೀಕ್ಷೆಯಿದೆ.

ರಾಷ್ಟ್ರೀಯ ರಂಗ ಸರಕಾರ ಜತೆ ನೀವು ಒಳಗೊಳ್ಳಬಾರದು ಎಂದು ಕೆಲವು ಹಿರಿಯ ನಾಯಕರು ಹೇಳಿದ್ದಾರೆ. ಆದ್ದರಿಂದ ಇನ್ನೂ ಕೆಲವು ನಾಯಕರೊಂದಿಗೆ ಸಮಾಲೋಚಿಸಿ ಈ ಬಗ್ಗೆ, ಅಂದರೆ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸುವಿಕೆಯ ಬಗ್ಗೆ ನಿರ್ಧಾರ ಕೈಗೊ-ಳ್ಳುವುದಾಗಿ ಕಾಂಗ್ರೆ ಅಧ್ಯಕ್ಷ ರಾಜೀವ ಗಾಂಧಿ ಅಕ್ಟೋಬರ್ 13 ರಂದು ನಾಗಪುರದಲ್ಲಿ ಹೇಳಿದರು.

'ರೋಮ್ ಹತ್ತಿ ಉರಿಯುವಾಗ ನೀರೋ ಪಿಟೀಲು ಬಾರಿಸುತ್ತಿದ್ದ' ಎಂಬ ನಾಣ್ಣುಡಿ ಯನ್ನು ಈ ' ಮಾಜಿ ಹೀರೋ' ನೆನಪಿಗೆ ತರುತ್ತಿದ್ದಾರೆ ಎನ್ನಬ-ಹುದು. ಮಸೀದಿ-ದೇವಾಲಯ ವಿವಾದ ಇಡೀ ದೇಶವನ್ನು ಕೋಮು ದಳ್ಳುರಿಯ ಅಂಚಿಗೆ ಒಯ್ಯುತ್ತಿರುವ ಈ ಕಾಲಘಟ್ಟ-ದಲ್ಲಿ ರಾಷ್ಟ್ರೀಯ ರಂಗ ಸರಕಾರದ ಕಾರಣ-ಕ್ಕಾಗಿ ಇತ್ಯರ್ಥದ ನಿಟ್ಟಿನಲ್ಲಿನ ಸಭೆಯನ್ನು ಬಹಿಷ್ಕರಿಸುವುದು ಮುತ್ಸದ್ದಿತನವಾಗದು. ಅದೂ ಕೂಡ, ಕೋಮು ಪರಿಸ್ಥಿತಿಯನ್ನು 'ತಿಳಿಗೊ-ಳಿಸಲೆಂದು' ತಾವು ನಡೆಸುತ್ತಿರುವ ಸದ್ಭಾ-ವನಾ ಯಾತ್ರೆಯ ಸಂದರ್ಭದಲ್ಲಿಯೇ ಈ ಮಾತನ್ನು ಹೇಳಿರುವುದು ರಾಜೀವಗಾಂಧಿ ಹಾಗೂ ಅವರ ಪಕ್ಷದ ಎಡಬಿಡಂಗಿ ನೀತಿ-ಯನ್ನು ಪ್ರದರ್ಶಿಸುತ್ತದೆ.

ಸಂಕುಚಿತ ರಾಜ-ಕೀಯ-ಧಾರ್ಮಿಕ ಬಾವನೆಗಳನ್ನು ಬಿಟ್ಟು ಎಲ್ಲರೂ ಅಯೋಧ್ಯ ವಿವಾದ ನಿವಾರ-ಣೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇ-ಕಾಗಿದೆ.

ಅಸ್ಸಾಂ: ಪಕ್ಷಾಂತರಿ ಶಾಸಕರ ಅನರ್ಹತೆ

ಕಾಂಗ್ರೆಸ್(ಐ)ಗೆ ಸೇರಿದ ಅಸ್ಸಾಂನ ಸಂಯುಕ್ತ ಅಲ್ಪಸಂಖ್ಯಾತರ ರಂಗದ(ಯು.ಎಂ.ಎಫ್) ಎಂಟು ಸದಸ್ಯರನ್ನು ಅಸ್ಸಾಂ ವಿಧಾನಸಭಾ ಸದಸ್ಯತ್ವದಿಂದ ಸ್ಪೀಕರರು ಅನರ್ಹಗೊಳಿಸಿದ್ದಾರೆ. ಪಕ್ಷಾಂತರ ಮಾಡಿದ್ದ-ಕ್ಕಾಗಿ ಶಾಸಕರನ್ನು ಅನರ್ಹಗೊಳಿಸಿರುವುದು ಅಸ್ಸಾಂ ಇತಿಹಾಸದಲ್ಲಿ ಇದು ಮೊದಲ ಸಲುವಾಗಿದೆ.

ತಾಳ್ಮೆ ವಹಿಸಿ: ಮೀಸಲಾತಿ ವಿರೋಧಿಗಳಿಗೆ ಮಹಿಳೆಯರ ಮನವಿ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಬೃಂದಾ ಕಾರಟ್, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟದ ವಿಮಲಾ ಫರೂಕಿ ಮತ್ತು ದುಡಿ-ಯುವ ಮಹಿಳೆಯರ ಅಖಿಲ ಭಾರತ ಸಮ-ನ್ವಯ ಸಮಿತಿಯ ವಿಮಲಾ ರಣದಿವೆ ಈ ಕೆಳಗಿನ ಹೇಳಿಕೆ ನೀಡಿದ್ದಾರೆ.

ಒಬ್ಬಳು ಹುಡುಗಿಯ ಸಾವು ಹಾಗೂ ಇನ್ನೊಬ್ಬಳ ಆತ್ಮಹತ್ಯೆಯ ಯತ್ನವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆಯು-ತ್ತಿರುವ ವಿದ್ಯಾರ್ಥಿಗಳ ಆತ್ಮಾಹುತಿ ಯತ್ನ-ಗಳು, ಅದರಲ್ಲಿ ಅಮೂಲ್ಯ ಜೀವಗಳ ಹಾನಿ ಆಗುತ್ತಿರುವ ಬಗ್ಗೆ ನಾವು ಸಿಟ್ಟನ್ನು ಹಾಗೂ ತೀವ್ರ ಕಳವಳ ವ್ಯಕ್ತಪಡಿಸುತ್ತೇವೆ. ಈ ಘಟ-ನೆಗಳು ಯುವಜನರಲ್ಲಿ ತಮ್ಮ ಭವಿಷ್ಯದ ಬಗ್ಗೆ ಉಂಟಾಗಿರುವ ಆಳವಾದ ಹತಾಶೆಯ. ಪ್ರತೀಕವಾಗಿದೆ ಎಂದು ನಾವು ಭಾವಿಸು-ತ್ತೇವೆ.

ಈ ಸಂದರ್ಭದಲ್ಲಿ, ತಮ್ಮ ವಶದ-ಲ್ಲಿರುವವರಿಗೆ ತಾಳ್ಮೆಯಿಂದಿರುವಂತೆ ಸಲಹೆ ಮಾಡುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವಾಗಿದೆ. ಉದ್ರಿಕ್ತಗೊಂಡಿರುವ ಭಾವನೆಗಳನ್ನು ಶಮನಗೊಳಿಸುವ ನಿಟ್ಟ-ನಲ್ಲಿ ಸಕ್ರಿಯವಾಗಿ ಮಧ್ಯಪ್ರವೇಶಿಸುವಂತೆ ನಿರ್ದಿಷ್ಟವಾಗಿ ಈ ಯುವ ವಿದ್ಯಾರ್ಥಿಗಳ ತಾಯಂದಿರು ಹಾಗೂ ಸಹೋದರಿಯರಿಗೆ ನಾವು ಮನವಿ ಮಾಡುತ್ತೇವೆ.

ತಮ್ಮ ಭವಿಷ್ಯದ ಕುರಿತಾದ ಈ ಯುವಜನರ ಕಳ-ಕಳಿಯನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ ಮತ್ತು ಶ್ಲಾಘಿಸುತ್ತೇವೆ. ಆದರೆ ಇಂಥ ವಿಷ-ಯಗಳನ್ನು ಮಾತುಕತೆ ಮೂಲಕ ಮಾತ್ರವೇ ಪರಿಹರಿಸಿಕೊಳ್ಳಬೇಕು.ಆದ್ದರಿಂದ, ಸರಕಾರದ ಆಹ್ವಾನ ಎಷ್ಟೇ ವಿಳಂಬವಾದರೂ ಮಾತು-ಕತೆಯ ಪ್ರಕ್ರಿಯೆ ಆರಂಭಿಸುವಂತೆ ನಾವು ವಿದ್ಯಾರ್ಥಿಗಳಲ್ಲಿ ಮನವಿ ಮಾಡುತ್ತೇವೆ.

ಸುದ್ದಿ ಸಂಗ್ರಹ

ಪಂಜಾಬ್ ಡಿವೈ-ಎಫ್‌ಐ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಮ್ರೇಡ್ ಸೋಹನ್ ಸಿಂಗ್ ದೇಸಿ ಹುತಾತ್ಮರಾದ ಮೊದಲ ವರ್ಷದ ಸ್ಮರ-ಣಾರ್ಥವಾಗಿ ಈ ಸಂಗಾತಿಯ ಹುಟ್ಟಿದ ಗ್ರಾಮವಾದ ಜಲಂಧರ್ ಜಿಲ್ಲೆಯ ದೇಸಿ-ಯನ್ ಕಲನ್‌ನಲ್ಲಿ ಸೆಪ್ಟೆಂಬರ್ 18 ರಂದು ಮೆರವಣಿಗೆ, ಸಭಾ ಕಾರ್ಯಕ್ರಮಗಳು ನಡೆ-ದವು. ಸುಮಾರು ಎಂಟು ಸಾವಿರ ಜನರು ಭಾಗವಹಿಸಿದ್ದರು. ಸೋಹನ್ ಸಿಂಗ್‌ರ ಪತ್ನಿ ಅಜ್ಮೇರ್ ಕೌರ್ ಕೂಡ ಇದ್ದರು.

ಖಲಿಸ್ತಾನಿ ಭಯೋತ್ಪಾದಕರ ವಿರುದ್ಧ ತೀವ್ರ ಹೋರಾಟವನ್ನು ಮುಂದುವರಿ-ಸುವ ಪ್ರತಿಜ್ಞಾ ವಿಧಿಯನ್ನು ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಮಂಗತ್ ರಾಮ್ ಪಸ್ಲಾ ಬೋಧಿ-ಸಿದರು. ಪಠಾಣ್‌ಕೋಟ್‌ನ ಜನನಾಟ್ಯ ಮಂಚ್ 'ಭೈಚಿರೆ ದಾ ಅಪಹರಣ್'(-ಭ್ರಾತೃತ್ವದ ಅಪಹರಣ) ಹಿಂದಿ ನಾಟಕ ಪ್ರದರ್ಶಿಸಿತು.

ಸಂಗಾತಿ ಸೋಹನ್ ಸಿಂಗ್‌ರ ಸ್ಮರ-ಣಾರ್ಥ ಬೃಹತ್ ಗ್ರಾಮವನ್ನು ನಿರ್ಮಿಸುವು-ದಾಗಿ ಗ್ರಾಮ ಪಂಚಾಯತ್ ಪ್ರಕಟಿಸಿದೆ.

ಕಾಂ.ಸೋಹನ್ ಸಿಂಗ್ ದೇಸಿ ನೆನಪಿ-ಗಾಗಿ ಡಿವೈಎಫ್‌ಐ ದಿಲ್ಲಿ ಸಮಿತಿ ರಕ್ತದಾನ ಶಿಬಿರ ನಡೆಸಿತು.

ಡಿವೈಎಫ್‌ಐ ಅಧ್ಯಕ್ಷ ಎಂ.ಎ.ಬೇಬಿ, ಪ್ರಧಾನ ಕಾರ್ಯದರ್ಶಿ ಹಸನ್ ಮುಲ್ಲಾ ಶಿಬಿರಕ್ಕೆ ಭೇಟಿ ನೀಡಿದರು. ನೂರಾರು ಡಿವೈಎಫ್‌ಐ ಕಾರ್ಯಕರ್ತರು ಮತ್ತು ಇತ-ರರು ತಮ್ಮ ರಕ್ತವನ್ನು ದಾನ ಮಾಡಿ-ದರು. ಅಲ್ಲದೆ ಜನರ ಒಗ್ಗಟ್ಟು, ಕೋಮು ಸೌಹಾರ್ದತೆ ಹಾಗೂ ರಾಷ್ಟ್ರೀಯ ಸಮಗ್ರ-ತೆಯನ್ನು ರಕ್ಷಿಸುವುದಾಗಿ ಪಣತೊಟ್ಟಿತು.

ಅಸಂಘಟಿತರ ಸಂಘಟನೆಯತ್ತ ಪಂಜಾಬ್ ಸಿಟು

ಪಂಜಾಬ್‌ನಲ್ಲಿ ಅಸಂಘಟಿತ ಮತ್ತು ಅಲ್ಲಲ್ಲಿ ಚದುರಿ ಹೋಗಿರುವ ಕಾರ್ಮಿಕರ ಸಮು-ದಾಯವನ್ನು ಸಂಘಟನೆಯಡಿ ತರಲು ಅಲ್ಲಿನ ಸಿಐಟಿಯು ರಾಜ್ಯ ಘಟಕ ಇದೇ ಮೊದಲ ಬಾರಿಗೆ ಐತಿಹಾಸಿಕ ಹೆಜ್ಜೆಯಿಟ್ಟಿದೆ.

ಕಳೆದ ತಿಂಗಳು ಸಂಗ್ರೂರ್ ಜಿಲ್ಲೆಯ ಧುರಿಯಲ್ಲಿ ನಡೆದ ಪಂಜಾಬ್ ನಲ್ಲಿ ಈ ರೀತಿಯ ಮೊದಲನೆಯದಾದ ಸಮಾವೇ-ಶದಲ್ಲಿ ಸುಮಾರು 1300 ಪ್ರತಿನಿಧಿಗಳು ಭಾಗವಹಿಸಿದ್ದರು.

ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಉದ್ಘಾಟಿಸಿದ ಸಮಾವೇಶದಲ್ಲಿ ಸಂಘಟನೆಯ ಅಖಿಲ ಭಾರತ ಕಾರ್ಯದರ್ಶಿ ಪಿ.ಕೆ.ಗಂಗೂಲಿ ಅವರೂ ಹಾಜರಿದ್ದು ಮಾರ್ಗದರ್ಶನ ನೀಡಿ-ದರು.

ಜೆರುಸಲೇಮ್‌ನಲ್ಲಿ ಪ್ಯಾಲೆಸ್ತೇನಿಯರ ನರಮೇಧ ಅಂತರ ರಾಷ್ಟ್ರೀಯ ಖಂಡನೆ

ಇಸ್ರೇಲಿನ ಝಿಯೋನಿಸ್ಟರಿಂದ ಪ್ಯಾಲೆಸ್ತೇನಿಯರ ದಮನದ ರಕ್ತಸಿಕ್ತ ಚರಿತ್ರೆಯಲ್ಲಿ, ಇನ್ನೊಂದು ಕರಾಳ ಅಧ್ಯಾಯ ಈ ಅಕ್ಟೋಬರ್ 8ರ ಸೋಮವಾರ ಸೇರಿತು. ಮಕ್ಕಾ ಮದೀನಾ ಬಿಟ್ಟರೆ ಮುಸ್ಲಿಮರ ಮೂರನೆಯ ಅತ್ಯಂತ ಪವಿತ್ರವಾದ ಧಾರ್ಮಿಕ ಸ್ಥಳದಲ್ಲೇ 21 ಪ್ಯಾಲೆಸ್ತೇನಿಯರ ಕಗ್ಗೊಲೆ ನಡೆಯಿತು. 140 ಜನ ಗಾಯಗೊಂಡರು. ಇದು ಇಸ್ರೇಲಿ ಪೋಲೀಸರು ಬೇಕಾಬಿಟ್ಟಿ ಗೋಲಿಬಾರಿನ ಪರಿಣಾಮ. ಈ ಧಾರ್ಮಿಕ ಪವಿತ್ರ ಸ್ಥಳ ಜೆರೂಸಲೇಂನಲ್ಲಿರುವ 'ಹರಾಂ-ಅಲ್- ಶರೀಪ್'.

ಜೆರೂಸಲೇಂ ಜ್ಯೂ, ಮುಸ್ಲೀಂ, ಕ್ರಿಸ್ಟಿಯನ್ನರೆಲ್ಲರಿಗೂ ಪವಿತ್ರವಾದ ಸ್ಥಳಗಳನ್ನೊಳಗೊಂಡ ನಗರ. ಈ ನಗರಕ್ಕೆ ಈ ಮೂರು ಧರ್ಮಗಳ ಜನರ ನಡುವಣ ಕಲಹದ ಚರಿತ್ರೆಯೂ ಇದೆ. ಜೆರೂಸಲೇಂನಲ್ಲಿರುವ ಮೊರಿಯಾ ಗುಡ್ಡದಲ್ಲಿರುವ ಮುಸ್ಲಿಂ ಪವಿತ್ರ ಸ್ಥಳದಲ್ಲಿರುವ ಸ್ಥಳದಲ್ಲೇ ಹಳೆಯ ಜ್ಯೂ ದೇವಸ್ಥಾನವೊಂದರ ಅವಶೇಷವಿದೆ. ಇದೇ ಜಾಗದಲ್ಲಿದ್ದ ಮೊದಲನೆಯ ಜ್ಯೂ ದೇವಾಲಯವನ್ನು ಬೆಬಿಲೋನಿಯನ್ನರು ಕ್ರಿ.ಪೂ.6 ನೇ ಶತಮಾನದಲ್ಲಿ ಕೆಡವಿದ್ದರು. ಆಮೇಲೆ ಕಟ್ಟಲಾದ ಎರಡನೇ ಭೂ ದೇಗುಲವನ್ನು ರೋಮನ್ನರು ಕ್ರಿ.ಶ. 1 ನೇ ಶತಮಾನದಲ್ಲಿ ಹಾಳುಗೆಡವಿದ್ದರು. ಅದರ ಅವಶೇಷವಾಗಿ ಅದರ ಗೋಡೆ ಒಂದು ಇನ್ನೂ ನಿಂತಿದೆ ಇದಕ್ಕೆ ಜ್ಯೂ 'ಅಳುವ ಗೋಡೆ' ಎನ್ನುತ್ತಾರೆ. ಇಲ್ಲಿ 7 ನೇ ಶತಮಾನದಲ್ಲಿ ಮಸೀದಿ ಮತ್ತು 'ಬಂಡಿಗಳ ಗೋಪುರ' ನಿರ್ಮಿತವಾಯಿತು. ಅಂದಿನಿಂದ ಈ ಎರಡು ಪವಿತ್ರ ಸ್ಥಾನ ಒಂದೇ ಜಾಗದಲ್ಲಿದೆ.

ಈಗ ಬಹಳ ದಿನಗಳಿಂದ ಜೆರೂಸಲೇಂನಲ್ಲಿ ಜ್ಯೂಗಳ ಧಾರ್ಮಿಕಮೇಲುಗೈ ಸ್ಥಾಪಿಸಲು ಹಲವು ಉಗ್ರಗಾಮಿ ಜ್ಯೂ ಬಲಪಂಥೀಯ ಗುಂಪುಗಳು ಪ್ರಯತ್ನಿಸುತ್ತಿವೆ. ಇದರಲ್ಲಿ ಮುಸ್ಲಿಮರನ್ನು ಓಡಿಸಿ ಜ್ಯೂಗಳು ಅವರ ಆಸ್ತಿಪಾಸ್ತಿ ವಶಪಡಿಸಿಕೊಳ್ಳುವುದು ಸೇರಿದೆ. ಇಂತಹ ಹಿನ್ನೆಲೆಯಲ್ಲಿ ಈ ಮುಸ್ಲೀಮ್ ಪವಿತ್ರ ಸ್ಥಳವನ್ನು ನಾಶಮಾಡಿ ಮೂರನೇ ಜ್ಯೂ ದೇವಾಲಯ ಕಟ್ಟಬೇಕೆಂದು 'ದೇಗುಲದ ಗುಡ್ಡದ ವಿಧೇಯರು' ಎಂಬ ಹೆಚ್ಚಾಗಿ ಅಮೇರಿಕನ್ನರು ಸದಸ್ಯರಾಗಿರುವ ಉಗ್ರಗಾಮಿ ಗುಂಪೊಂದು ಪ್ರಚಾರ ಮಾಡುತ್ತಿತ್ತು. ಈ ಕರಾಳ ಸೋಮವಾರ ಅದೇ ಜಾಗದಲ್ಲಿ ಜ್ಯೂ ದೇಗುಲಕ್ಕೆ ಅಡಿಪಾಯ ಹಾಕಲಾಗುವುದೆಂಬ ವದಂತಿ ಮೇಲೆ ಗಲಭೆ ಶುರುವಾಯಿತು. ಇದನ್ನು ಕೇಳಿ ಧಾವಿಸಿದ ಮುಸ್ಲಿಮ್ ಪ್ರದರ್ಶಕರು ರೊಚ್ಚಿಗೆದ್ದು ಅಲ್ಲಿ ಸೇರಿದ್ದ ಸುಮಾರು 50 ಸಾವಿರ ಜ್ಯೂಗಳ ಮೇಲೆ ಕಲ್ಲೆಸೆಯತೊಡಗಿದ್ದರು. ಇದಕ್ಕೆ ಇಸ್ರೇಲಿ ಪೋಲೀಸರು ತಕ್ಷಣದ ಉತ್ತರ ಗೋಲೀಬಾರು. ಈ ಗಲಭೆಗಳಲ್ಲಿ ಗಾಯಗೊಂಡ ಇಸ್ರೇಲಿಗಳು 8. ಮಡಿದ ಪ್ಯಾಲೆಸ್ತೇನಿಯರು 21. ಗಾಯಗೊಂಡ ಪ್ಯಾಲೆಸ್ತೇನಿಯರು 140. ಇದರಿಂದ ಯಾರು ಯಾರ ಮೇಲೆ ಆಕ್ರಮಣ ಮೊದಲು ಮಾಡಿರುವುದು ಅಂತ ಗೊತ್ತಾಗುತ್ತದೆ.

ಇಸ್ರೇಲಿನ ಈ 'ರಾಮಜನ್ಮಭೂಮಿ--ಬಾಬ್ರಿ ಮಸೀದಿ' ಯಂತಹ ಉದ್ರೇಕಕಾರಿ ಮತೀಯ ವಿವಾದದ(ಎಂತಹ ಸಾಮ್ಯವಿದೆ) ಹಿನ್ನೆಲೆಯಲ್ಲಿ ನಡೆದ ಈ ನರಮೇಧವನ್ನು ಇಡೀ ಅಂತರರಾಷ್ಟ್ರೀಯ ಸಮುದಾಯ ಖಂಡಿಸಿದೆ. ಮಾತ್ರವಲ್ಲ ಇಸ್ರೇಲಿ ಸೈನ್ಯ, ಜೆರೂಸಲೇಂನ ಜ್ಯೂ ಮೇಯರ್‌ರನ್ನು, ಖಂಡಿಸಿದೆ. ಇಸ್ರೇಲಿ ಸರಕಾರ ಇದರ ಬಗ್ಗೆ ವಿಚಾರಣಾ ಆಯೋಗವೊಂದನ್ನು ನೇಮಿಸಿದೆ. ಈ ಆಯೋಗದ ಮುಖ್ಯಸ್ಥ ಇಸ್ರೇಲಿ ಗುಪ್ತಚರ ಸಂಸ್ಥೆ 'ಮೊಸ್ಸಾದ್' ನ ಮುಖ್ಯಸ್ಥ! ಇಂತಹ ಉದ್ರೇಕಕಾರಿ ಪರಿಸ್ಥಿತಿಗೆ ಕಾರಣರಾದ ಮುಸ್ಲಿಮರನ್ನು ಒಕ್ಕಲೆಬ್ಬಿಸುವ ಜ್ಯೂ ಪ್ರಯತ್ನಕ್ಕೆ ಸರಕಾರ ಬಹಿರಂಗವಾಗಿ ಕುಮ್ಮಕ್ಕು ಕೊಡುತ್ತಿದೆ.

ಈ ಘಟನೆ ಆಗಲೇ ಕುದಿಯುತ್ತಿದ್ದ ಪ್ಯಾಲೆಸ್ತೇನಿಯನ್ನರನ್ನು ರೊಚ್ಚಿಗೆಬ್ಬಿಸಿದೆ. ಅಲ್ಲದೆ ಎಲ್ಲಾ ಅರಬ್ಬರನ್ನು ರೊಚ್ಚಿಗೆಬ್ಬಿಸಿದೆ. ಇದು ಮುಸ್ಲಿಮ್ ಮೂಲಭೂತವಾದಿ ದುಸ್ಸಾಹಸ ಕಾರ್ಯಾಚರಣೆಗಳಿಗೆ ಆಸ್ಪದ ಮಾಡಿಕೊಟ್ಟು, ಕೊಲ್ಲಿ ಯುದ್ಧಕ್ಕೆ ಕಿಡಿ ಹಚ್ಚುವ ಅಪಾಯಕಾರಿ ಸಾಧ್ಯತೆಗೆ ಎಡೆ ಮಾಡಿ ಕೊಡುವ ಸಾಧ್ಯತೆಯಿದೆ. ಈ ನರಮೇಧವನ್ನು ಎಲ್ಲಾ ಅರಬ್ ದೇಶಗಳು ತೀಕ್ಷ್ಣವಾಗಿ ಖಂಡಿಸಿವೆ– ಅಮೇರಿಕನ್ ಸೈನ್ಯದ ಜತೆ ಇರಾಕಿ ಆಕ್ರಮಣ ತೆರವು ಮಾಡಲು ಹೆಗಲುಕೊಟ್ಟು ನಿಂತಿರುವ ಈಜಿಪ್ಟ್, ಸಿರಿಯಾ, ಸೌದಿ ಅರೇಬಿಯಾ ಮುಂತಾದ ಅಮೇರಿಕನ್-ಪರ ದೇಶಗಳೂ ಸೇರಿದಂತೆ.

ಅಲಿಪ್ತ ರಾಷ್ಟ್ರಗಳು ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಮುಂದೆ ಇದನ್ನು ತಂದು, ಇಸ್ರೇಲನ್ನು ಈ ನರಮೇಧಕ್ಕಾಗಿ ಖಂಡಿಸುವ ಒಂದು ತೀವ್ರ ನಿರ್ಣಯವನ್ನು ಮಂಡಿಸಿದವು. ಇದರ ಪ್ರಕಾರ ಭದ್ರತಾ ಸಮಿತಿ ಒಂದು ನಿಯೋಗವನ್ನು ಈ ನರಮೇಧದ ಬಗ್ಗೆ ವಿಚಾರಣೆ ಮಾಡಲು ಇಸ್ರೇಲಿಗೆ ಕಳಿಸಬೇಕು. ಈ ನಿಯೋಗ ಅಕ್ಟೋಬರ್ 20 ರೊಳಗೆ ವರದಿ ಸಲ್ಲಿಸಬೇಕು. ಈ ವರದಿಯಲ್ಲಿ ಇಸ್ರೇಲಿನಲ್ಲಿ ಪ್ಯಾಲೆಸ್ತೇನಿಯನ್ನರ ಭದ್ರತೆಗೆ ಯಾವ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಬೇಕು ಎಂದಿತ್ತು. ಆದರೆ ಎಲ್ಲಾ ಭದ್ರತಾ ಸಮಿತಿಯ ಸದಸ್ಯರು ಇದಕ್ಕೆ ಒಪ್ಪದರು. ಅಮೇರಿಕ ಇದಕ್ಕೆ ಒಪ್ಪಲಿಲ್ಲ. ವಿಚಾರಣೆಗೆ ವಿಶ್ವ ಸಂಸ್ಥೆ ಮಹಾಕಾರ್ಯದರ್ಶಿಯ ಸೆಕ್ರೆಟಾರಿಯಟ್‌ನ ನಿಯೋಗಸಾಕು. ನಿಯೋಗ ಪ್ಯಾಲೆಸ್ತೇನಿಯನ್ನರ ಭದ್ರತಾ ಕ್ರಮಗಳನ್ನು ಸೂಚಿಸುವ ಅಗತ್ಯವಿಲ್ಲ ಎಂದು ಅದರ ಒತ್ತಾಯವಾಗಿತ್ತು. ಈ ವಿಷಯದಲ್ಲಿ ಅಮೇರಿಕ ರಾಜಕೀಯವಾಗಿ ಸಂಪೂರ್ಣವಾಗಿ ಒಂಟಿಯಾಗಿತ್ತು. ಆದರೂ ಇರಾಕ್ ಬಿಕ್ಕಟ್ಟಿನಿಂದೀಚೆಗೆ ಪ್ರದರ್ಶಿತವಾಗುತ್ತಿರುವ ಭದ್ರತಾ ಸಮಿತಿಯ ಐಕ್ಯತೆ ಮುರಿಯದಿರಲು ಒಮ್ಮತದ ನಿರ್ಣಯಕ್ಕೆ ಪ್ರಯತ್ನಿಸಲಾಯಿತು. ಅಲ್ಲದೆ ಅಮೇರಿಕದ ಮೇಲೆ ಈ ನಿರ್ಣಯ ಹೇರಿದರೆ, ಅದು ಅದನ್ನು ವಿಟೋ ಮಾಡುವುದು ಖಚಿತವಾಗಿತ್ತು. ಈ ಹಿಂದೆ ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಇಸ್ರೇಲನ್ನು ಖಂಡಿಸುವಂತೆ ಅಮೇರಿಕಾ 81 ಬಾರಿ ವಿಟೋ ಚಲಾಯಿಸಿದೆ. ಅಮೇರಿಕಾದ ಶ್ರೀಮಂತ ಝಿಯೋನಿಸ್ಟ್ ಲಾಬಿ ಅಷ್ಟು ಪ್ರಭಾವಶಾಲಿಯಾಗಿದೆ.

ಬ್ರಿಟನ್ ಕೊನೆಗೆ, ಒಂದು ಒಮ್ಮತದ ನಿರ್ಣಯವನ್ನು ತಯಾರಿಸಿತು. ಇದು ಅಮೇರಿಕದ ನಿಲುವಿಗೆ ಹತ್ತಿರವಾಗಿದ್ದರೂ, ಅದು ಇಸ್ರೇಲಿನ ಯಾವುದೇ ಕ್ರಮವನ್ನು 'ಖಂಡಿಸುವ' ನಿರ್ಣಯಕ್ಕೆ ಬೆಂಬಲ ನೀಡುತ್ತಿರುವುದು ಇದೇ ಮೊದಲ ಬಾರಿ. ಈಗ ಭದ್ರತಾ ಸಮಿತಿ ಅಂಗೀಕರಿಸಿರುವ ನಿರ್ಣಯದ ಪ್ರಕಾರ ವಿಶ್ವ ಸಂಸ್ಥೆ ಮಹಾಕಾರ್ಯದರ್ಶಿಯ ಸೆಕ್ರೆಟಾರಿಯಟ್ ಸದಸ್ಯರ ನಿಯೋಗ ಇಸ್ರೇಲಿಗೆ ಭೇಟಿ ನೀಡಲಿದೆ. ಅದು ಅಕ್ಟೋಬರ್ ಕೊನೆ ಒಳಗಾಗಿ ವರದಿ ಸಲ್ಲಿಸಬೇಕು. ಆದರೆ ಮೂರು ಸದಸ್ಯರ ನಿಯೋಗಕ್ಕೆ ಇಸ್ರೇಲಿಗೆ ಹೋಗಲು, ಅಲ್ಲಿನ ಸರಕಾರ ಪ್ರವೇಶ ನಿರಾಕರಿಸಿದೆ. ಮುಂದೆ ಭದ್ರತಾ ಸಮಿತಿ ಇಸ್ರೇಲ್‌ನ ಮೇಲೆ ಯಾವ ರೀತಿಯ ಒತ್ತಾಯ ತರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಈ ನಡುವೆ ಇರಾಕ್ ಇಸ್ರೇಲಿನ ಮೇಲೆ ಈ ನರಮೇಧಕ್ಕೆ ಪ್ರತಿಕಾರ ಮಾಡುವುದಾಗಿ ಬೆದರಿಸಿದೆ. ಕುವೈತ್ ಅತಿಕ್ರಮಣದ ರಾಜಕೀಯ ಪರಿಹಾರದಲ್ಲಿ, ಪ್ಯಾಲೆಸ್ತೇನ್, ಲೆಬನಾನ್ ಸೇರಿದಂತೆ ಮಧ್ಯ ಏಷ್ಯಾದ ಎಲ್ಲಾ ಅತಿಕ್ರಮಣಗಳ ರಾಜಕೀಯ ಪರಿಹಾರದ ಪ್ರಶ್ನೆ ಇದೆ. ಇಂತಹ ಆಧಾರದ ಮೇಲೆ ಕುವೈಟ್ ಸಮಸ್ಯೆಯನ್ನು ಬಗೆಹರಿಸುವ, ಫ್ರಾನ್ಸ್ ಮತ್ತು ಇಟಲಿಯ ಆಶ್ರಯದಲ್ಲಿ ಒಂದು ಅಂತರರಾಷ್ಟ್ರೀಯ ಸಮ್ಮೇಳನಕ್ಕಾಗಿ ಆ ದೇಶದ ನಾಯಕರುಗಳು ಪ್ರಯತ್ನಿಸುತ್ತಿದ್ದಾರೆ.

ಲೋಕಸಂಚಾರ

ಪಾಕಿಸ್ತಾನಕ್ಕೆ ಅಮೇರಿಕನ್ ನೆರವು ಕಡಿತ

ಈ ಅಮೇರಿಕನ್ ಆರ್ಥಿಕ ವರ್ಷದಿಂದ ಪಾಕಿಸ್ತಾನಕ್ಕೆ ಅಮೇರಿಕನ್ ನೆರವು ಕಡಿತವಾಗುವುದು ಹೆಚ್ಚುಕಡಿಮೆ ಖಂಡಿತವಾಗಿದೆ. ಅಮೇರಿಕನ್ ಕಾನೂನುಗಳ ಪ್ರಕಾರ . ಯಾವುದೇ ದೇಶಕ್ಕೂ ಮಿಲಿಟರಿ ಅಥವಾ ಇತರ ನೆರವು ಕೊಡಬೇಕಾದರೆ, ಪ್ರತಿ ವರ್ಷ ಅಮೇರಿಕಾದ ಅಧ್ಯಕ್ಷ ಆ ದೇಶ ಅಣ್ವಸ್ತ್ರ ತಯಾರಿಕೆಯಲ್ಲಿ ತೊಡಗಿಲ್ಲ ಎಂದು ಸರ್ಟಿಫಿಕೇಟು ಕೊಡಬೇಕು. ಇಂತಹ ಅಣ್ವಸ್ತ್ರಕ್ಕೆ ಭರದಿಂದ ತಯಾರಿ ನಡೆಸಿರುವ ಇಸ್ರೇಲ್ ಮತ್ತು ಪಾಕಿಸ್ತಾನಕ್ಕೆ ಈ ಸರ್ಟಿಫಿಕೇಟನ್ನು ಅಧ್ಯಕ್ಷರು ಹಲವಾರು ವರ್ಷಗಳಿಂದ ಕೊಡುತ್ತಾ ಬಂದಿದ್ದಾರೆ. ಆದರೆ ಈ ಆರ್ಥಿಕ ವರ್ಷದ ಆರಂಭದಲ್ಲಿ(-ಅಕ್ಟೋಬರ್ 1) ಅಧ್ಯಕ್ಷ ಬುಶ್‌ರಿಗೆ 'ಅಂಶಿಕ ಜ್ಞಾನೋದಯ'ವಾಗಿದ್ದು ಪಾಕಿಸ್ತಾನದ ಬಳಿ ಅಣ್ವಸ್ತ್ರಗಳು ಇಲ್ಲ ಎಂದು ಸರ್ಟಿಫಿಕೇಟ್ ಕೊಡಲು ನಿರಾಕರಿಸಿದ್ದಾರೆ. ಇದರಿಂದಾಗಿ ಪಾಕಿಸ್ತಾನ ಅಮೇರಿಕದಿಂದ ನಿರೀಕ್ಷಿಸಿದ್ದ ಸುಮಾರು 58 ಕೋಟಿ ಡಾಲರುಗಳ ಸಹಾಯಧನ, ಈ ವರ್ಷ ದೊರೆಯುವುದಿಲ್ಲ.

ಈ ನಿರ್ಧಾರದ ಬಗ್ಗೆ ಬಹಳಷ್ಟು ಆಶ್ಚರ್ಯ ವ್ಯಕ್ತಪಡಿಸಲಾಗುತ್ತಿದೆ. ಏಕೆಂದರೆ ಪಾಕಿಸ್ತಾನ ಈಗ ನಂಬಿಕಸ್ಥ, ಅಮೇರಿಕನ್ -ಪರ ದೇಶ. ಕೊಲ್ಲಿಗೆ ತನ್ನ ಸೇನೆ ಕಳಿಸಿದೆ. ಆದರೂ ಅಮೇರಿಕಕ್ಕೆ ಈ ದೇಶದಲ್ಲಿ ಸಂಪೂರ್ಣ ಕೈಗೊಂಬೆ ಸರಕಾರ ಬೇಕಾಗಿದೆ. ಇದಕ್ಕಾಗಿ ಈಗಿನ ತಾತ್ಕಾಲಿಕ ಸರಕಾರದ ಮೇಲೆ ಒತ್ತಡ ತಂದು ತನಗೆ ಬೇಕಾದ ನಿರ್ಣಯಗಳನ್ನು ಹೊರಡಿಸುವುದು, ಚುನಾವಣೆಯ ನಂತರ ಯಾವುದೇ ಸರಕಾರ ಬಂದರೂ ಇದಕ್ಕೆ ಬದ್ಧವಾಗಲೇಬೇಕಾದ ಪರಿಸ್ಥಿತಿ ನಿರ್ಮಿಸುವುದು–ಅಮೇರಿಕಾದ ಈ ತಿಪ್ಪರಲಾಗದ ಉದ್ದೇಶವಿರಬೇಕು ಎಂದು ಅಂದಾಜು ಮಾಡಲಾಗಿದೆ. ಇದಕ್ಕಾಗಿ ಪಾಕಿಸ್ತಾನದಲ್ಲಿ 'ಮುಕ್ತ ಮತ್ತು ನ್ಯಾಯಯುತ' ಚುನಾವಣೆಯ ಬಗೆಗೂ ಅಮೇರಿಕ ಹುಯಿಲೆಬ್ಬಿಸಲು ಆರಂಭಿಸಿದೆ.

ವಿಯೆಟ್ನಾಂ ಕಮ್ಯುನಿಸ್ಟ್ ನಾಯಕ ನಿಧನ

ವಿಯೆಟ್ನಾಂನ ಹಿರಿಯ ಕಮ್ಯುನಿಸ್ಟ್ ನಾಯಕ ಕಾಮ್ರೇಡ್ ಲೆ ದುಕ್ ಥೊ ತಮ್ಮ 79 ನೆಯ ವಯಸ್ಸಿನಲ್ಲಿ ನಿಧನರಾದರು. ಅವರು ವಿಯೆಟ್ನಾಂನ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ದ ಸದಸ್ಯರಾಗಿದ್ದರು.

ಕಾಂ.ಥೊ ಇಂಡೊ-ಚೀನಾ ಕಮ್ಯುನಿಸ್ಟ್ ಪಕ್ಷದ ಸ್ಥದಸ್ಯರಲ್ಲಿ ಒಬ್ಬರು. ಕಾ. ಹೋಚಿಮಿನ್ಹ್‌ರ ನಿಕಟ ಸಹವರ್ತಿಗಳಲ್ಲಿ ಒಬ್ಬರು.

ವಿಯೆಟ್ನಾಂನ ಹೋರಾಟ ನಡೆಯುತ್ತಿರುವಾಗಲೇ ಪ್ಯಾರಿಸ್ಸಿನಲ್ಲಿ ನಡೆಯುತ್ತಿದ್ದ ಶಾಂತಿ ಮಾತುಕತೆಗಳಲ್ಲಿ ಉತ್ತರ ವಿಯೆಟ್ನಾಂನ ನಿಯೋಗದ ಪ್ರಮುಖರಾಗಿ ಅವರು ಕೆಲಸ ಮಾಡಿದ್ದರು.196ರಿಂದ 1973ರವರೆಗೆ, 1975ರ ಕದನ ವಿರಾಮದಲ್ಲಿ ಕಾಮ್ರೇಡ್ ಥೋರ ಪಾತ್ರ ದೊಡ್ಡದು. ಅವರ ಈ ಪಾತ್ರಕ್ಕಾಗಿ 1973ರಲ್ಲಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಯಿತು. ಅಮೇರಿಕನ್ ವಿದೇಶ ಕಾರ್ಯದರ್ಶಿ ಹೆನ್ರಿ ಕಿಸಿಂಜರ್ ಜತೆ ಜಂಟಿಯಾಗಿ ಕಾಂ. ಥೋ ಈ ಪ್ರಶಸ್ತಿ ಸ್ವೀಕರಿಸಲಿಲ್ಲ.

ಮಂಡೇಲಾ ಭಾರತ ಭೇಟಿ............

ಭಾರತಕ್ಕೆ ಮಂಡೇಲಾರ ಭೇಟಿ ಭಾರತ ಮತ್ತು ದಕ್ಷಿಣ ಆಫ್ರಿಕಾದ ಅಂದೋಲನದ ನಡುವಿನ ಒಂದು ದೀರ್ಘ ಹಾಗೂ ನೀತಿಬದ್ಧ ಸಂಬಂಧವನ್ನು ನೆನಪಿಸಿಕೊಳ್ಳುವ, ವಿಸ್ತಾರ್ಯಂತ ವಸಾಹತುಶಾಹಿಗಳ ನಿರ್ನಾಮ ಹಾಗೂ ಜನಾಂಗ ಸಮಾನತೆಗಾಗಿ ಹೋರಾಟರೊಡನೆ ಸೌಹಾರ್ದಯುತೆಯನ್ನು ಮತ್ತೆ ದೃಢಪಡಿಸುವ ಒಂದು ಸಂದರ್ಭ........

..........ನಮ್ಮ ಸಮಾನ ಉದ್ದೇಶ ಹಾಗೂ ಹುರುಪಿನೊಂದಿಗೆ ವರ್ಣದ್ವೇಷದ ವಿರುದ್ಧ ಹೋರಾಟದ ಪ್ರತೀಕವಾದ ಈ ಮಹಾನ್ ಪುರುಷನನ್ನು ಭಾರತೀಯರು ಸ್ವಾಗತಿಸುತ್ತಾರೆ.

—ಟೈಂಸ್ ಆಫ್ ಇಂಡಿಯಾ

72 ವರ್ಷದ ಮಂಡೇಲಾ ಅವರ ವರ್ಣಭೇಧ ನೀತಿಯ ವಿರುದ್ಧದ ಸಮರ ಮುಗಿದಿಲ್ಲ. ಇನ್ನೂ ಸಾಗಬೇಕಾದ ದಾರಿ. ನಿವಾರಣೆಯಾಗಬೇಕಾದ ಅಡಚಣೆಗಳು. ಅದಕ್ಕೆ ಎಂದಿನಂತೆ ಭಾರತದ ನೈತಿಕ ಬೆಂಬಲ. ಭಾರತ ರತ್ನ ಪ್ರಶಸ್ತಿ ಈ ಬೆಂಬಲದ ಮೂರ್ತರೂಪ. ಅಷ್ಟು ಮಾತ್ರವಲ್ಲ ಮಂಡೇಲಾ ರೂಢಿಸಿಕೊಂಡಿರುವ ಬದುಕಿನ ಪರಮ ಮೌಲ್ಯಗಳಿಗೆ ಭಾರತ ಸಲ್ಲಿಸುವ ಶ್ರದ್ಧಾಪೂರ್ವಕ ಗೌರವ.

—ಕನ್ನಡ ಪ್ರಭ

ಭಾರತೀಯ ಜನತೆ ಮೂರು ದಶಕಗಳ ಸೆರೆವಾಸದಿಂದ ನೆಲ್ಸನ್ ಮಂಡೇಲಾ ಬಿಡುಗಡೆಯಾದಂದಿನಿಂದ ಎದುರು ನೋಡುತ್ತಿದ್ದ ಗಳಿಗೆಯಿದು.........

...ಮಂಡೇಲಾ ಸೆರೆಮನೆಯಲ್ಲಿದ್ದಾಗಲೇ ಭಾರತ ಅವರಿಗೆ ಜವಹರಲಾಲ್ ನೆಹರೂ ಶಾಂತಿ ಪ್ರಶಸ್ತಿ ನೀಡಿ ಗೌರವಿಸಿತ್ತು. ಈಗ ಅವರಿಗೆ ಮತ್ತೊಂದು ಗೌರವ ಸಲ್ಲಿಸಲಾಗಿದೆ--ಭಾರತ ರತ್ನ. ನಿಜವಾಗಿಯೂ ರತ್ನವೇ. ಭಾರತದಷ್ಟೇ ಅಲ್ಲ ಇಡೀ ಜಗತ್ತಿದ್ದು.......

ಮಂಡೇಲಾರಿಗೆ ಪ್ರಭುತ್ವದ ಮುಖ್ಯಸ್ಥರಿಗೆ ಸಲ್ಲುವ ಗೌರವ ನೀಡುವ ಭಾರತದ ನಿರ್ಧಾರ ಕರಿಯರ ಹೋರಾಟದಲ್ಲಿ ನಮ್ಮ ವಿಶ್ವಾಸದ ಒಂದು ಯೋಗ್ಯ ಅಭಿವ್ಯಕ್ತಿ.

—ಡೆಕ್ಕನ್ ಹೆರಾಲ್ಡ್

ಮಾನವನ ಅದಮ್ಯ ಹುರುಪು ಹಾಗೂ ಸ್ವಾತಂತ್ರ್ಯದ ಆಕಾಂಕ್ಷೆಯನ್ನು ಮಂಡೇಲಾರಂತೆ ಪ್ರತಿನಿಧಿಸುವವರು ನಮ್ಮ ಕಾಲದಲ್ಲಿ ಕೆಲವರಷ್ಟೇ. ದೀರ್ಘಕಾಲದ ಸೆರೆವಾಸ ಅವರಲ್ಲಿ [illegible] ಹುಟ್ಟಿಸಿಲ್ಲ, ದೃಢತೆ ಕುಂದಿಲ್ಲ. ಅಮೇರಿಕಾ ಭೇಟಿ ಕಾಲದಲ್ಲಿ ಅಲ್ಲಿನ ಸಾರ್ವಜನಿಕ ಅಭಿಪ್ರಾಯವನ್ನು ಎದುರುಹಾಕಿಕೊಳ್ಳುವ ಅಪಾಯವಿದ್ದರೂ ಹೆದರದೆ ಲಿಬ್ಯಾದ ಕರ್ನಲ್ ಗಡ್ಡಾಫಿ ಹಾಗೂ ಪಿ.ಎಲ್.ಓ.ದ ಯಾಸೆರ್ ಅರಾಫತ್‌ರೊಡನೆ ತಮ್ಮ ಸಂಬಂಧವನ್ನು ಕೃತಜ್ಞತೆಯಿಂದ [illegible] ನೆನಪಿಸಿಕೊಳ್ಳಿ.....

[illegible] ಅಂತಹ ವ್ಯಕ್ತಿಗಳು ಹೆಚ್ಚುಕಡಿಮೆ ಅಪರೂಪ-



[illegible] ದಾಗುತ್ತಿರುವ ಸ[illegible]ದಲ್ಲಿ ಗೌರವಿಸುವ ವಿಶೇಷ ಅವಕಾಶ ಭಾರತದ್ದು. ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನೊಡನೆ [illegible] ದೇಶದ ಆಳವಾದ ಸಂಬಂಧದಲ್ಲಿ ಇನ್ನೊಂದು ಮೈಲಿಗಲ್ಲು. ಬಹುಶ [illegible] ಮೈಲಿಗಲ್ಲು.

—[illegible] ಎಕ್ಸ್‌ಪ್ರೆಸ್

'ಭಾರತ ರತ್ನ' ಪ್ರಶಸ್ತಿ ಸ್ವೀಕಾರ

K R N M/ BGW - 293 MAG (2) PRB DECR 319 - 78/79

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಮಾವೇಶ

ಅಖಿಲ ಭಾರತ ಸಾರ್ವಜನಿಕ ಕ್ಷೇತ್ರದ ಸಿಬ್ಬಂದಿಯು ಕಾರ್ಮಿಕರ ಸಮಾವೇಶವನ್ನು ಡಿಸೆಂಬರ್ 19ರಿಂದ 21ರವರೆಗೆ ಬೆಂಗಳೂರು ವಿಶ್ವೇಶ್ವರಪುರಂ, ವಾಣಿವಿಲಾಸ ರಸ್ತೆಯಲ್ಲಿರುವ ವಾಸವಿ ಧರ್ಮಶಾಲೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಈ ಸಮಾವೇಶದಲ್ಲಿ ಸುಮಾರು 100 ಜನ ಪ್ರತಿನಿಧಿಗಳು ಭಾಗವಹಿಸುವರು. ಡಿ.19 ರಂದು ಸಾರ್ವಜನಿಕ ಕ್ಷೇತ್ರದ ಮಹಿಳಾ ಸಮಾವೇಶ ಹಾಗೂ ಡಿ.20-21 ರಂದು ನೌಕರರ ಸಮಾವೇಶ ನಡೆಯುತ್ತದೆ. ಇದರಲ್ಲಿ 100 ಜನ ಮಹಿಳಾ ಪ್ರತಿನಿಧಿಗಳು ಭಾಗವಹಿಸುತ್ತಾರೆ.

ಈ ಸಮಾವೇಶವನ್ನು ಯಶಸ್ವಿಯಾಗಿಸಲು ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಅದಕ್ಕೆ ಎಸ್.ಸೂರ್ಯನಾರಾಯಣರಾವ್ ಅಧ್ಯಕ್ಷರಾಗಿ, ವಿಜೆಕೆ ನಾಯರ್ ಪ್ರಧಾನ ಕಾರ್ಯದರ್ಶಿಯಾಗಿ, ಚಂದ್ರನ್, ಬಸಪ್ಪ, ಅಶ್ವತ್‌ನಾರಾಯಣ, ಟಿ.ಎಸ್.-ಮಣಿ, ಎಂ.ಎಂ. ರಾಜಮ್ಮ, ಮುನಿರೆಡ್ಡಿ, ಶ್ಯಾಮಣ್ಣ ರೆಡ್ಡಿ, ವಾರಿಯರ್, ಉಪಾಧ್ಯಕ್ಷರಾಗಿ., ವಿಭೂತಿಮಠ್, ಗೋಪಿನಾಥ್, ನಾರಾಯಣ ಸ್ವಾಮಿ, ಅರ್ಜುನನ್, ಉಡುಪ ಇವರು ಕಾರ್ಯದರ್ಶಿಗಳಾಗಿ.,- ಖಜಾಂಚಿಯಾಗಿ ಎ.ಇ.ಸುಬ್ರಮಣಿಯವರು ಕೆಲಸ ಮಾಡುತ್ತಾರೆ.

ನೊಬೆಲ್ ಶಾಂತಿ ಪ್ರಶಸ್ತಿ

ಪುಟ 1ರಿಂದ...

ಗೋರ್ಬಚೇವ್‌ರ ನಾಯಕತ್ವದಲ್ಲಿ ಸೋವಿಯತ್ ವಿದೇಶ ನೀತಿ, ಮತ್ತು ಶಾಂತಿಧಾಳಿ ಮೂರನೆಯ ಜಗತ್ತಿನಲ್ಲಿ ಪರಿಣಾಮ ಬೀರದೆ ಇಲ್ಲ. ನಮೀಬಿಯಾದ ಸ್ವಾತಂತ್ರ್ಯ, ಅಫ್ಘನ್ ಕದನದ ತೀವ್ರತೆಯಲ್ಲಿ ಕಡಿತ, ಕಾಂಬೋಡಿಯಾ ಮತ್ತು ಕೊರಿಯಾಗಳಲ್ಲಿ ಶಾಂತಿಯುತ ರೀತಿಯಲ್ಲಿ ಸಮಸ್ಯೆಗಳ ಪರಿಹಾರದ ಸಾಧ್ಯತೆ. ಇರಾನ್-ಇರಾಕ್ ಯುದ್ಧದ ಕೊನೆ, ನೆಲ್ಸನ್ ಮಂಡೆಲಾ ಬಿಡುಗಡೆ, ಈಗ ದ.ಆಫ್ರಿಕಾದಲ್ಲಿ ವರ್ಣಭೇಧ ವ್ಯವಸ್ಥೆ ಕೊನೆಯ ಸಾಧ್ಯತೆ-ಮುಂತಾದ ಬೆಳವಣಿಗೆಗಳೂ ಗೋರ್ಬಚೇವ್‌ರ 'ಶಾಂತಿ ಧಾಳಿ'ಯಿಂದ ಸೃಷ್ಟಿಯಾದ ಅಂತರರಾಷ್ಟ್ರೀಯ ಸನ್ನಿವೇಶದಲ್ಲಿ ಆಗಿರುವುದು. ಅದರ ನೇರ ಪರಿಣಾಮವೆಂದಲ್ಲ. ಗೋರ್ಬಚೇವ್ ಶಾಂತಿ ನೀತಿಯ ಇನ್ನೊಂದು ಪ್ರಮುಖ ಕೊಡುಗೆ ಎಂದರೆ ವಿಶ್ವ ಸಂಸ್ಥೆಯ ಮಹತ್ವ, ಪಾತ್ರವನ್ನು ಹೆಚ್ಚಿಸಿದ್ದು, ಇದರಿಂದ ಮುಂದಿನ ದಿನಗಳಲ್ಲಿ ಪ್ರಮುಖ ಬೆಳವಣಿಗೆ ಆಗಲಿದೆ. ಈಗ ಇರುವ ಮುಖ್ಯ ನಕಾರಾತ್ಮಕ ಬೆಳವಣಿಗೆ ಕೊಲ್ಲಿ ಬಿಕ್ಕಟ್ಟು-ಇದಕ್ಕೆ ಸತ್ವ ಪರೀಕ್ಷೆಯಾಗಲಿದೆ.

ನೊಬೆಲ್ ಶಾಂತಿ ಪ್ರಶಸ್ತಿಗೆ(ಇತರ ಪ್ರಶಸ್ತಿಗಳೂ) ಹಿಂದೆ 'ಸಾಮ್ರಾಜ್ಯಶಾಹಿ ಪರಿಕಲ್ಪನೆಯ ' ಶಾಂತಿ' ಗೆ ದುಡಿದವರಿಗೆ ಕೊಡುವ ಸಂಪ್ರದಾಯ ಇದೆ. ಕಿಸಂಜರ್, ಕಾರ್ಟರ್, ಇತ್ತೀಚೆಗ ದಲೈಲಾಮಾರಿಗೆ ಕೊಟ್ಟ ಪ್ರಶಸ್ತಿ ಇದಕ್ಕೆ ಉದಾಹರಣೆ. ಪೂರ್ವ ಯೂರೋಪಿನಲ್ಲಿ ಸಮಾಜವಾದಿ ಜಗತ್ತಿನ ಮೇಲೆ ಹೆಚ್ಚಿರುವ ಅಮೇರಿಕಾದ ಹಿಡಿತ, ಒಟ್ಟಾರೆ ಸಮಾಜವಾದಿ ಸರಕಾರಗಳ ಪತನ, ಮೂರನೇ ಹಿನ್ನಡೆ-ಇದೇ ಶಾಂತಿ ನೀತಿಯ ಫಲ. ಅದಕ್ಕಾಗಿ ಸಾಮ್ರಾಜ್ಯಶಾಹಿ ಗೋರ್ಬಚೇವ್‌ರಿಗೆ ಆಭಾರಿಯಾಗಿದ್ದೇನೆ ಎಂದು ಹೆಜ್ಜೆ ಹೆಜ್ಜೆಗೂ ಪ್ರದರ್ಶಿಸುತ್ತಿದೆ. ಗೋರ್ಬಚೇವ್‌ರವರಿಗೆ ಶಾಂತಿ ಪ್ರಶಸ್ತಿ ನೀಡುವಲ್ಲಿ ಇದೂ ಮುಖ್ಯ ಪಾತ್ರ ವಹಿಸಿದೆ ಎಂಬುದನ್ನು ನಾವಂತೂ ಮರೆಯುವಂತಿಲ್ಲ. ಈ ಹಿಂದೆ ಪಾಬ್ಲೆ ನೆರೂಡ, ಮಾಖಾಯಿಲ್ ಶೊಲೋಖೊವ್, ಗಾರ್ಶಿಯಾ ಮಾರ್ಕ್ವೇಸ್ ಆಕ್ಟೇವಿಯಾಪಾಜ್‌ನಂತಹ ಮಹಾನ್ ಜನಪರ ಸಾಹಿತಿಗಳಿಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ ದೊರೆತಾಗ– ಈ ಪ್ರಶಸ್ತಿಯನ್ನು ಇವರಿಗೆ ಕೊಡದಿದ್ದರೆ ಪ್ರಶಸ್ತಿಯೇ ಅಪಮೌಲ್ಯಗೊಳ್ಳುತ್ತದೆ ಎನ್ನುವಂತಾದಾಗ ಮಾತ್ರ ದೇಶದೇಶದ ಜನ ಈ ಬಗ್ಗೆ ಟೀಕಿಸಿದಾಗ ಮಾತ್ರ ಅವರಿಗೆ ದೊರೆತಿದೆ. ಗೋರ್ಬಚೇವ್‌ರವರಿಗೆ ನೀಡಿದ ಶಾಂತಿ ಪ್ರಶಸ್ತಿಯ ವಿಷಯದಲ್ಲಿಯೂ ಈ ಮಾತು ಸತ್ಯ. ಇವರಿಗಲ್ಲದೆ ಇನ್ನಾರಿಗಾಗಿ ಈ ಶಾಂತಿ ಪ್ರಶಸ್ತಿ ಎಂಬ ಮಾತು ಈಗಾಗಲೇ ನಾಲ್ಕಾರು ವರ್ಷಗಳಿಂದ ಕೇಳಿ ಬರುತ್ತಿದ್ದಾಗಲೂ ದಲೈಲಾಮಾನಂತಹ ದೇಶದ್ರೋಹಿಗೆ ನೀಡಿ ತನ್ನದೇ ರಾಜಕೀಯವನ್ನು ಮಾಡುತ್ತಿತ್ತು ಎಂಬುದನ್ನು ಮರೆಯದಿರೋಣ.

ಗೋರ್ಬಚೇವ್ ಜಗತ್ತಿನ ಬಹುಸಂಖ್ಯಾತ ಜನತೆ 'ವಿಶ್ವ ಶಾಂತಿ' ಎಂದು ತಿಳಿದಿರುವ ಶಾಂತಿಗೆ ಭಾರಿ ಕೊಡುಗೆ ಕೊಟ್ಟಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ.- ನೊಬೆಲ್ ಸಮಿತಿ ಈ ಪ್ರಶಸ್ತಿನೀಡುವ ಮೂಲಕ ಅದರ ಕಳೆ ಏರಿದೆ. ಮನುಕುಲದ ಶಾಂತಿ ಪ್ರಿಯ ಜನತೆಯ 'ಶಾಂತಿ' ಯತ್ತ ದಾಪುಗಾಲಿನ ಹೆಜ್ಜೆಯಿಡುತ್ತಾ ನಡೆಯಲಿ.

ಈ ವಾರ

* ಬೀಜಿಂಗ್ ಏಷ್ಯಾಡ್‌ನ ಅನುಭವದ ಆಧಾರದ ಮೇಲೆ ದೇಶದ ಇಡೀ ಕ್ರೀಡಾ ವ್ಯವಸ್ಥೆಯ ಬಗ್ಗೆ ಭಾರತೀಯ ಕ್ರೀಡಾ ಪ್ರಾಧಿಕಾರ ಆಲೋಚಿಸಬೇಕು.

ಭಾರತದಲ್ಲಿ ಕ್ರೀಡೆಯ ಅಭಿವೃದ್ಧಿಗಾಗಿನ ಯಾವುದೇ ಗಂಭೀರ ಪ್ರಯತ್ನ ಬೀಡಿಂಗ್‌ನಲ್ಲಿ ಭಾರತದ ತಂಡದ ಅನುಭವವನ್ನು ಕಡೆಗಣಿಸಲು ಆಗದು.

ಚೀನಿ ಅಥ್ಲೇಟ್‌ಗಳನ್ನು ಉನ್ನತ ವೈಜ್ಞಾನಿಕ ಧೋರಣೆ ಮೂಲಕ ಆರಿಸಲಾಗಿತ್ತು. ಸಾಮರ್ಥ್ಯ ಅಥವಾ ಬದ್ಧತೆಯ ಬಗ್ಗೆ ಯಾವುದೇ ರಾಜಿ ಇರಲಿಲ್ಲ ಎನ್ನುವುದನ್ನು ನಾನಲ್ಲಿ ಕಂಡೆ.

—ಬಿ.ಜೆ.ಗೋವಿಂದನ್ ನಾಯರ್,
ಕೇರಳ ಕ್ರೀಡಾ ಪರಿಷತ್ ಅಧ್ಯಕ್ಷ

* ಸೋವಿಯತ್.ಅಧ್ಯಕ್ಷರು(ಗೊರ್ಬಚೇವ್) ಮಾಸ್ಕೋ ನಗರದಲ್ಲಿರುವ ಫ್ಲಾಟ್‌ನಲ್ಲಿ ನೆಲಸಿದ್ದಾರೆ. ಅವರಿಗಾಗಲಿ , ಅವರ ಕುಟುಂಬದವರಿಗಾಗಲಿ ಯಾವುದೇ ಖಾಸಗಿ ಮನೆ ಇಲ್ಲ. ಆದರೆ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ, ಸರಕಾರದ ಮುಖ್ಯಸ್ಥನಾಗಿ ಅವರಿಗೆ ಸರಕಾರದ ವತಿಯಿಂದ ದೊರಕಿರುವ ಹಳ್ಳಿ ಮನೆಯಿದೆ.

79ರ ಇಳಿ ವಯಸ್ಸಿನಲ್ಲಿರುವ ಗೊರ್ಬಚೆವ್‌ರ ತಾಯಿ ಮರಿಯಾ ಪಾಂತೆಲೆಯವ್ನಾ ಹಳ್ಳಿಯಲ್ಲಿ ತಮ್ಮ ಕುಟುಂಬದ ಮೂಲಮನೆಯಲ್ಲಿ ನೆಲೆಸಿದ್ದಾಳೆ. ಈ ಮನೆಯ ನಿರ್ವಹಣೆಗೆ ಸರಕಾರದ ಬೊಕ್ಕಸದಿಂದ ಅಥವಾ ಪಾರ್ಟಿ ಬಜೆಟ್‌ನಿಂದ ಒಂದು ಕೊಪೆಕ್ ಸಹಾ ಖರ್ಚಾಗುವುದಿಲ್ಲ.

—ಅರುಣ, ಸಂಯುಕ್ತ ಕರ್ನಾಟಕ
ಸಾಪ್ತಾಹಿಕ ಸೌರಭ ಲೇಖನದಲ್ಲಿ,
ಅಕ್ಟೋಬರ್ 14

* ಆರ್.ಕೆ.ಪುರಂ ಶಾಲೆಯಲ್ಲಿ 14 ವರ್ಷದ ವಿದ್ಯಾರ್ಥಿನಿ ಪ್ರವೀಣ್ ಕೌರಳನ್ನು ಇಬ್ಬರು ಹುಡುಗರು ಬೆಂಕಿ ಹಚ್ಚಿ ಸಾಯಿಸುವ ಮೂಲಕ ರಾಜಧಾನಿಯಲ್ಲಿ (ದಿಲ್ಲಿ) ಮೀಸಲಾತಿ ವಿರೋಧಿ ಚಳುವಳಿ ಇಂದು (ಅ.9)ತೀರಾ ಹೇಸಿಗೆಯ ಹಾಗೂ ಅಪಾಯಕಾರಿ ತಿರುವು ಪಡೆಯಿತು.

–ದಿ ಹಿಂದೂಸ್ಥಾನ್ ಟೈಮ್ಸ್ ವರದಿ, ಅ.10

* ಉದ್ಯೋಗದಲ್ಲಿ ಮೀಸಲಾತಿ ನೀತಿ ಪ್ರತಿಭಟಿಸಲು ಆತ್ಮಾಹುತಿಯನ್ನು ಒಂದು ಮಾರ್ಗವನ್ನಾಗಿ ಮಾಡಿಕೊಳ್ಳಬಾರದು ಎಂದು ರಾಷ್ಟ್ರಪತಿ ಆರ್. ವೆಂಕಟರಾಮನ್ ದಿಲ್ಲಿ ವಿ.ವಿ.ಯ ವಿದ್ಯಾರ್ಥಿಗಳ ನಿಯೋಗವೊಂದಕ್ಕೆ ಬುಧವಾರ ಸಲಹೆ ನೀಡಿರುವುದು ಶ್ಲಾಘನೀಯವಾಗಿದೆ.

.......ಉತ್ತರ ಭಾರತದ ಹಲವಾರು ನಗರಗಳಿಂದ ಪ್ರತಿದಿನ ಬರುತ್ತಿರುವ ಆತ್ಮಾಹುತಿ ಪ್ರಕರಣದ ವರದಿಗಳು ಅಪಾಯಕಾರಿ ರೋಗವೊಂದರ ಲಕ್ಷಣವಾಗಿದೆ.

ಆತ್ಮಾಹುತಿಗೆ ಸಮರ್ಥನೆ ನೀಡಲು ಯಾರಾದರೂ ಯಾವುದೇ ಮಾರ್ಗ ಬಳಸಲಿ, ಆತ್ಮಾಹುತಿ ಎಷ್ಟು ಮಾತ್ರಕ್ಕೂ ಸ್ವೀಕಾರಾರ್ಹವಲ್ಲ ಮತ್ತು ಅಮಾನವೀಯವಾದುದು.

-ದಿ ಹಿಂದೂಸ್ಥಾನ್ ಟೈಮ್ಸ್
ಸಂಪಾದಕೀಯ , ಅಕ್ಟೋಬರ್10

* ಸಂವಿಧಾನದಲ್ಲಿ ಅವಕಾಶವಿಲ್ಲವಾದರೂ ಅದಕ್ಕೆ ಸೂಕ್ತ ಕ್ರಮವಹಿಸಿ ಪಂಜಾಬ್‌ನಲ್ಲಿ ಆಡಳಿತದ ಮೇಲೆ ಸೂಕ್ತ ಹತೋಟಿ ಇರಿಸಲು ವಿವಿಧ ರಾಜಕೀಯ ಶಕ್ತಿಗಳ ಸಲಹಾ ಸಮಿತಿ ರಚಿಸಬೇಕೆಂಬ ಸಿಪಿಐ(ಎಂ) ಸೂಚನೆಯನ್ನು ಸರಕಾರ. ಪರಿಶೀಲಿಸಬಹುದಾಗಿದೆ.

——ಅಕ್ಟೋಬರ್ 13
'ಕನ್ನಡಪ್ರಭ' ಲೇಖನದಲ್ಲಿ

ಬಾಲಂಗೋಚಿ

ರಾಜೀವ್ ಗಾಂಧಿಯವರ ಹೆಸರಿನಲ್ಲಿ ನಾವು ಗೆದ್ದು ಬಂದಿದ್ದೇವೆ. ಅವರೇ ನಮ್ಮ ನಾಯಕರು ಎಂದು ಹೇಳಿಕೊಳ್ಳಲು ನಮಗೆ ನಾಚಿಕೆಯಿಲ್ಲ.

-ಕಾಗೋಡು ತಿಮ್ಮಪ್ಪ
ಕಾಂಗ್ರೆ ಶಾಸಕಾಂಗ ಪಕ್ಷದ ಸಭೆಯಲ್ಲಿ

ಓಹೋ! ಇದು ಕಾಗೋಡು ಗ್ಲಾಸ್‌ನಾಸ್ತ್(ಮುಕ್ತತೆ) ಇರಬಹುದೇ!

'ಸಿರಿವಂತರಿಂದ ಸಂಪನ್ಮೂಲ ಸಂಗ್ರಹಿಸಿ'

ಸೀಮೆಎಣ್ಣೆ ಮೇಲೆ 25 ಶೇಕಡಾ ಸರ್‌ಚಾರ್ಜ್ ಮಾಡಬಾರದಾಗಿದ್ದ ಕ್ರಮ ಎಂದು ಸಿಪಿಐ(ಎಂ) ಪೋಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಕಳೆದ ಕೆಲವು ತಿಂಗಳಿಂದ ಭಾರತೀಯ ಜನತೆ ತೀವ್ರ ಬೆಲೆಏರಿಕೆಯಿಂದ ನರಳುತ್ತಿದ್ದಾರೆ. ಹಿಂದಿನ ಕಾಂಗ್ರೆ ಸರಕಾರದ ಜನ-ವಿರೋಧಿ ಧೋರಣೆಗಳು ಸೃಷ್ಟಿಸಿದ ತೀವ್ರ ಆರ್ಥಿಕ ಸ್ಥಿತಿಯ ಫಲವಿದು. ರಾಷ್ಟ್ರೀಯ ರಂಗ ಸರಕಾರ ಈ ಧೋರಣೆಗಳನ್ನು ಬದಲಿಸಲು ನಿರಾಕರಿಸಿರುವುದರಿಂದ ಈ ಸ್ಥಿತಿ ಮತ್ತಷ್ಟು ಹದಗೆಟ್ಟಿದೆ.

ಈ ಕಷ್ಟದ ಸ್ಥಿತಿಯಲ್ಲಿ ಕೊಲ್ಲಿಯ ಬಿಕ್ಕಟ್ಟು ಇನ್ನಷ್ಟು ಹೊರೆ ಹಾಕಿ ಬೆನ್ನು ಮುರಿದಿದೆ. ತೈಲ ಬೆಲೆಗಳು 16 ಡಾಲರುಗಳಿಂದ 40 ಡಾಲರುಗಳಿಗೆ ನಾಗಾಲೋಟ ಹೂಡಿದ್ದರಿಂದ ಉಂಟಾದ ಸ್ಥಿತಿಯಿದು. ಕುವೈಟ್, ಇರಾಕ್‌ನಿಂದ ಭಾರತೀಯರ ಹಣರವಾನೆ ನಿಂತು ಮತ್ತಷ್ಟು ನಷ್ಟವಾಗಿದೆ. ವಿದೇಶಿ ವಿನಿಮಯ ಸ್ಥಿತಿ ಅಪಾಯಕಾರಿಯಾಗಿದ್ದು ಆರ್ಥಿಕ ಅಭಿವೃದ್ಧಿಯ ಯೋಜನೆಗಳಿಗೆ ಸಂಚಕಾರ ತಂದಿದೆ.

ಭಾರತದ ಹತೋಟಿಗೆ ಮೀರಿದ ಈ ಹೊರಗಣ ಕಾರಣಗಳಿಂದಾಗಿ ಕೇಂದ್ರ ಸರಕಾರ ಅಡಿಗೆ ಅನಿಲ ಬಿಟ್ಟು ಎಲ್ಲಾ ಪೆಟ್ರೋಲಿಯಂ ಉತ್ಪಾದನೆಗಳ ಮೇಲೆ 25 ಶೇಕಡಾ ಸರ್‌ಚಾರ್ಜ್ ಹೇರಿದೆ. ಇದು ಇನ್ನಷ್ಟು ಹಣದುಬ್ಬರಕ್ಕೆ ಕಾರಣವಾಗುತ್ತದೆ ನಿಜ. ಈ ಹೆಚ್ಚಿನ ಹೊರೆ ಶ್ರೀಮಂತ ವಿಭಾಗಗಳ ಮೇಲೆ ಬೀಳುವಂತೆ ಮಾಡಿ, ಈಗಾಗಲೇ ಜೀವನ ನಡೆಸುವುದೇ ದುಸ್ತರವಾಗಿರುವ ಬಡವಿಭಾಗಗಳನ್ನು ರಕ್ಷಿಸುವುದು ಸರಕಾರದ ಕರ್ತವ್ಯ ಎಂದಿರುವ ಪೋಲಿಟ್‌ಬ್ಯೂರೋ ಬಡಜನರು ಬಳಸುವ ಸೀಮೆಎಣ್ಣೆಯ ಮೇಲೆ ಸರ್‌ಚಾರ್ಜ್ ಹಾಕಿದುದನ್ನು ವಿರೋಧಿಸಿದೆ.

ಕಂಪನಿಗಳ ಮೇಲೆ ತೆರಿಗೆಯನ್ನು 7 ಶೇಕಡಾ ಏರಿಸಿರುವುದು ಸರಿಯಾದ ದಿಕ್ಕಿನಲ್ಲಿರುವ ಕ್ರಮ ಎಂದಿರುವ ಪಿ.ಬಿ. ಆದರೆ ಇದು ಸಾಕಷ್ಟು ಪ್ರಮಾಣದಲ್ಲಿಲ್ಲ ಎಂದಿದೆ. ದೊಡ್ಡ ಬಂಡವಳಿಗರಿಂದ, ಶ್ರೀಮಂತರಿಂದ ಸಂಪನ್ಮೂಲಗಳನ್ನು ಸಂಗ್ರಹಿಸಲು ಇನ್ನಷ್ಟು ಕ್ರಮ ಅಗತ್ಯವಿತ್ತು ಎಂದು ಅದು ಅಭಿಪ್ರಾಯ ಪಟ್ಟಿದೆ.

ತೈಲ ಬೆಲೆಗಳ ಏರಿಕೆಯಿಂದಾಗಿ ಹೆಚ್ಚುವ ಖೋತಾವನ್ನು ತಡೆಗಟ್ಟಲು ತೆರಬಲ್ಲ ಶ್ರೀಮಂತರು ಹೆಚ್ಚು ತೆರುವಂತೆ ಆರ್ಥಿಕ ನಿರ್ವಹಣೆಯ ದೊಡ್ಡ ಹೊಣೆ ಕೇಂದ್ರ ಸರಕಾರದ ಮೇಲಿದೆ ಎಂದಿರುವ ಪಿ.ಬಿ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಿ ಬೆಲೆ ಮಟ್ಟ ಕಾಪಾಡಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಒಂದು ತಿಂಗಳಲ್ಲಿ ಪರಿಸ್ಥಿತಿಯ ಮರುವಿಮರ್ಶೆ ನಡೆಸಿ ಜನಗಳ ಸಂಕಷ್ಟಗಳನ್ನು ಹಗುರಗೊಳಿಸಲು ಸೂಕ್ತ ಹೊಂದಾಣಿಕೆ ಕೈಗೊಳ್ಳಬೇಕೆಂದು ಪಿ.ಬಿ. ಮನವಿ ಮಾಡಿದೆ.



ಕೃಪೆ ಹಿಂದೂ

Pri[illegible]shed by P.Ramachandra Rao' on behalf of Communist Party of India [illegible]